# ದೆಹಲಿ ಕರ್ನಾಟಕ ಸಂಘದ

# ಅಭಿಮತ

ಅಗಸ್ಟ್ 2025 । ಬೆಲೆ ರೂ.1



## ಸ್ವಾತಂತ್ರ್ಯೋತ್ಸವ ಸಂಭ್ರಮಿಸಿದ ದೆಹಲಿ ಕನ್ನಡಿಗರು



ಡಾ. ಬಿ.ಸಿ. ರಾಯ್ ಸ್ಮಾರಕ ರಾಷ್ಟ್ರೀಯ ಸಮುದಾಯ ಸೇವಾ ಪ್ರಶಸ್ತಿ ಪುರಸ್ಕೃತ ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು ಅವರಿಗೆ ಸನ್ಮಾನ




2025ರ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತೆ ಶ್ರೀಮತಿ ಬಾನು ಮುಷ್ತಾಕ್ ಅವರಿಗೆ ಅಭಿನಂದನೆ

# ದೆಹಲಿ ಕರ್ನಾಟಕ ಸಂಘದಲ್ಲಿ ದೇಶಭಕ್ತಿಯೊಂದಿಗೆ
# 79ನೇ ಸ್ವಾತಂತ್ರ್ಯ ದಿನಾಚರಣೆ

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ 78 ವರ್ಷಗಳಾಗಿದ್ದು ಸಮಸ್ತ ಭಾರತೀಯರು ಈ ಸಂಭ್ರಮದ ದಿನವನ್ನು ಪ್ರತಿ ವರ್ಷ ಆಗಸ್ಟ್ 15 ರಂದು ರಾಷ್ಟ್ರ ಧ್ವಜ ಹಾರಿಸಿ ಭಾರತ ಮಾತೆಗೆ ವಂದನೆ ಸಲ್ಲಿಸುವುದರೊಂದಿಗೆ ಆಚರಿಸುತ್ತಾರೆ. ದೆಹಲಿ ಕರ್ನಾಟಕ ಸಂಘದಲ್ಲಿಯೂ ಸಹಾ ಪ್ರತಿ ವರ್ಷ, ರಾಷ್ಟ್ರ ಧ್ವಜಾರೋಹಣ ಮಾಡಿ, ರಾಷ್ಟ್ರಗೀತೆಯನ್ನು ಹಾಡುತ್ತಾ ಈ ದಿನವನ್ನು ದೇಶಭಕ್ತಿಭಾವದಿಂದ ಸಂಭ್ರಮಿಸಲಾಗುತ್ತಿದೆ.



ಅದರಂತೆ ಈ ವರ್ಷವೂ ದಿನಾಂಕ 15.08.2025 ರಂದು ನವದೆಹಲಿಯ ಆರ್.ಕೆ. ಪುರಂನ ಸರ್. ಎಂ. ವಿಶ್ವೇಶ್ವರಯ್ಯ ಮೋತಿಭಾಗ್ ಮೆಟ್ರೋ ಸ್ಟೇಷನ್ ಬಳಿ ಇರುವ ಸಂಘದ ಸಾಂಸ್ಕೃತಿಕ ಸಮುಚ್ಚಯದ ಆವರಣದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ಮೈಸೂರಿನಿಂದ ಆಗಮಿಸಿದ್ದ ಪ್ರಖ್ಯಾತ ಲೇಖಕಿ, ಸಾಹಿತಿ, ಕವಯಿತ್ರಿ ಡಾ. ಲತಾರಾಜಶೇಖರ್ ಮತ್ತು ರಾಜಶೇಖರ್ ಆಸ್ಪತ್ರೆಯ ಅಧ್ಯಕ್ಷರೂ ಹಾಗು ಪ್ರಸಿದ್ಧ ಮಕ್ಕಳ ವೈದ್ಯರಾದ ಡಾ. ಎಚ್.ಬಿ. ರಾಜಶೇಖರ್ ಅವರು ಆಗಮಿಸಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅತಿಥಿಗಳಿಗೆ ಹಾಗು ನೆರೆದಿದ್ದ ದೆಹಲಿ ಕನ್ನಡಿಗರಿಗೆ ಆತ್ಮೀಯ ಸ್ವಾಗತ ಕೋರುತ್ತಾ ದೇಶದ 79ನೇ ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳನ್ನು ತಿಳಿಸಿದರು. ಪ್ರತಿ ವರ್ಷ ಸಂಘವು ರಾಷ್ಟ್ರೀಯ ಉತ್ಸವ ದಿನಗಳಲ್ಲಿ ಇಲ್ಲಿನ ಕನ್ನಡಿಗರ ಜೊತೆ ಸೇರಿ ಧ್ವಜಾರೋಹಣ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದು ಈ ವರ್ಷವೂ ನಾಡಿನ ಪ್ರಸಿದ್ಧ ಲೇಖಕಿ ಕವಯಿತ್ರಿ ಹಾಗು ಹಲವು ಮಹಾ ಕಾವ್ಯಗಳನ್ನು ಬರೆದಿರುವ ಸಾಹಿತಿ ಡಾ. ಲತಾರಾಜಶೇಖರ್ ಹಾಗೂ ಅವರ ಪತಿ ಡಾ. ರಾಜಶೇಖರ್ ಅವರುಗಳು ಮುಖ್ಯ ಅತಿಥಿಗಳಾಗಿ ಇಂದು ನಮ್ಮೊಂದಿಗಿರುವುದು ನಮ್ಮ ಸೌಭಾಗ್ಯ. ಡಾ. ಲತಾರಾಜಶೇಖರ್ ಅವರು ಸಂಘದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲೂ ಈ ಹಿಂದೆ ಭಾಗವಹಿಸಿದ್ದು ತಾವು ಬರೆದ ಏಳು ಮಹಾಕಾವ್ಯಗಳನ್ನು ಸಂಘಕ್ಕೆ ಕೊಡುಗೆಯಾಗಿ ನೀಡಿರುತ್ತಾರೆ. ಅವರಿಗೆ ಸಂಘದ ಪರವಾಗಿ ಧನ್ಯವಾದಗಳನ್ನು ವ್ಯಕ್ತಪಡಿಸುತ್ತೇನೆ ಹಾಗು ಭಾಗಿಯಾದ ಅದರಲ್ಲೂ ಎಲ್ಲರಿಗೂ ವಿಶೇಷವಾಗಿ ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಅಧ್ಯಕ್ಷರು ಮತ್ತು ಸದಸ್ಯೆಯರಿಗೆ ಹಾಗು ನೆರೆದಿರುವ ಎಲ್ಲಾ ಕನ್ನಡಿಗರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ಅಧ್ಯಕ್ಷರು ಹೇಳಿದರು.



ಶ್ರೀಮತಿ ಡಾ. ಲತಾರಾಜಶೇಖರ್ ಅವರು ಧ್ವಜಾರೋಹಣ ನಡೆಸಿದ ನಂತರ ಎಲ್ಲರೂ ರಾಷ್ಟ್ರಗೀತೆ ಹಾಡುತ್ತಾ ರಾಷ್ಟ್ರ ಧ್ವಜಕ್ಕೆ ಗೌರವ ಸಲಾಮು ನೀಡಿದರು ಹಾಗು ಭಾರತ ಮಾತೆ ಮತ್ತು ಕರ್ನಾಟಕ ಮಾತೆಯ ಭಾವಚಿತ್ರಗಳಿಗೆ ಪುಷ್ಪಾರ್ಚನೆಯೊಂದಿಗೆ ನಮನ ಸಲ್ಲಿಸಿದರು. ಡಾ. ಲತಾ ರಾಜಶೇಖರ್ ಅವರು ಮಾತನಾಡಿ ದೆಹಲಿ ಕನ್ನಡಿಗರ ಜೊತೆ ಇಂದಿನ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿರುವುದು ತಮಗೆ ಅತ್ಯಂತ ಸಂತೋಷ ತಂದಿದೆ, ಆಗಸ್ಟ್ 15, 1947 ರಂದು ನಮಗೆ ಸ್ವಾತಂತ್ರ್ಯ ತಂದು ಕೊಡಲು ಅನೇಕ ಹೋರಾಟಗಾರರು ಬಲಿದಾನ ನೀಡಿದ್ದಾರೆ. ಅವರನ್ನು ನಾವೆಲ್ಲಾ ಸ್ಮರಿಸೋಣ, ನಾಲ್ಕನೇ ಮುಂದುವರಿದ ದೇಶ ಭಾರತವಾಗಿದ್ದು ವಿಕಸಿತ ಭಾರತದ ಕಲ್ಪನೆಯೊಂದಿಗೆ ದೇಶವು ಮುನ್ನಡೆಯುತ್ತಿದೆ. ಕ್ರಿಯಾಶೀಲರಾದ ಶ್ರೀ ಸಿ.ಎಂ. ನಾಗರಾಜ ಅವರು ಎರಡನೇಯ ಬಾರಿ ಸಂಘದ ಅಧ್ಯಕ್ಷರಾಗಿರುವುದು ಬಹಳ ಸಂತೋಷದ ವಿಷಯ ಹಾಗೂ ಅವರ ನೇತೃತ್ವದಲ್ಲಿ ದೆಹಲಿ ಕರ್ನಾಟಕ ಸಂಘವು ಕರ್ನಾಟಕಕ್ಕೆ ಹೆಮ್ಮೆ ತರುವಂತಹ, ಸರ್ಕಾರವೂ ಮಾಡದಂತಹ ಹಲವಾರು ಉತ್ತಮ ಕೆಲಸಗಳನ್ನು ಮಾಡುತ್ತಿದೆ. ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ಮೋದಿಯವರು ಶ್ರೀ ಸಿ.ಎಂ. ನಾಗರಾಜ ಅವರ ಕಾರ್ಯವನ್ನು ಮೆಚ್ಚಿ ಬೆನ್ನು ತಟ್ಟಿದ್ದನ್ನು ಆ ಸಂದರ್ಭದಲ್ಲಿ ಭಾಗಿಯಾಗಿದ್ದ ನಾನು ಕಣ್ಣಾರೆ ಕಂಡಿದ್ದೇನೆ. ಅವರ ದಕ್ಷತೆ ಮತ್ತು ಉತ್ಸಾಹ ನಿಬ್ಬೆರಗಾಗುವಂತಹದ್ದು. ದೆಹಲಿಯಲ್ಲಿ ಕನ್ನಡದ ಸಂಚಲನ ನಡೆಸುತ್ತಿರುವ ಇಲ್ಲಿನ ಕನ್ನಡ ಬಳಗಕ್ಕೆ, ಕರ್ನಾಟಕ ಸಂಘಕ್ಕೆ ಸ್ವಾತಂತ್ರ್ಯೋತ್ಸವದ ಶುಭಾಶಯಗಳು ಹಾಗೂ ಈ ಅವಕಾಶ ನೀಡಿದ್ದಕ್ಕೆ ಧನ್ಯವಾದಗಳು ಎಂದರು. ಪ್ರಸಿದ್ಧ ವೈದ್ಯರಾದ ಅವರ ಪತಿ ಡಾ. ರಾಜಶೇಖರ್ ಅವರು ಮಾತನಾಡಿ ದೇಶದ ಬಗ್ಗೆ ವಿಶಾಲದೃಷ್ಟಿಯೊಂದಿಗೆ ವಂದೇ ಭಾರತ ನಯಾ ಭಾರತದ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳನ್ನು ಎಲ್ಲರಿಗೂ ತಿಳಿಸಿದರು.



ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗು ಉತ್ತಮ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಭಾಗವಹಿಸಿದ್ದರು. ಕೊನೆಯಲ್ಲಿ ಸಂಘದ ಖಜಾಂಚಿ ಶ್ರೀಮತಿ ಆಶಾಲತಾ ಎಂ. ಅವರು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗಿಯಾದ ಮುಖ್ಯ ಅತಿಥಿಗಳಿಗೆ ಹಾಗೂ ನೆರೆದಿದ್ದ ಎಲ್ಲಾ ದೆಹಲಿ ಕನ್ನಡಿಗರಿಗೆ ಸಂಘದ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು. ನಂತರ ಅತಿಥಿಗಳೊಂದಿಗೆ ಸಮೂಹ ಭಾವ ಚಿತ್ರಗಳನ್ನು ತೆಗೆದುಕೊಂಡು ಬೆಳಗ್ಗಿನ ಉಪಹಾರ ಸವಿಯುತ್ತಾ ದೇಶದ ಸ್ವಾತಂತ್ರ್ಯೋತ್ಸವದ ಸಂತಸವನ್ನು ಎಲ್ಲರೂ ಸಂಭ್ರಮಿಸಿದರು. ❑

# ಅಭಿಮತ

ದೆಹಲಿ ಕರ್ನಾಟಕ ಸಂಘದ

ಸಂಪುಟ 35 । ಸಂಚಿಕೆ 11

ಆಗಸ್ಟ್ 2025



**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ

ಕೆ.ಎಸ್. ಮೂರ್ತಿ

ಸದಸ್ಯರು

ಸರವು ಕೃಷ್ಣ ಭಟ್

ಯಲ್ಲಾಲಿಂಗ ಕೊಪ್ಪದ

ತಿಮ್ಮಪ್ಪ ಜಿ.ಆರ್.

ಎಸ್. ರಮೇಶ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ–2024–26**

ಅಧ್ಯಕ್ಷರು

ಸಿ.ಎಂ. ನಾಗರಾಜ

9811325440

ಉಪಾಧ್ಯಕ್ಷರು

ವಸಂತ ಶೆಟ್ಟಿ ಬೆಳ್ಳಾರೆ

9958697823

ಪೂಜಾ ಪಿ. ರಾವ್

9810882498

ಪ್ರಧಾನ ಕಾರ್ಯದರ್ಶಿ

ರಾಧಾಕೃಷ್ಣ

9818252183

ಖಜಾಂಚಿ

ಆಶಾಲತಾ ಎಂ.

9891249149

ಜಂಟಿ ಕಾರ್ಯದರ್ಶಿಗಳು

ನಾರಾಯಣ ಬಿ.

9868393978

ಅಶ್ವಿನಿ ಬಿ.ಎಸ್.

9036235665

ಸಮಿತಿ ಸದಸ್ಯರು

ಡಾ. ವೆಂಕಟಾಚಲ ಜಿ. ಹೆಗಡೆ

9312712476

ಕೆ.ಎಸ್. ಮೂರ್ತಿ

9871140222

ಪ್ರಭಾಕರ ಮಡ್ಡಿತೋಟ್

9910091978

ನವೀನ್ ಕುಮಾರ್ ವಿ.

9871945819

ಅರುಣ್ ಸಿ.ಎಸ್.

9741282211

ಜಯಶ್ರೀ ಬಸವರಾಜು ಬಿ.ಕೆ.

9560760341

ಶುಭಾ ದೇವಿಪ್ರಸಾದ್

9319762969

ಮಾಲಿನಿ ಪ್ರಹ್ಲಾದ

9910269085

ಎನ್.ಆರ್. ಶ್ರೀನಾಥ

7836954402

ಶಶಿಕಾಂತ ಪಿ. ಪಾಟೀಲ್

9650182413


## ಸಂಪಾದಕರ ಮನದ ಮಾತು...

### ನಮಗೆ ಸಿಕ್ಕಿರುವ ಅಮೂಲ್ಯವಾದ ಸ್ವಾತಂತ್ರ್ಯವನ್ನು ಅನುಭವಿಸುತ್ತಾ ಸಕಲ ಭಾರತೀಯರ ಹಿತವನ್ನು ಕಾಪಾಡೋಣ, ರಾಷ್ಟ್ರದ ಮುನ್ನಡೆಗೆ ಒಟ್ಟಾಗಿ ಶ್ರಮಿಸೋಣ

ಆತ್ಮೀಯ ಕನ್ನಡ ಪ್ರೇಮಿ ಸನ್ಮಿತ್ರರೇ, ನಿಮಗೆಲ್ಲರಿಗೂ ಬಹಳ ದೇಶಭಕ್ತಿ ಮತ್ತು ಸಂಭ್ರಮದಿಂದ ಆಚರಿಸಿದ 79ನೇ ಸ್ವಾತಂತ್ರ್ಯ ದಿನಾಚರಣೆಯ ಮತ್ತು ಭಕ್ತಿಭಾವದಿಂದ ಆಚರಣೆಯಾದ ಶ್ರೀ ಗೌರಿ ಗಣೇಶ ಹಬ್ಬಗಳ ಹಾರ್ದಿಕ ಶುಭಾಶಯಗಳು.

ಆಗಸ್ಟ್ 15, 1947 ರಂದು ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದ ನಮ್ಮ ರಾಷ್ಟ್ರ ಕಳೆದ 78 ವರ್ಷಗಳಲ್ಲಿ ಸಾಕಷ್ಟು ಪ್ರಗತಿ ಹೊಂದಿದೆ. ದೇಶದ ಆರ್ಥಿಕ ಸ್ಥಿತಿ ಈಗ ಸದೃಢವಾಗಿದ್ದು, ಭಾರತವು ಜಪಾನ್ ದೇಶವನ್ನು ಹಿಂದೆ ಸರಿಸಿ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯ ದೇಶವಾಗಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆಯಾಗಿದೆ. ಚಂದ್ರನ ದಕ್ಷಿಣ ಧ್ರುವದಲ್ಲಿ ನಮ್ಮ ವಿಕ್ರಮ್ ಲ್ಯಾಂಡರ್ ಯಶಸ್ವಿಯಾಗಿ ಕಾಲಿಟ್ಟು, ಪ್ರಜ್ಞಾನ್ ರೋವರ್ ಅಲ್ಲಿನ ಅಂಗಳದಲ್ಲಿ ಓಡಾಡಿದ್ದು ಈಗ ಇತಿಹಾಸ. ನಮ್ಮ ಗಗನಯಾತ್ರಿ ಪ್ರಥಮ ಬಾರಿ ಅಂತರರಾಷ್ಟ್ರೀಯ ಸ್ಪೇಸ್ ಸ್ಟೇಷನ್‌ಗೆ ಹೋಗಿ ಅಧ್ಯಯನ ಮಾಡಿ ಬಂದಿದ್ದಾರೆ. ಆಪರೇಷನ್ ಸಿಂಧೂರ್ ಮೂಲಕ ಪರಾಕ್ರಮ ತೋರಿದ ನಮ್ಮ ಭೂ, ಜಲ ಮತ್ತು ವಾಯು ಸೇನಾಪಡೆಗಳು ನಮ್ಮ ದೇಶದ ರಕ್ಷಣಾ ಸಾಮರ್ಥ್ಯವನ್ನು ಶತ್ರು ರಾಷ್ಟ್ರಗಳಿಗೆ ತೋರಿಸಿಕೊಟ್ಟಿವೆ. ಐ.ಟಿ. ಕ್ಷೇತ್ರದಲ್ಲಿ ಕ್ರಾಂತಿಯಾಗುತ್ತಿದ್ದು ಕೃತಕ ಬುದ್ಧಿಮತ್ತೆ (ಎಐ) ಎಲ್ಲಾ ಕ್ಷೇತ್ರಗಳಲ್ಲಿ ಅಳವಡಿಕೆಯಾಗುತ್ತಿದೆ. ವಿಜ್ಞಾನ, ತಂತ್ರಜ್ಞಾನ, ಬಯೋಟೆಕ್ನಾಲಜಿ, ವೈಮಾನಿಕ, ಅಗ್ರಿಕಲ್ಚರ್, ಕ್ರೀಡೆ, ಇನ್ಫ್ರಾಸ್ಟ್ರಕ್ಚರ್ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿಯಾಗಿದೆ. ರೈಲ್ವೇ ಕ್ಷೇತ್ರದಲ್ಲಿ ಕ್ಷಿಪ್ರ ಕಾರ್ಯಗಳಾಗುತ್ತಿದ್ದು ಬುಲೆಟ್ ಟ್ರೈನ್ ಆದಷ್ಟು ಬೇಗನೇ ಮುಂಬೈ–ಅಹಮದಾಬಾದ್ ನಡುವೆ ಸಂಚರಿಸಲಿದೆ, ಆಧುನಿಕ ವಂದೇಭಾರತ್, ನಮೋ ಭಾರತ್, ಅಮೃತ್ ಭಾರತ್ ಟ್ರೈನುಗಳು ದೇಶದೆಲ್ಲೆಡೆ ಓಡಾಡುತ್ತಿವೆ. ಹಲವಾರು ಹೊಸ ಏರ್‌ಪೋರ್ಟ್, ಸೀ ಪೋರ್ಟ್‌ಗಳು ಆರಂಭವಾಗುತ್ತಿದ್ದು, ರಾಷ್ಟ್ರೀಯ ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್‌ವೇಗಳು ಮೊದಲಿಗಿಂತಲೂ ವೇಗವಾಗಿ ನಿರ್ಮಾಣಗೊಂಡು ಚಾಲ್ತಿಯಲ್ಲಿವೆ. 2047ರಲ್ಲಿ ನಮ್ಮ ದೇಶ ಸ್ವಾತಂತ್ರ್ಯ ಸಂಭ್ರಮದ ಶತಮಾನೋತ್ಸವ ಆಚರಿಸುವ ವೇಳೆಗೆ 'ವಿಕಸಿತ ಭಾರತ'ವಾಗಿ ವಿಶ್ವದ 3ನೇ ಅತಿ ದೊಡ್ಡ ಅರ್ಥವ್ಯವಸ್ಥೆಯುಳ್ಳ ರಾಷ್ಟ್ರವಾಗಲಿದೆ. ನಾವೆಲ್ಲ ಇಂದು ಭಾರತದೆಲ್ಲೆಡೆ ಸ್ವತಂತ್ರವಾಗಿ ಸಂಚರಿಸಲು, ನಿರ್ಭೀತರಾಗಿ ಜೀವನ ಮಾಡಲು ಕಾರಣಕರ್ತರು ನಮಗೆ ಬ್ರಿಟೀಷರ ವಿರುದ್ಧ ಹೋರಾಡಿ ಸ್ವಾತಂತ್ರ್ಯ ತಂದುಕೊಟ್ಟ ಆ ವೀರ ಹೋರಾಟಗಾರರು. ಮಹಾತ್ಮಗಾಂಧಿ ನೇತೃತ್ವದಲ್ಲಿ ಚಾಚಾ ನೆಹರು, ವಲ್ಲಭಬಾಯಿ ಪಟೇಲ್ ಮುಂತಾದ ನಾಯಕರೂ ಮತ್ತು ಅಸಂಖ್ಯಾತ ಸ್ವಾತಂತ್ರ್ಯ ಹೋರಾಟಗಾರರು, ದೇಶಕ್ಕಾಗಿ ನೀಡಿದ ತ್ಯಾಗ, ಬಲಿದಾನ ಮಾಡಿದ ಹೋರಾಟಗಳ ಫಲಶ್ರುತಿಯಾಗಿ ನಾವು ಇಂದು ಆಧುನಿಕ ಭಾರತದಲ್ಲಿ ಸ್ವೇಚ್ಛೆಯಾಗಿ ಜೀವಿಸುತ್ತಿದ್ದೇವೆ. 79ನೇ ಸ್ವಾತಂತ್ರ್ಯೋತ್ಸವ ಆಚರಿಸಿದ ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಆ ಎಲ್ಲಾ ಧೀರರನ್ನು, ವೀರವನಿತೆಯರನ್ನು ಸ್ಮರಿಸಿಕೊಂಡು ಶಿರಬಾಗಿ ನನ್ನ ನಮನಗಳನ್ನು ಸಲ್ಲಿಸುತ್ತೇನೆ.

ಬಂಧುಗಳೇ, ಶ್ರೀ ಗಣೇಶ ಚತುರ್ಥಿ ಭಾರತದೆಲ್ಲೆಡೆ ಪ್ರತಿ ವರ್ಷದ ಭಾದ್ರಪದ ಮಾಸದ ಶುಕ್ಲಪಕ್ಷದ ಚೌತಿಯ ದಿನ ವೈಭವದಿಂದ ಆಚರಿಸಲ್ಪಡುವ ಒಂದು ಪ್ರಮುಖ ಹಬ್ಬ. ಬೆಳ್ಳಿ ಅಥವಾ ಮಣ್ಣಿನಿಂದ ಮಾಡಿದ ಗಣಪತಿಯ ಮೂರ್ತಿಯನ್ನು ವಿಧ್ಯುಕ್ತವಾಗಿ ಪೂಜಿಸಲಾಗುತ್ತದೆ. ಹಬ್ಬದ ದಿನ ಮೋದಕ, ಕಾಯಿ ಕಡುಬು ಎಂಬ ಸಿಹಿ ತಿಂಡಿಯನ್ನು ಮಾಡಿ ಗಣೇಶನಿಗೆ ನೈವೇದ್ಯ ಮಾಡಲಾಗುತ್ತದೆ. ಮನೆಮನೆಗಳಲ್ಲಿ ಹಾಗು ಸಾರ್ವಜನಿಕವಾಗಿ ಎಲ್ಲೆಡೆ ಗಣಪತಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜಿಸಲಾಗುತ್ತದೆ. ಗಣೇಶ ಚತುರ್ಥಿಯ ಹಿಂದಿನ ದಿನ ಮುತ್ತೈದೆಯರಿಗೆಲ್ಲಾ ಸೌಭಾಗ್ಯ ನೀಡುವ ಸಾಂಕೇತಿಕ ಸಂಭ್ರಮದ ಗೌರಿ ಹಬ್ಬವನ್ನು ಆಚರಿಸಲಾಗುತ್ತದೆ. ಕಳೆದ ಆಗಸ್ಟ್ ತಿಂಗಳ ಕೊನೆಯಲ್ಲಿ ನಾವುಗಳು ಶ್ರೀ ಗೌರಿ ಮತ್ತು ಗಣೇಶ ಹಬ್ಬಗಳನ್ನು ಬಹಳ ಸಡಗರದಿಂದ ಆಚರಿಸಿದ್ದೇವೆ. ನಮ್ಮ ಸಂಘದಲ್ಲಿ ಹಾಗು ದೆಹಲಿ /ಎನ್‌ಸಿಆರ್‌ನ ಹಲವೆಡೆ ಇಲ್ಲಿನ ಕನ್ನಡಿಗರೆಲ್ಲಾ ಒಂದುಗೂಡಿ ಗಣೇಶೋತ್ಸವವನ್ನು ಸಂಭ್ರಮಿಸಿದ್ದೇವೆ. ಬಾಲ್ಯದ ದಿನಗಳಿಂದಲೂ ಗಣಪತಿ ಪೂಜೆ ಹಾಗು ಆ ದಿನಗಳಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದದ್ದು ನನ್ನ ಜೀವನದಲ್ಲಿ ವಿಶೇಷ ಸಂದರ್ಭಗಳಾಗಿವೆ. ಗಣಪತಿಯ ವಿಗ್ರಹ ತಯಾರು ಮಾಡೋದನ್ನು ವೀಕ್ಷಿಸುವುದರಿಂದ ಹಿಡಿದು, ಪ್ರತಿಷ್ಠಾಪನೆ, ದಿನನಿತ್ಯ ಬೆಳಿಗ್ಗೆ ಮತ್ತು ಸಂಜೆಯ ಪೂಜೆಗಳು, ರುಚಿಕರ ಪ್ರಸಾದ ಸೇವಿಸುವುದು, ಸಂಗೀತ ಸಂಜೆ, ಆರ್ಕೆಸ್ಟ್ರಾ, ನಾಟಕ, ಗಾಯನ, ನೃತ್ಯ ರೂಪಕ, ಕೀಲುಕುದುರೆ ಪ್ರದರ್ಶನಗಳನ್ನೊಳಗೊಂಡ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ಅವಿಸ್ಮರಣೀಯ ಕ್ಷಣಗಳಾಗಿವೆ. ಈ ಬಾರಿಯೂ ದೆಹಲಿ ಮತ್ತು ಗುರುಗ್ರಾಮದಲ್ಲಿ ಆಯೋಜಿಸಲಾದ ಗಣೇಶ ಉತ್ಸವಗಳಲ್ಲಿ ಪಾಲ್ಗೊಂಡು ಗಣಪನ ಅನುಗ್ರಹಕ್ಕೆ ಪಾತ್ರನಾಗಿದ್ದು ನನ್ನಲ್ಲಿ ಸಾರ್ಥಕತೆಯ ಭಾವ ಮೂಡಿಸಿದೆ. ಸಮಸ್ತ ದೆಹಲಿ ಎನ್‌ಸಿಆರ್‌ನ ಕನ್ನಡಿಗರೂ ಸೇರಿದಂತೆ ನಾಡಿನ, ಹೊರನಾಡಿನ ಎಲ್ಲಾ ಕನ್ನಡಿಗ ಬಂಧುಮಿತ್ರರಿಗೆ ವಿಘ್ನ ವಿನಾಶಕ ಗಣೇಶನ ಕೃಪೆ ಸದಾ ಇರಲೆಂದು ಆಶಿಸುತ್ತೇನೆ.

ನಲ್ಮೆಯ ಓದುಗರೇ, ಜುಲೈ 2023 ರಿಂದ ನಮ್ಮ ನಿಮ್ಮ ಹೆಮ್ಮೆಯ ದೆಹಲಿ ಕರ್ನಾಟಕ ಸಂಘದ ಮುಖವಾಣಿ **"ಅಭಿಮತ"** ಮಾಸಪತ್ರಿಕೆಯ ಪ್ರಧಾನ ಸಂಪಾದಕನಾಗಿ ಕಾರ್ಯ ನಿರ್ವಹಿಸಿ ಇದೀಗ ಎರಡು ವರ್ಷಗಳು ಕಳೆದಿವೆ. ಈ ಸಮಯದಲ್ಲಿ ಹೊರ ತಂದ ಸಂಚಿಕೆಗಳಲ್ಲಿ, ವಿನೂತನ ಮತ್ತು ಹೊಸತನವನ್ನು ನೀಡುವ ಪ್ರಯತ್ನ ಮಾಡಲಾಗಿದೆ, ಆರೋಗ್ಯವೇ ಭಾಗ್ಯ ಮತ್ತು ತಿಂಗಳ ವ್ಯಕ್ತಿ ಅಂಕಣಗಳನ್ನು ಹೊಸದಾಗಿ ಪ್ರಾರಂಭಿಸಿ, ನಿರಂತರವಾಗಿ ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ, ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳು ಮತ್ತು ಸದಸ್ಯರ ಕಾರ್ಯ ಚಟುವಟಿಕೆಗಳ ವರದಿಯ ಜೊತೆ ಜೊತೆಗೆ ಇತರ ಸ್ಥಳೀಯ ಕನ್ನಡಪರ ಸಂಘ–ಸಂಸ್ಥೆಗಳ ಕಾರ್ಯಕ್ರಮಗಳ ವಿವರಗಳನ್ನು ಸಹಾ ಸವಿಸ್ತಾರವಾಗಿ ನೀಡಲಾಗಿದೆ. ವರದಿಗಳಿಗೆ ಪೂರಕವಾಗಿ ಉತ್ತಮ ಗುಣಮಟ್ಟದ ಛಾಯಾಚಿತ್ರಗಳನ್ನು ನೀಡಲು ವಿಶೇಷ ಗಮನವಹಿಸಲಾಗಿದೆ. ನಮ್ಮ ಈ ಅಭಿಮತ ಪತ್ರಿಕೆ ಸಂಚಿಕೆಯಿಂದ ಸಂಚಿಕೆಗೆ ಉತ್ತಮ ವರದಿ, ಉಪಯುಕ್ತ ಮಾಹಿತಿಗಳೊಂದಿಗೆ ಸದಾ ಸೂಕ್ತ ಸಲಹೆ ಮತ್ತು ಪ್ರೋತ್ಸಾಹ ನೀಡುತ್ತಿರುವ ನಮ್ಮ ಗೌರವಾನ್ವಿತ ಓದುಗರಿಗೆ ಇಷ್ಟವಾಗಿದೆ ಎಂದು ನನ್ನ ಭಾವನೆ. ನಮಗೆ ದೊರಕುತ್ತಿರುವ ಸಕಾರಾತ್ಮಕ ಅನಿಸಿಕೆಗಳು ಹಾಗು ಸುಧಾರಣಾ ಯೋಗ್ಯ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಈ ಪತ್ರಿಕೆಯನ್ನು ಇನ್ನಷ್ಟು ಆಕರ್ಷಕವಾಗಿ, ಹೆಚ್ಚಿನ ಮಾಹಿತಿ ವಿವರಗಳೊಂದಿಗೆ ಅಭಿವೃದ್ಧಿಗೊಳಿಸಿ ಇನ್ನೂ ಉತ್ತಮವಾಗಿ ಹೊರತರಲು ನನ್ನ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ, ಇದಕ್ಕೆ ನಿಮ್ಮೆಲ್ಲರ ಸಲಹೆ ಸಹಕಾರಗಳು ಸದಾ ಇರಲಿ.

ಆತ್ಮೀಯರೇ, ಕೆಲವು ತಾಂತ್ರಿಕ ಅನಿವಾರ್ಯತೆಗಳಿಂದ ಸ್ವಲ್ಪ ತಡವಾಗಿ ಹೊರಬರುತ್ತಿರುವ ಅಭಿಮತದ ಆಗಸ್ಟ್ ತಿಂಗಳ ಈ ಸಂಚಿಕೆಯಲ್ಲಿ, ದೆಹಲಿ ಕರ್ನಾಟಕ ಸಂಘದಲ್ಲಿ ಜುಲೈ–ಆಗಸ್ಟ್ ತಿಂಗಳಲ್ಲಿ ಆಯೋಜನೆಗೊಂಡ ಗಣೇಶ ಸಾಂಸ್ಕೃತಿಕ ಉತ್ಸವ ಮತ್ತು ಇತರ ಕಾರ್ಯಕ್ರಮಗಳು, ಲೇಖನಗಳು ಹಾಗು ಸ್ಥಳೀಯ ಸಂಘ ಸಂಸ್ಥೆಗಳಲ್ಲಿ ನಡೆದ ಕಾರ್ಯಕ್ರಮಗಳ ವರದಿ ವಿವರಗಳನ್ನು ನೀವು ಕಾಣಬಹುದು. ನಮ್ಮ ಸಂಘಕ್ಕೆ ಆಗಮಿಸಿ ಅಭಿನಂದನೆ ಸ್ವೀಕರಿಸಿದ 2025 ರ ಡಾ. ಬಿ.ಸಿ. ರಾಯ್ ಸ್ಮಾರಕ ಐ.ಎಮ್.ಎ. ರಾಷ್ಟ್ರೀಯ ಸಮುದಾಯ ಸೇವಾ ಪ್ರಶಸ್ತಿ ಪುರಸ್ಕೃತ ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು ಮತ್ತು ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತೆ ಶ್ರೀಮತಿ ಬಾನು ಮುಷ್ತಾಕ್ ಅವರಿಗೆ ಹಾರ್ದಿಕ ಶುಭಾಶಯಗಳು.

ಸೆಪ್ಟೆಂಬರ್ ತಿಂಗಳ ಶಿಕ್ಷಕರ ದಿನಾಚರಣೆ, ಇಂಜಿನಿಯರ್ಸ್ ಡೇ, ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ ಅಕ್ಟೋಬರ್ ತಿಂಗಳ ಗಾಂಧಿ ಮತ್ತು ಶಾಸ್ತ್ರಿ ಜಯಂತಿ, ನವರಾತ್ರಿ, ದಸರಾ ಹಾಗು ದೀಪಾವಳಿ ಹಬ್ಬಗಳ ಶುಭಾಶಯಗಳೊಂದಿಗೆ...

**ಕೆ. ಶ್ರೀನಿವಾಸ ಮೂರ್ತಿ**
ಪ್ರಧಾನ ಸಂಪಾದಕ

**ಒಳಪುಟಗಳಲ್ಲಿ .....**


❑ ಅಧ್ಯಕ್ಷರ ನುಡಿ–4 ❑ ಮುನ್ನೋಟ–5 ❑ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರಿಗೆ ಅಭಿನಂದನೆ–6 ❑ ಕನ್ನಡ ಬರಹಗಾರ್ತಿ ಬಾನು ಮುಷ್ತಾಕ್ ನಮ್ಮ ಹೆಮ್ಮೆ–8 ❑ ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು ಅವರಿಗೆ ಸನ್ಮಾನ ಮತ್ತು ವ್ಯಕ್ತಿ ಪರಿಚಯ–9 & 10 ❑ ದೆಹಲಿ ಕರ್ನಾಟಕ ಸಂಘದಲ್ಲಿ ಭಕ್ತಿಪೂರ್ಣ ಶ್ರೀ ಗಣೇಶ ಸಾಂಸ್ಕೃತಿಕ ಉತ್ಸವ ಆಚರಣೆ–11 ❑ ನವದೆಹಲಿ ಕರ್ನಾಟಕ ಭವನದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಶ್ರೀ ರವಿ ಕೆ. ಅವರಿಗೆ ಆತ್ಮೀಯ ಬೀಳ್ಕೊಡುಗೆ–13 ❑ ಅಗಲಿದ ಹಿರಿಯ ದೆಹಲಿ ಕನ್ನಡತಿ ಶ್ರೀಮತಿ ಜಮುನಾ ಸಿ. ಮಠದ ಅವರಿಗೆ ನುಡಿನಮನದ ಶ್ರದ್ಧಾಂಜಲಿ–14 ❑ ದೆಹಲಿಯಲ್ಲಿ ರಾಷ್ಟ್ರೀಯ ಸಮ್ಮೇಳನ–ಪಾಲೆದ ಕಶಾಯ ಮತ್ತು ಆಧುನಿಕ ಔಷಧ ವಿಜ್ಞಾನ ಬಗ್ಗೆ ಚರ್ಚೆ–16 ❑ 2025ರಲ್ಲಿ ಪದವಿ/ಸ್ನಾತಕೋತ್ತರ ಪದವಿ ಗಳಿಸಿ ಉದ್ಯೋಗಕ್ಕೆ ಸೇರಿದ/ ಉನ್ನತ ವ್ಯಾಸಂಗ ನಡೆಸುತ್ತಿರುವ ಮತ್ತು 10 ಹಾಗು 12ನೇ ತರಗತಿಯಲ್ಲಿ ಹೆಚ್ಚು ಅಂಕ ಪಡೆದ ದೆಹಲಿ ಕನ್ನಡಿಗರ ಹೆಮ್ಮೆಯ ಮಕ್ಕಳು–18 & 19 ❑ ಗುರುಗಾಂವ್ ಕನ್ನಡ ಸಂಘದಲ್ಲಿ ನೆರವೇರಿದ 21ನೇ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಮತ್ತು ಗಣೇಶೋತ್ಸವ ಆಚರಣೆ–20 & 21 ❑ ವಿಶೇಷ ವೈದ್ಯಕೀಯ ಲೇಖನ ; ಖಿನ್ನತೆ–ಜಾಗತಿಕ ಸಂಘರ್ಷ–22 ❑ ತಿಂಗಳ ವ್ಯಕ್ತಿ–ಶ್ರೀ ಗಿರಿಯ ಪೂಜಾರಿ–23 ❑ ಕಾರ್ಯತಂತ್ರದ ಸ್ವಾಯತ್ತತೆ ನಿರ್ಬಂಧಗಳು ಮತ್ತು ಪುನರ್ ರಚನೆ–24 ❑ ಆಧುನಿಕ ಜೀವನ ಶೈಲಿಗೆ–'ಸುದರ್ಶನ ಕ್ರಿಯೆ ಒಂದು ಕೊಡುಗೆ'–25 ❑ ರಾಷ್ಟ್ರ ರಾಜಧಾನಿಯಲ್ಲಿ ನಮ್ಮ ಮಣ್ಣಿನ ಮೂಲ ಸಂಸ್ಕೃತಿಯನ್ನು ಬೆಳೆಸುತ್ತಿರುವುದು ಹೆಮ್ಮೆಯ ಸಂಗತಿ–ಶ್ರೀ ಎಚ್. ರಾಜೇಶ್ ಪ್ರಸಾದ್–26 ❑ ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು ಅವರೊಂದಿಗೆ ಸಂವಾದ ಹಾಗು ಜನಕಪುರಿ ಕನ್ನಡ ಕೂಟ ಮತ್ತು ಮಹಿಳಾ ಮಂಡಳಿ ವತಿಯಿಂದ ಶ್ರೀಗಣಪತಿ ಪೂಜಾ ಕಾರ್ಯಕ್ರಮ–27



**ಕಾವಲು ಸಮಿತಿ :** ಶ್ರೀ ಎನ್.ಎ. ಮಾಧವ ಶ್ರೀ ಎಂ.ವಿ. ವೆಂಕಟೇಶ್ ಶ್ರೀಮತಿ ರಾಧಾ ಕೌಜಲಗಿ

## ಅಧ್ಯಕ್ಷರ ನುಡಿ



ಆತ್ಮೀಯ ಕನ್ನಡ ಬಂಧುಗಳೇ,

ಮೊದಲಿಗೆ ಆಗಸ್ಟ್ ತಿಂಗಳ ಅಭಿಮತ ತಡವಾಗಿ ಬರುತ್ತಿರುವುದಕ್ಕೆ ಕ್ಷಮೆ ಇರಲಿ, ಏಕೆಂದರೆ ಲೈಸೆನ್ಸ್ ನವೀಕರಣ ಕೆಲವೊಂದು ತಾಂತ್ರಿಕ ದೋಷಗಳಿಂದ ತಡವಾಗಿದೆ.

ಪ್ರಥಮವಾಗಿ ಸಾತಂತ್ರ್ಯ ದಿನಾಚರಣೆ ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯಿತು. ಅಂದು ಮುಖ್ಯ ಅತಿಥಿಗಳಾಗಿ ಕವಯಿತ್ರಿ, ಸಾಹಿತಿ ಶ್ರೀಮತಿ ಡಾ. ಲತಾ ರಾಜಶೇಖರ್ ಮತ್ತು ಅವರ ಪತಿ ಡಾ. ರಾಜಶೇಖರ್‌ರವರು ಆಗಮಿಸಿ ಧ್ವಜಾರೋಹಣ ಮಾಡಿದರು. ಅವರಿಗೆ ನಮ್ಮ ಧನ್ಯವಾದಗಳು.

ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಶ್ರೀಮತಿ ಬಾನು ಮುಷ್ತಾಕ್ ಮತ್ತು ಅವರ ಕಥೆಯನ್ನು ಇಂಗ್ಲೀಷ್ ಭಾಷೆಗೆ ಅನುವಾದ ಮಾಡಿದಂತಹ ಶ್ರೀಮತಿ ದೀಪಾ ಭಾಸ್ತಿ ಇವರಿಬ್ಬರ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಬಾನು ಮುಷ್ತಾಕ್‌ರವರು ಆಗಮಿಸಿ ನಮ್ಮ ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡಿದ್ದು ಖುಷಿ ತಂದಿದೆ.

ಬಂಧುಗಳೇ, ಈ ಸಂದರ್ಭದಲ್ಲಿ ಇನ್ನೋರ್ವ ಕನ್ನಡ ಸಾಹಿತಿ, ಅಭಿಮಾನಿ, ಡಾ. ಬಿ.ಸಿ. ರಾಯ್ ಸ್ಮಾರಕ ಐ.ಎಮ್.ಎ. ರಾಷ್ಟ್ರೀಯ ಸಮುದಾಯ ಸೇವಾ ಪ್ರಶಸ್ತಿ ಪಡೆದ ಡಾ. ಅಣ್ಣಯ್ಯ ಕುಲಾಲ್ ಉಳ್ತೂರ್‌ರವರು ದೆಹಲಿ ಕರ್ನಾಟಕ ಸಂಘಕ್ಕೆ ಬಂದು ನಮ್ಮ ಸಾಹಿತ್ಯ ಸಂಜೆ ಕಾರ್ಯಕ್ರಮದಲ್ಲಿ ಭಾಗಿಯಾಗಿ ನಮ್ಮ ಅಭಿನಂದನೆ ಸ್ವೀಕರಿಸಿದ್ದು ನಮಗೆ ಖುಷಿ ತಂದಿದೆ. ಈ ಮಧ್ಯೆ ಆಗಸ್ಟ್ ತಿಂಗಳಲ್ಲಿ ಗಣೇಶೋತ್ಸವವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಯಶಸ್ವಿಯಾಗಿ ಆಯೋಜಿಸಲಾಗಿದೆ. ಭಗವಂತನ ಕೃಪೆಗೆ ಸಂಘದ ಸದಸ್ಯರು ಪಾತ್ರರಾಗಿದ್ದಾರೆ. ಹಾಗೆಯೇ ಗುರುಗಾಂವ್ ಕನ್ನಡ ಸಂಘ, ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ, ಜನಕಪುರಿ ಕನ್ನಡ ಕೂಟ, ದೆಹಲಿ ಕನ್ನಡ ಶಾಲೆ ಮತ್ತಿತರೆಡೆ ಗಣೇಶೋತ್ಸವ ಆಚರಿಸಿ ಸಕಲ ದೆಹಲಿ ಕನ್ನಡಿಗರು ವಿನಾಯಕನ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ. ಗುರುಗಾಂವ್ ಕನ್ನಡ ಸಂಘವು ಸತ್ಯನಾರಾಯಣ ಪೂಜೆಯನ್ನು ಭಕ್ತಿ, ಭಾವ ಮತ್ತು ವಿಜೃಂಭಣೆಯಿಂದ ಆಚರಿಸಿದ್ದು ಸಕಲ ಭಗವದ್ಭಕ್ತರು ಸತ್ಯನಾರಾಯಣನ ಕೃಪೆಗೆ ಪಾತ್ರರಾದರು.

ಬಂಧುಗಳೇ, ಸಂಘ ಸಂಸ್ಥೆಗಳ ಮುಖ್ಯಸ್ಥರೆಂದಾಗ ಆ ಹುದ್ದೆಗೆ ಆಯ್ಕೆಯಾಗುವ ವ್ಯಕ್ತಿಗೆ ಕನಸುಗಳಿರಬೇಕು. ಆ ಕನಸುಗಳ ಪೂರ್ಣಗೊಳಿಸುವ ದಾರಿ ಅರಿತಿರಬೇಕು ಹಾಗೂ ತಗಲುವ ವೆಚ್ಚವನ್ನು ಸಂಘ ಸಂಸ್ಥೆಗಳ ಖಜಾನೆಯಿಂದ ತೆಗೆಯುವುದಲ್ಲ, ಸೂಕ್ತ ದಾನಿಗಳ ಹುಡುಕಿ ಅವರ ಕೊಡುಗೈ ದೇಣಿಗೆಯಿಂದ ಆ ಕಾರ್ಯ ಸಂಪನ್ನಗೊಳಿಸಬೇಕು. ಹಾಗೆ ಸಂಘ ಸಂಸ್ಥೆಗಳಿಗೆ ಸ್ಥಳೀಯ ಆಡಳಿತ ಸಂಸ್ಥೆಗಳು ಕೊಡುವ ತೊಂದರೆಗಳ ನಿವಾರಣೆಯ ಅರಿವು ಇರಬೇಕು. ಅನೇಕರು ಅಧ್ಯಕ್ಷ ಪದವಿಯಿಂದ ಎಲ್ಲವೂ ಸಾಧ್ಯ ಎಂಬ ಕಲ್ಪನಾ ಲೋಕದಲ್ಲಿ ಇರುತ್ತಾರೆ. ಆದರೆ ಇವೆಲ್ಲಾ ಕ್ರಿಯಾಶೀಲ ವ್ಯಕ್ತಿ ಕನಸುಗಳನ್ನು ಹೊತ್ತು ಆ ಪದವಿಗೇರಿದರೆ ಮಾತ್ರ ಸಾಧ್ಯವಾಗುತ್ತದೆ. ಅಂದರೆ ಇಲ್ಲಿ ವೈಯಕ್ತಿಕ ವರ್ಚಸ್ಸು, ಆಲೋಚನ ಶಕ್ತಿ ಕೆಲಸ ಮಾಡುತ್ತದೆಯೇ ವಿನಃ ಆಯ್ಕೆಯಾಗುವ ಪದವಿ / ಹುದ್ದೆಯಲ್ಲ.

ಈಗಾಗಲೇ ಹೊಸ ಮೇಲಟ್ಟಣಿಕೆ (ಲಿಫ್ಟ್), ದಿಗ್ದರ್ಶಕ (ಪ್ರೊಜೆಕ್ಟರ್), ಸ್ಪೀಕರ್, ಮೈಕುಗಳ ನವೀಕರಣ ಕಾರ್ಯ ಪೂರ್ಣಗೊಂಡಿರುವುದರ ಬಗ್ಗೆ ಈ ಹಿಂದೆಯೇ ಹೇಳಿರುವೆ. ಅದರ ಮುಂದಿನ ಹಂತವಾಗಿ ಆಗಸ್ಟ್ ತಿಂಗಳಲ್ಲಿ ದೆಹಲಿ ಕರ್ನಾಟಕ ಸಂಘದ ಸಭಾಂಗಣದ ಸೀಟು, ನೆಲಹಾಸಿನ ಬದಲೀಕರಣ ಕೆಲಸ ಸಮಯಕ್ಕೆ ಸರಿಯಾಗಿ ಪೂರ್ಣಗೊಂಡಿದೆ. ಮುಂದೆ ಪರದೆ ಬದಲಿಸುವ ಕಾರ್ಯ ನಡೆಯಲಿದೆ. ದೆಹಲಿ ಕರ್ನಾಟಕ ಸಂಘದ ಉನ್ನತಿಗೆ ಹಾಗೂ ಕಟ್ಟಡ, ಸಭಾಂಗಣದ ಆಧುನೀಕರಣಕ್ಕೆ ಎಷ್ಟೇ ಅಡೆತಡೆ ಬಂದರೂ ಅವುಗಳನ್ನು ನಿವಾರಿಸಿ ಕೆಲಸ ಮಾಡಲು ನಾನು ಪ್ರತಿಬದ್ಧನಾಗಿರುವೆ.

ಆಗಸ್ಟ್ ತಿಂಗಳಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದ ನಮ್ಮ ಭಾಷೆಯ ಎಂಟು ಮಹಾನ್ ಸಾಹಿತಿಗಳ ಸಾಹಿತ್ಯೋತ್ಸವ ದೆಹಲಿ ಕರ್ನಾಟಕ ಸಂಘದಲ್ಲಿ ಮೊಟ್ಟ ಮೊದಲ ಬಾರಿಗೆ ನಡೆದು ಯಶಸ್ವಿಯಾಗಿದೆ. ಈ ಕಾರ್ಯಕ್ರಮ ಕೇವಲ ಒಂದು, ಎರಡು, ಮೂರು ವಾರಕ್ಕೆ ಮುಗಿಯದೇ ಸತತವಾಗಿ ಏಳು ವಾರಗಳು ಸಾಹಿತಿಗಳ, ಕವಿಗಳ ಮತ್ತು ಬರಹಗಾರರ ಸ್ಥಳೀಯರೊಂದಿಗಿನ ಸಂವಾದದಿಂದ ಈ ಸಾಹಿತ್ಯೋತ್ಸವ ಯಶಸ್ವಿಯಾಗಿದೆ. ದೆಹಲಿಯಲ್ಲಿ ಅನೇಕ ಸ್ಥಳೀಯ ಕಲಾವಿದರು ಕನ್ನಡ ಸಾರಸ್ವತ ಲೋಕದ ಸಾಹಿತಿಗಳ, ಕವಿಗಳ ಕುರಿತು ತಮ್ಮ ವಿಚಾರ ಮಂಡನೆ ಮತ್ತು ಅವರ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ. ಈ ಸಾಹಿತ್ಯೋತ್ಸವದಲ್ಲಿ ಸರಿಸುಮಾರು 35 ಸಂಪನ್ಮೂಲ ವ್ಯಕ್ತಿಗಳು ಅತಿಥಿಗಳಾಗಿ ಪ್ರತ್ಯಕ್ಷವಾಗಿ ಭಾಗವಹಿಸಿ ಹಾಗೂ ಅಂತರ್ಜಾಲದ ಮೂಲಕ ನಾಡಿನ 35 ಅಗ್ರಗಣ್ಯ ಸಾಹಿತಿ, ಕವಿ, ಬರಹಗಾರರ ಬಗ್ಗೆ ಅತ್ಯಂತ ಸೊಗಸಾಗಿ ಮಾತನಾಡಿದರು. ಭಾಗವಹಿಸಿದ ಎಲ್ಲರಿಗೂ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ.

ಬಂಧುಗಳೇ, ದೆಹಲಿ ಕರ್ನಾಟಕ ಸಂಘ ಸ್ಥಳೀಯ ಕಲಾವಿದರಿಗೆ ಅತ್ಯಂತ ಉತ್ತಮವಾದ ಕಾರ್ಯಕ್ರಮಗಳನ್ನು ನೀಡುವ ಮೂಲಕ ಪ್ರೋತ್ಸಾಹಿಸುತ್ತಾ ಬರುತ್ತಿದೆ. ಕಳೆದ ಜೂನ್ ನಂತರ ಪ್ರತಿ ವಾರ ಕಾರ್ಯಕ್ರಮವನ್ನು ನೀಡುವ ಮೂಲಕ ಅನೇಕ ಕಾರ್ಯಕ್ರಮಗಳು ಯಶಸ್ವಿಯಾಗಿವೆ. ಈಗ ಸ್ಥಳೀಯ ಕಲಾವಿದರಿಗೆ ಮತ್ತೊಂದು ದಿಸೆಯಲ್ಲಿ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘದ ನಾಟಕೋತ್ಸವದಲ್ಲಿ ಈ ಬಾರಿ ಏಳು ತಂಡಗಳು ಭಾಗಿಯಾಗುತ್ತಿರುವುದು ಸಂತಸದ ಸಂಗತಿ. ಸಭಿಕರಾಗಿ ನಾಟಕಗಳನ್ನು ನೋಡಿ, ಆನಂದಿಸಿ ಹಾಗೂ ಕಲಾವಿದರನ್ನು ಪ್ರೋತ್ಸಾಹಿಸುತ್ತಾ ನಾಟಕೋತ್ಸವವನ್ನು ಯಶಸ್ವಿಗೊಳಿಸಬೇಕೆಂದು ಕೋರುತ್ತೇನೆ. ಇದಾದ ನಂತರ ಚಲನಚಿತ್ರದ ಸಾಹಿತಿಗಳು, ಮಹಾನ್ ಬರಹಗಾರರು ಕವಿಗಳನ್ನೊಳಗೊಂಡ ಕನ್ನಡ ಚಲನಚಿತ್ರ ಗೀತೆ ಹಾಗೂ ಭಾವಗೀತೆಗಳ 'ಗೀತೋತ್ಸವ' ನಡೆಯಲಿದೆ. ಗೀತೋತ್ಸವದ ನಂತರ ನೃತ್ಯೋತ್ಸವ, ರಾಜ್ಯೋತ್ಸವ, ಕ್ರೀಡೋತ್ಸವಗಳು ನಡೆಯಲಿವೆ.

ಈ ಬಾರಿ ಮೈಸೂರು ದಸರಾ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದಿಂದ ಮುಖ್ಯ ವೇದಿಕೆಯಲ್ಲಿ ನೃತ್ಯ ರೂಪಕ ಮಾಡಿ ಯಶಸ್ವಿಯಾಗಿ ಕಾರ್ಯಕ್ರಮ ನೀಡಿ ಬಂದ ನಮ್ಮ ಎಲ್ಲಾ ದೆಹಲಿ ಕನ್ನಡಿಗರ ಮಕ್ಕಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ದೆಹಲಿ ಸರ್ಕಾರದ ಅನೇಕ ಹಿರಿಯ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ ನಮ್ಮವರೇ ಆದಂತಹ ಹಿರಿಯ ಐಎಎಸ್ ಅಧಿಕಾರಿ ಅಪ್ಪಟ ಕನ್ನಡಿಗ ಶ್ರೀ ಎಚ್. ರಾಜೇಶ್ ಪ್ರಸಾದ್‌ರವರು ಚಂಡೀಗಡದ ಮುಖ್ಯ ಕಾರ್ಯದರ್ಶಿಗಳಾಗಿ ಆಯ್ಕೆಯಾಗಿದ್ದಾರೆ. ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ತಿಳಿಸುತ್ತೇನೆ.

ಬಂಧುಗಳೇ, ವೀರಮಹಿಳೆ ಕಿತ್ತೂರು ರಾಣಿ ಚೆನ್ನಮ್ಮನವರು ಕಿತ್ತೂರಿನಲ್ಲಿ ಬ್ರಿಟಿಷ್ ಸೈನಿಕರ ವಿರುದ್ಧ ಗಳಿಸಿದ್ದ ವಿಜಯಕ್ಕೆ ಈಗ ದ್ವಿಶತಮಾನೋತ್ಸವದ ಸಂಭ್ರಮ. ಮೊಟ್ಟ ಮೊದಲ ಬಾರಿಗೆ ಕೇಂದ್ರ ಸರ್ಕಾರದ ಸಂಸ್ಕೃತಿ ಇಲಾಖೆ ಮತ್ತು ದೆಹಲಿ ಕರ್ನಾಟಕ ಸಂಘದ ಜೊತೆಗೂಡಿ ನೂರಾರು ಸ್ಥಳೀಯ ಹಾಗೂ ನಾಡಿನ ಕಲಾವಿದರೊಂದಿಗೆ ಈ ಸಂಭ್ರಮದ ಆಚರಣೆಯನ್ನು ದೆಹಲಿಯ ಸಿರಿಫೋರ್ಟ್ ಆಡಿಟೋರಿಯಂನಲ್ಲಿ ಇದೇ ಅಕ್ಟೋಬರ್ 24ನೇ ತಾರೀಖು ಕಾರ್ಯಕ್ರಮ ಮಾಡಲಿದ್ದೇವೆ. ಈ ಸಂದರ್ಭದಲ್ಲಿ ರಾಣಿ ಚೆನ್ನಮ್ಮನವರ ಮುಖಚಿತ್ರವಿರುವ ನಾಣ್ಯ ಬಿಡುಗಡೆಯಾಗಲಿದ್ದು, ಈ ಕಾರ್ಯಕ್ರಮದಲ್ಲಿ ತಾವುಗಳೆಲ್ಲ ಭಾಗವಹಿಸಿ ಯಶಸ್ವಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಈ ಕೆಳಗಿನ ವಚನದೊಂದಿಗೆ ನಾ ಈ ತಿಂಗಳ ಅಧ್ಯಕ್ಷರ ನುಡಿ ಮುಗಿಸುತ್ತಿರುವೆ

**ಓದಿದರೇನು, ಕೇಳಿದರೇನು, ಶಿವಪಥವನರಿಯದನ್ನಕ್ಕ?**
**ಓದಿತ್ತು ಕಾಣಿರೋ ಶುಕನು, ಶಿವಪಥವನರಿಯದನ್ನಕ್ಕ!**
**ಓದಿದ ಫಲವು ಮಾದಾರ ಚೆನ್ನಯ್ಯಂಗಾಯಿತ್ತು,**
**ಕೂಡಲಸಂಗಮದೇವಾ.**

ಧನ್ಯವಾದಗಳು,

***ಸಿ.ಎಂ. ನಾಗರಾಜ***
ಅಧ್ಯಕ್ಷರು

## ಮುನ್ನೋಟ

ಪ್ರೀತಿಯ ಕನ್ನಡಿಗರೇ,

ಪ್ರಥಮವಾಗಿ ನಾನು ತಮ್ಮೆಲ್ಲರಿಗೂ ಮುಂಬರುವ ಕನ್ನಡ ರಾಜ್ಯೋತ್ಸವದ ಶುಭಾಶಯವನ್ನು ಕೋರುತ್ತೇನೆ. ನಮ್ಮ ನಾಡಿನ ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಯ ವೈವಿಧ್ಯತೆ ಪ್ರಪಂಚದ ಬೇರೆಲ್ಲೂ ಕಾಣಲು ಸಾಧ್ಯವೇ ಇಲ್ಲ. ಇಂತಹ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ನಾವು ರಾಷ್ಟ್ರ ರಾಜಧಾನಿಯಲ್ಲಿರುವ ದೆಹಲಿ ಕರ್ನಾಟಕ ಸಂಘದಲ್ಲಿ ಸತತವಾಗಿ ಅನಾವರಣಗೊಳಿಸುತ್ತಾ ಬಂದಿರುವುದು ನಮ್ಮ ಹೆಮ್ಮೆ. ನನ್ನ ಸಕಲ ದೆಹಲಿ ಕನ್ನಡಿಗರಿಗೆ ಮತ್ತು ಅಭಿಮತ ಓದುಗರಿಗೆ ಬೆಳಕಿನ ಹಬ್ಬ ದೀಪಾವಳಿ ತಮ್ಮ ಜೀವನದಲ್ಲಿ ಸಂತೊಷ, ಆರೋಗ್ಯ ಮತ್ತು ನೆಮ್ಮದಿಯ ಹೊಂಬೆಳಕು ಎಂದೆಂದೂ ಇರಲಿ.

ಈ ವರ್ಷದ ವಿಶ್ವವಿಖ್ಯಾತ ಮೈಸೂರು ದಸರಾ ಉತ್ಸವದಲ್ಲಿ ನಮ್ಮ ದೆಹಲಿ ಕರ್ನಾಟಕ ಸಂಘದ ಮಕ್ಕಳ ತಂಡ ಭಾಗವಹಿಸಿ ಉತ್ತಮ ಸಮೂಹ ನೃತ್ಯ ಪ್ರದರ್ಶನವನ್ನು ಪ್ರೇಕ್ಷಕರಿಗೆ ಉಣಬಡಿಸಿದ್ದು ಇತಿಹಾಸ ಪುಟಕ್ಕೆ ಸೇರಿತು. ಮೈಸೂರು ಪ್ರಯಾಣದಿಂದ ಮಕ್ಕಳು ಮತ್ತು ಪೋಷಕರು ಜೀವಮಾನದ ಅತೀವ ಸಂತ ವ್ಯಕ್ತಪಡಿಸಿದ್ದಾರೆ. ಏಳು ಸ್ಥಳೀಯ ತಂಡಗಳಿಂದ ಸುಮಾರು ನೂರಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿದ ನಾಟಕೋತ್ಸವ ದೆಹಲಿ ಕರ್ನಾಟಕ ಸಂಘದ ಮತ್ತೊಂದು ಮೈಲಿಗಲ್ಲು. ಸ್ಥಳೀಯ ಗಾಯಕರಿಗೆ ವೇದಿಕೆ ಕಲ್ಪಿಸಲು ವಿವಿಧ ಸಾಹಿತಿಗಳ ಕರೋಕೆ ಹಾಡುಗಳ ಗೀತೋತ್ಸವ ಕಾರ್ಯಕ್ರಮ ನವೆಂಬರ್ ತಿಂಗಳಲ್ಲಿ ನಡೆಯಲಿದೆ.

ಸ್ಥಳೀಯ ಕನ್ನಡ ಸಂಘ ಸಂಸ್ಥೆಗಳನ್ನು ಪೋಷಿಸಿ ಬೆಳೆಸುವುದು ಕರ್ನಾಟಕ ಸಂಘದ ಮತ್ತೊಂದು ಜವಾಬ್ದಾರಿ. ಅದೇ ರೀತಿ ಈ ಬಾರಿ ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಮಂಗಳೂರಿನ ದೆಹಲಿ ಘಟಕ ಆಯೋಜಿಸಿದ ದಶಮ ಸಂಭ್ರಮದಲ್ಲಿ 'ಕೀಚಕ ವಧೆ' ಯಕ್ಷಗಾನ ಮತ್ತು ಸ್ವರಾಂಜಲಿ ತಂಡದ ಚಲನಚಿತ್ರ ಗೀತೆಗಳ ಗಾಯನ ಮತ್ತು ನೃತ್ಯ ಕಾರ್ಯಕ್ರಮಕ್ಕೆ ಬೇಕಾದ ಸಹಕಾರ ನೀಡಿ ಕಾರ್ಯಕ್ರಮದ ಯಶಸ್ಸಿಗೆ ಪ್ರೋತ್ಸಾಹ ನೀಡಿದೆವು.

ಬರುವ ನವೆಂಬರ್ ತಿಂಗಳಲ್ಲಿ ಕರ್ನಾಟಕ ಭವನದ ಅದ್ದೂರಿ ರಾಜ್ಯೋತ್ಸವ ಕಾರ್ಯಕ್ರಮ, ಗೀತೋತ್ಸವದ ಜೊತೆ ಜೊತೆಗೆ ಬಹು ನಿರೀಕ್ಷೆಯ ಕ್ರಿಕೆಟ್ ಪಂದ್ಯಾವಳಿ, ಸಿನಿಮಾ ಪ್ರದರ್ಶನ, ಆಹಾರ ಮೇಳ, ಆರೋಗ್ಯ ಮೇಳ, ಪಿಕ್‌ನಿಕ್ ಆಯೋಜನೆ, ಸ್ಥಳೀಯ ಕಲಾವಿದರಿಂದ ನೃತ್ಯೋತ್ಸವ, ರಾಜ್ಯೋತ್ಸವ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಹೀಗೆ ಕನ್ನಡಿಗರಿಗೆ ಬಿಡುವಿಲ್ಲದ ಮನೋರಂಜನೆ ನೀಡಲು ಕರ್ನಾಟಕ ಸಂಘ ಪಣತೊಟ್ಟಿದೆ.

ಪ್ರಿಯ ಓದುಗರೇ, ಮತ್ತು ಆತ್ಮೀಯ ಕನ್ನಡಿಗರೇ ಈ ಎಲ್ಲಾ ಕಾರ್ಯಕ್ರಮಗಳು ಸ್ಥಳೀಯ ಕನ್ನಡಿಗರಿಗಾಗಿ ನಾವೂ ಮುತುವರ್ಜಿ ವಹಿಸಿ ಇಲ್ಲಿನ ಹಿತಾಸಕ್ತಿಗನುಗುಣವಾಗಿ ವಿನ್ಯಾಸಗೊಳಿಸಲಾಗಿದೆ. ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಿ ಎಂದು ನಾನು ಮನಃಪೂರ್ವಕವಾಗಿ ಆಶಿಸುತ್ತೇನೆ.

***ಜೈ ಭುವನೇಶ್ವರಿ***

***ರಾಧಾಕೃಷ್ಣ***
ಪ್ರಧಾನ ಕಾರ್ಯದರ್ಶಿ

### ದೆಹಲಿ ಕರ್ನಾಟಕ ಸಂಘದ ಅಕ್ಟೋಬರ್, ನವೆಂಬರ್ ತಿಂಗಳ ಕಾರ್ಯಕ್ರಮಗಳು

**24 ಅಕ್ಟೋಬರ್ 2025 ಶುಕ್ರವಾರ**
**ಸಂಜೆ : 3.30 ಗಂಟೆಗೆ**
ರಾಣಿ ಚೆನ್ನಮ್ಮನವರ ಬ್ರಿಟಿಷರ ವಿರುದ್ಧ 'ಕಿತ್ತೂರು ವಿಜಯೋತ್ಸವದ ದ್ವಿಶತಮಾನೋತ್ಸವ' (ಕೇಂದ್ರ ಸಂಸ್ಕೃತಿ ಇಲಾಖೆ, ಭಾರತ ಸರ್ಕಾರ ಮತ್ತು ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ನವದೆಹಲಿ ಸಿರಿಫೋರ್ಟ್ ಆಡಿಟೋರಿಯಂನಲ್ಲಿ

**01 ನವೆಂಬರ್ 2025 ಶನಿವಾರ**
**ಬೆಳಿಗ್ಗೆ : 8.00 ಗಂಟೆಗೆ**
ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಧ್ವಜಾರೋಹಣ

**02 ನವೆಂಬರ್ 2025 ಭಾನುವಾರ**
**ಸಂಜೆ : 5.00 ಗಂಟೆಗೆ**
ಸ್ಥಳೀಯ ಕಲಾವಿದರಿಂದ ಗೀತೋತ್ಸವ ಕಾರ್ಯಕ್ರಮ

**09 ನವೆಂಬರ್ 2025 ಭಾನುವಾರ**
**ಸಂಜೆ : 5.00 ಗಂಟೆಗೆ**
ಕನ್ನಡ ಚಲನಚಿತ್ರ ಪ್ರದರ್ಶನ

**16 ನವೆಂಬರ್ 2025 ಭಾನುವಾರ**
**ಸಂಜೆ : 4.00 ಗಂಟೆಗೆ**
ಗುರುಗಾಂವ್ ಕನ್ನಡ ಸಂಘ ಮತ್ತು ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಕರ್ನಾಟಕ ರಾಜ್ಯೋತ್ಸವ ಮತ್ತು ಸ್ಥಳೀಯರಿಂದ ಸಾಂಸ್ಕೃತಿಕ ಕಾರ್ಯಕ್ರಮ

### ಅಭಿನಂದನೆ



**ಶ್ರೀ ಎಲ್. ದಿವಾಕರ್**

ನವದೆಹಲಿಯ ಕರ್ನಾಟಕ ಭವನದಲ್ಲಿ ಸುದೀರ್ಘವಾಗಿ ಸರಿಸುಮಾರು 30 ವರ್ಷ ಸೇವೆ ಸಲ್ಲಿಸಿ ಎಲೆಮರೆಕಾಯಿಯಂತೆ ತಾವು ಮಾಡುವ ಕೆಲಸಗಳು ಯಾರಿಗೂ ಕಾಣದಂತೆ ಅನೇಕರಿಗೆ, ಅನೇಕ ಕನ್ನಡ ಸಂಘ ಸಂಸ್ಥೆಗಳಿಗೆ ಮತ್ತು ಅನೇಕ ನಿವಾಸಿ ಆಯುಕ್ತರು ಮತ್ತು ಐಎಎಸ್ ಅಧಿಕಾರಿಗಳು ಮತ್ತು ಹಿರಿಯ ಅಧಿಕಾರಿಗಳ ಜೊತೆ ಕಾರ್ಯ ನಿರ್ವಹಿಸಿದ ಸಂಘದ ಆಜೀವ ಸದಸ್ಯರಾದ ಶ್ರೀ ಎಲ್. ದಿವಾಕರ್ ಅವರು ಇತ್ತೀಚೆಗೆ ಕ್ಲಾಸ್–1 ಅಧಿಕಾರಿಯಾಗಿ ಕರ್ನಾಟಕ ಭವನದಲ್ಲಿ ಪದೋನ್ನತಿ ಪಡೆದಿರುತ್ತಾರೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

### ಗೀತೋತ್ಸವ

(ವಿಶೇಷವಾಗಿ ಸ್ಥಳೀಯ ಕಲಾವಿದರಿಂದ)

ಶ್ರೀ ಹೊನ್ನಪ್ಪ ಭಾಗವತರ್, ಶ್ರೀ ಹುಣಸೂರು ಕೃಷ್ಣಮೂರ್ತಿ, ಶ್ರೀ ಕು.ರಾ. ಸೀತಾರಾಮ ಶಾಸ್ತ್ರಿ, ಶ್ರೀ ವಿಜಯ್ ನಾರಸಿಂಹ, ಶ್ರೀ ಆರ್.ಎನ್. ಜಯಗೋಪಾಲ್, ಶ್ರೀ ಚಿ. ಉದಯಶಂಕರ್, ಡಾ. ದೊಡ್ಡರಂಗೇಗೌಡ, ಡಾ. ಹಂಸಲೇಖ, ಶ್ರೀ ವಿ. ಮನೋಹರ್, ಶ್ರೀ ಕಲ್ಯಾಣ್, ಶ್ರೀ ಕವಿರಾಜ್, ಶ್ರೀ ಯೋಗರಾಜ್ ಭಟ್, ಡಾ. ಜಯಂತ್ ಕಾಯ್ಕಿಣಿ, ಶ್ರೀ ಎಸ್. ನಾರಾಯಣ್, ಡಾ. ಎಚ್.ಎಸ್. ವೆಂಕಟೇಶ್ ಮೂರ್ತಿ, ಶ್ರೀ ಬಿ.ಆರ್. ಲಕ್ಷ್ಮಣ್ ರಾವ್ ಮುಂತಾದ ಪ್ರಖ್ಯಾತ ಕವಿಗಳ, ಸಾಹಿತಿಗಳ ಭಾವಗೀತೆ, ಚಲನಚಿತ್ರಗೀತೆಗಳ ಸಂಗಮದ ಪ್ರತೀಕ. ನವೆಂಬರ್ ತಿಂಗಳು ನಡೆಯಲಿರುವ ಈ ಗೀತೋತ್ಸವ ಕಾರ್ಯಕ್ರಮದಲ್ಲಿ ಆಸಕ್ತಿಯುಳ್ಳ ಸಂಘದ ಸದಸ್ಯರು ಮೇಲ್ಕಂಡ ರಚನೆಕಾರರ ಆಯ್ಕೆಯ ಗೀತೆ ಮತ್ತು ಕರೋಕೆಯ ಜೊತೆಗೆ ಸಂಘದಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳುವ ಮೂಲಕ ಈ ಸುವರ್ಣಾವಕಾಶವನ್ನು ಬಳಸಿಕೊಳ್ಳಬೇಕೆಂದು ವಿನಂತಿಸುತ್ತೇವೆ. (ನಿಯಮಗಳು ಅನ್ವಯ)

ಸಂಪರ್ಕಿಸಿ : ಶ್ರೀ ಸಿ.ಎಂ. ನಾಗರಾಜ–ಅಧ್ಯಕ್ಷರು–9811325440, ಶ್ರೀ ಅರುಣ್ ಸಿ.ಎಸ್.–ಕಾರ್ಯಕಾರಿ ಸಮಿತಿ ಸದಸ್ಯರು–9741282211

ಸಂಘದ ಕಚೇರಿ : 9654040627 / 9871475213, 011–26109615

# ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರಿಗೆ ದೆಹಲಿ ಕರ್ನಾಟಕ ಸಂಘದಿಂದ ಸನ್ಮಾನ ಮತ್ತು ಅಭಿನಂದನೆ




ಶ್ರೀಮತಿ ಬಾನು ಮುಷ್ತಾಕ್ ಮೇಡಂ ಅವರ ಮನದಾಳದಿಂದ ಮೂಡಿ ಹತ್ತಿಸಿದ ಅವರ "ಎದೆಯ ಹಣತೆ"ಯ ಬೆಳಕು ಇಡೀ ದೇಶ ವಿದೇಶಗಳಲ್ಲಿ ಪ್ರಜ್ವಲಿಸಿ ವಿಶ್ವದಲ್ಲಿಯೇ ಅತ್ಯಂತ ಶ್ರೇಷ್ಠ ಬರಹಗಳಿಗಷ್ಟೇ ಕೊಡ ಮಾಡುವ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಯನ್ನು 2025ರಲ್ಲಿ ಪಡೆದು ಕನ್ನಡ ಭಾಷೆಗೆ ಮನ್ನಣೆ ತಂದಕೊಟ್ಟಿರುವುದಲ್ಲದೇ ವಿಶ್ವಕ್ಕೆ ನಮ್ಮ ಕನ್ನಡದ ಭಾಷೆಯ ಶ್ರೇಷ್ಠತೆಯನ್ನು ತೋರಿಸಿಕೊಟ್ಟು ಕನ್ನಡ ಭಾಷೆಗೆ ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಹಾಗೆಯೇ ಅವರ "ಕರಿ ನಾಗರಗಳು" ಎಂಬ ಕಥೆಯನ್ನು ಆಧಾರಿಸಿ ಶ್ರೀ ಗಿರೀಶ್ ಕಾಸರವಳ್ಳಿ ಅವರು ನಿರ್ದೇಶಿಸಿದ "ಹಸೀನಾ" ಕನ್ನಡ ಚಲನಚಿತ್ರಕ್ಕೆ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು ಸಿಕ್ಕಿವೆ. ಇಷ್ಟೆಲ್ಲ ಸಾಧಿಸಿದ ಅವರನ್ನು ಹೊಗಳಿದರೆ ಅಯ್ಯೋ ನಾನೇನೋ ನನ್ನ ಪಾಡಿಗೆ ನಾನು ಬರೆದಿಕೊಂಡು ಹೋಗುತ್ತಿದ್ದೆ ಯಾರು ಓದಲಿ ಬಿಡಲಿ ಎಂಬ ಭಾವನೆಯಿಂದ, ಆದರೆ ಕನ್ನಡಿಗರು ನನ್ನ ಕಥೆಗಳನ್ನು ಮೆಚ್ಚಿ, ಓದಿ ನನ್ನನ್ನು ಈ ಮಟ್ಟಕ್ಕೆ ಬೆಳೆಸಿದರು, ಆದ್ದರಿಂದ ಈ ಬೂಕರ್ ಪ್ರಶಸ್ತಿಯು ನನಗಷ್ಟೇ ಅಲ್ಲ ಇದು ನಮ್ಮ ಕನ್ನಡ ಭಾಷೆಗೆ ಸಂದ ಗೌರವ ಎಂದು ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘದಲ್ಲಿ ಆಯೋಜಿಸಲಾಗಿದ್ದ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ಬಹಳ ಸರಳವಾಗಿ ಹೃದಯಪೂರ್ವಕವಾಗಿ ಹೇಳಿದರು. ಅವರ ಆ ಸರಳತೆಗೆ ಅವರೇ ಸಾಟಿ, ಯಾವುದೇ ಬಿಗುಮಾನ ಇಲ್ಲದ ಸರಳ ಸಜ್ಜನಿಕೆಯ ಅವರ ವ್ಯಕ್ತಿತ್ವಕ್ಕೆ ನನ್ನದೊಂದು ಸಲಾಂ ಹೇಳಲೇಬೇಕು.

**'ಹಾರ್ಟ್ ಲ್ಯಾಂಪ್" ಕೃತಿ ಕುರಿತು:**

ಹಾರ್ಟ್ ಲ್ಯಾಂಪ್" ನೀವು ಓದಿ ಮರೆತು ಬಿಡುವ ಪುಸ್ತಕವಲ್ಲ. ಅದು ನಿಮ್ಮೊಂದಿಗೆ ಇರುತ್ತದೆ–ಸದ್ದಿಲ್ಲದೆ, ಮಸುಕಾಗಲು ನಿರಾಕರಿಸುವ ಹಾಡಿನಂತೆ. ದಕ್ಷಿಣ ಭಾರತದ ಮುಸ್ಲಿಂ ಮಹಿಳೆಯರ ಕುರಿತಾದ ಎಲ್ಲಾ ಕಥೆಗಳು ನೋವಿನಿಂದ ಕೂಡಿದ ನೈಜತೆಯನ್ನು ಅನುಭವಿಸುತ್ತವೆ. ಅವು ಪ್ರೀತಿ, ನಂಬಿಕೆ, ಕುಟುಂಬ ಮತ್ತು ನಿರೀಕ್ಷೆಗಳ ಶಾಂತ ಭಾರದ ಬಗ್ಗೆ ಮಾತನಾಡುತ್ತವೆ.

ಬಾನು ಮುಷ್ತಾಕ್ ನಾಟಕೀಯವಾಗಿಸುವುದಿಲ್ಲ ಅಥವಾ ಬೋಧಿಸುವುದಿಲ್ಲ. ಅವರು ಜೀವನವನ್ನು ಹಾಗೆಯೇ ತೋರಿಸುತ್ತಾರೆ–ಗೊಂದಲಮಯ, ಅನ್ಯಾಯ, ಕೆಲವೊಮ್ಮೆ ಸುಂದರ. ದೀಪಾ ಭಾಸ್ತಿ ಅವರ ಅನುವಾದವು ಮೂಲ ಕನ್ನಡದ ಆತ್ಮವನ್ನು ಜೀವಂತವಾಗಿರಿಸುತ್ತದೆ, ರಚನೆ ಮತ್ತು ಭಾವನೆಗಳಿಂದ ತುಂಬಿರುತ್ತದೆ.

ಕೆಲವು ಕಥೆಗಳು ಭಾರವಾಗಿರುತ್ತವೆ, ಹೌದು, ಆದರೆ ಅವು ನಾವು ಸಾಕಷ್ಟು ಕೇಳದ ಜೀವನ ಮತ್ತು ಧ್ವನಿಗಳಿಗೆ ನಿಮ್ಮ ಕಣ್ಣುಗಳನ್ನು ತೆರೆಯುತ್ತವೆ. ಇದು ಓದಲು ಸುಲಭವಲ್ಲ, ಆದರೆ ಇದು ಅಗತ್ಯವಾದದ್ದು. ❑

***ಅಶ್ವಿನಿ ಬಿ.ಎಸ್.***

ಶ್ರೀಮತಿ ಬಾನು ಮುಷ್ತಾಕ್ ಅವರ ಸಣ್ಣ ಕಥೆಗಳ ಸಂಕಲನ "ಹಾರ್ಟ್ ಲ್ಯಾಂಪ್" ಎಂಬ ಕೃತಿಗೆ 2025ರ "ಅಂತರರಾಷ್ಟ್ರೀಯ ಬೂಕರ್" ಪುರಸ್ಕಾರವನ್ನು ನೀಡಲಾಗಿದೆ. ಇದು ಕನ್ನಡ ಭಾಷೆಯಲ್ಲಿ ಬರೆದಂತಹ ಕೃತಿಯೊಂದಕ್ಕೆ ಸಿಕ್ಕ ಮೊದಲ ಬೂಕರ್ ಪ್ರಶಸ್ತಿ. ಈ ಪ್ರಶಸ್ತಿಯನ್ನು ಕೃತಿಯ ಇಂಗ್ಲೀಷ್ ಅನುವಾದಕಿ ಶ್ರೀಮತಿ ದೀಪಾ ಭಾಸ್ತಿ ಅವರೊಂದಿಗೆ ಶ್ರೀಮತಿ ಬಾನು



ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮಕ್ಕೆ ಆಗಮಿಸಿದ ಶ್ರೀಮತಿ ಬಾನು ಮುಷ್ತಾಕ್ ಮತ್ತು ಅವರ ಮಗಳು ಶ್ರೀಮತಿ ಸಮೀನ ಅವರನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಆತ್ಮೀಯವಾಗಿ ಬರಮಾಡಿಕೊಂಡರು. ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸಿ.ಎಸ್. ಅರುಣ್ ಶ್ರೀಮತಿ ಬಾನು ಮುಷ್ತಾಕ್ ಅವರನ್ನು ಎಲ್ಲರಿಗೂ ಪರಿಚಯಿಸಿ ಈ ವರ್ಷದ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಪಡೆದಿರುವ ಅವರು ನಮ್ಮ ದೆಹಲಿ ಕರ್ನಾಟಕ ಸಂಘಕ್ಕೆ ಬಂದಿರುವುದು ದೆಹಲಿ ಕನ್ನಡಿಗರ ಸೌಭಾಗ್ಯ ಎಂದು ಹೇಳುತ್ತಾ ಅವರನ್ನು ಎಲ್ಲರ ಪರವಾಗಿ ಸ್ವಾಗತಿಸಿದರು.

ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ನಮ್ಮ ಆಹ್ವಾನವನ್ನು ಸ್ವೀಕರಿಸಿ ತಮ್ಮ ಬಿಡುವಿಲ್ಲದ ಶೆಡ್ಯೂಲ್‌ನಲ್ಲಿಯೂ ನಮ್ಮ ದೆಹಲಿ ಕರ್ನಾಟಕ ಸಂಘಕ್ಕೆ ಶ್ರೀಮತಿ ಬಾನು ಮುಷ್ತಾಕ್ ಮೇಡಂ ಅವರು ಬಂದಿರುವುದು ನಮಗೆಲ್ಲಾ ಸಂತೋಷದ ವಿಷಯ. ಅವರಿಗೆ 2025 ರ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಸಿಕ್ಕಿರುವುದು, ಅದರಲ್ಲೂ ನಮ್ಮ ಕನ್ನಡ ಭಾಷೆಯಲ್ಲಿ ಬರೆದ, ಇಂಗ್ಲೀಷ್‌ಗೆ ಅನುವಾದಗೊಂಡ ಕೃತಿ 'ಹಾರ್ಟ್ ಲ್ಯಾಂಪ್'ಗೆ ಈ ಪ್ರಶಸ್ತಿ ದೊರಕಿರುವುದು ನಾಡಿನ, ಹೊರನಾಡಿನ ಎಲ್ಲಾ ಕನ್ನಡಿಗರಿಗೆ ಹೆಮ್ಮೆಯ ವಿಷಯ. ಅವರಿಗೆ ಎಲ್ಲರ ಪರವಾಗಿ ಧನ್ಯವಾದಗಳು ಹಾಗೂ ಅಭಿನಂದನೆಗಳು ಎಂದರು.

ನಂತರ ಶ್ರೀಮತಿ ಬಾನು ಮುಷ್ತಾಕ್ ಅವರನ್ನು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಸಂಘದಿಂದ ಗೌರವಿಸಿ ಸನ್ಮಾನಿಸಲಾಯಿತು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಶ್ರೀಮತಿ ಬಾನು ಮುಷ್ತಾಕ್ ಅವರು ಸಂಘದ ಅಧ್ಯಕ್ಷರಿಗೆ ಮತ್ತು ನೆರೆದಿದ್ದವರಿಗೆ ಕೃತಜ್ಞತೆ ಅರ್ಪಿಸುತ್ತಾ ಈ ಕಾರ್ಯಕ್ರಮಕ್ಕೆ ಬಂದಿರುವುದು ತುಂಬಾ ಸಂತಸ ತಂದಿದೆ, ಬರವಣಿಗೆಯೇ ನನ್ನ ಉಸಿರು, ತತ್ವಾತ್ಮಕವಾಗಿ ಬರೆವುದೇ ಒಂದು ಕರ್ಮ. ಕನ್ನಡದ ಜನ ಸಹೃದಯರು, ಇಷ್ಟ ಪಟ್ಟು ನನ್ನ ಕೃತಿಗಳನ್ನು ಓದಿದ್ದಾರೆ, ಮನ್ನಣೆ ನೀಡಿದ್ದಾರೆ ಎಂದರು. ತಮ್ಮ ಜೀವನದ ಪಯಣ, ಸಂಘರ್ಷಗಳ ಬಗ್ಗೆ ಹಾಗು ತಾವು ಬರೆದ ಕೃತಿಗಳ ಕುರಿತು ವಿವರ ನೀಡಿದರು. ಹಾಗೆಯೇ ತಾವು ಬರೆದ 'ಎದೆಯ ಹಣತೆ' ಕೃತಿಯು ಶ್ರೀಮತಿ ದೀಪಾ ಭಾಸ್ತಿ ಅವರಿಂದ ಇಂಗ್ಲಿಷ್‌ಗೆ ಅನುವಾದಗೊಂಡ 'ಹಾರ್ಟ್ ಲ್ಯಾಂಪ್' ಪುಸ್ತಕವು ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಯ ಆಯ್ಕೆ ಪ್ರಕ್ರಿಯೆಗೆ ಸಲ್ಲಿಕೆಯಾದಾಗಿನಿಂದ ಹಿಡಿದು ಲಾಂಗ್ ಲಿಸ್ಟ್‌ಗೆ ಆಯ್ಕೆ ಆಗಿ ನಂತರ ಶಾರ್ಟ್ ಲಿಸ್ಟ್‌ನಲ್ಲಿ ಬಂದು ಈ ಸಂಬಂಧ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಲಂಡನ್‌ಗೆ ಪರಿವಾರದವರೊಂದಿಗೆ ಪ್ರಯಾಣ, ಹಿತ್‌ರೋ ಏರ್‌ಪೋರ್ಟ್‌ನಲ್ಲಿ ತಮ್ಮ ಲಗೇಜು ಮಿಸ್ ಆಗಿ ಪಟ್ಟ ಬವಣೆ, ಅದರಿಂದಾದ ಸಮಸ್ಯೆ ಕುರಿತು ಮಾಹಿತಿ ತಿಳಿಸಿದರು. ಹಾಗೆಯೇ ಪ್ರಶಸ್ತಿ ಪ್ರದಾನದ ದಿನ ತಾವು ಪ್ರಶಸ್ತಿ ತಮಗೇ ಸಿಕ್ಕಂತೆ ಕಂಡ ಕನಸು ಹಾಗು ಹಾಗೆಯೇ ಮಾಡಿಕೊಂಡ ಮಾನಿಫೆಸ್ಟೇಷನ್ (Manifestation) ಅದು ನನಸಾಗಿ ತಮ್ಮ ಕೈಗೆ ಪ್ರಶಸ್ತಿ ಸಿಕ್ಕಾಗ ಆದ ಅದ್ಭುತ ಅನುಭವಗಳ ಕುರಿತು ಹಂಚಿಕೊಳ್ಳುತ್ತಾ ಅದು ತಮ್ಮ ಜೀವನದ ಅತ್ಯಂತ ಖುಷಿಯ ಕ್ಷಣವಾಗಿತ್ತು, ಇಂದು ಇಲ್ಲಿ ತಮಗೆ ಅಭಿನಂದನೆ ಸಲ್ಲಿಸಲು ಆಗಮಿಸಿರುವ ಎಲ್ಲ ದೆಹಲಿ ಕನ್ನಡಿಗರಿಗೆ, ದೆಹಲಿ ಕರ್ನಾಟಕ ಸಂಘಕ್ಕೆ ವಂದನೆಗಳನ್ನು ಸಲ್ಲಿಸುತ್ತೇನೆ ಎಂದರು.



ಅಭಿನಂದನಾ ಕಾರ್ಯಕ್ರಮದಲ್ಲಿ ಕೇಂದ್ರ ಉಕ್ಕು ಮಂತ್ರಿಗಳ ಆಪ್ತ ಕಾರ್ಯದರ್ಶಿ ಶ್ರೀ ತೇಜಸ್ವಿ ನಾಯಕ್ ಐಎಎಸ್. ಹಿರಿಯ ಐಪಿಎಸ್ ಅಧಿಕಾರಿ ಶ್ರೀ ರಾಜಶೇಖರ್ ಎನ್, ದೆಹಲಿ ಮತ್ತು ಕೇಂದ್ರ ಸರ್ಕಾರದ ಉನ್ನತ ಅಧಿಕಾರಿಗಳು, ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಹಾಗು ಅಪಾರ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿನಲ್ಲಿ ಭಾಗಿಯಾದರು. ಶ್ರೀ ಬಾನು ಮುಷ್ತಾಕ್ ಅವರೊಂದಿಗೆ ಭಾವಚಿತ್ರಗಳನ್ನು ಹಾಗು ಅವರಿಗೆ ಬೂಕರ್ ಪ್ರಶಸ್ತಿ ತಂದು ಕೊಟ್ಟ 'ಹಾರ್ಟ್ಲ್ ಲ್ಯಾಂಪ್' ಕೃತಿಯ ಪ್ರತಿಗಳಿಗೆ ಅವರ ಹಸ್ತಾಕ್ಷರ ಪಡೆದುಕೊಂಡು ಸಂಭ್ರಮಿಸಿದರು.

ಅಭಿನಂದನೆ ಸ್ವೀಕರಿಸಿದ ಶ್ರೀಮತಿ ಬಾನು ಮುಷ್ತಾಕ್ ಅವರಿಗೆ ಮತ್ತು ಅವರೊಂದಿಗೆ ಆಗಮಿಸಿದ ಅವರ ಮಗಳು ಶ್ರೀಮತಿ ಸಮೀನ ಹಾಗು ನೆರೆದಿದ್ದ ಎಲ್ಲರಿಗೂ ಸಂಘದ ಪರವಾಗಿ ಜಂಟಿ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ಅವರು ವಂದನೆ ಸಲ್ಲಿಸಿದರು.❑

ಮುಷ್ತಾಕ್ ಅವರಿಗೆ ದಿನಾಂಕ 20.05.2025 ರಂದು ಲಂಡನ್‌ನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನೀಡಲಾಗಿದೆ. ಅವರೇ ಹೇಳುವಂತೆ ಕನಿಷ್ಠ ಈ ವರ್ಷದ ಫೆಬ್ರವರಿಯಿಂದ ಇಲ್ಲಿಯವರೆಗೂ 2–3 ದಿನ ಮನೆಯಲ್ಲಿ ಸ್ವಲ್ಪ ಆರಾಮವಾಗಿ ಸಮಯ ಕಳೆಯಲು ಆಗಿಲ್ಲ ಆ ರೀತಿ ಬಿಡುವಿಲ್ಲದಂತೆ ಒಂದಲ್ಲ ಒಂದು ಕಾರ್ಯಕ್ರಮಕ್ಕೆ ಹೋಗಿ ಬಂದು ಸಾಕಾಗಿ ಕಾರ್ಯಕ್ರಮಕ್ಕೆ ಕರೆದಾಗ ಕೆಲವೊಮ್ಮೆ ಬರಲಾಗುತ್ತಿಲ್ಲ ಎಂಬ ಸತ್ಯ ಹೇಳಿದರೆ ಕೆಲವರು ಅರ್ಥ ಮಾಡಿಕೊಳ್ಳುತ್ತಾರೆ ಆದರೆ ಇನ್ನು ಕೆಲವರು ಓಹ್ ಇವರೇನು ಕರೆದರೆ ಬರೋದಿಲ್ಲ ಎಂದು ಬೇಸರ ಮಾಡಿಕೊಳ್ಳುತ್ತಾರೆ ಎಂಬ ಅವರ ಸದ್ಯದ ಪರಿಸ್ಥಿತಿಗೆ ಕನ್ನಡಿ ಹಿಡಿದರು.

ಶ್ರೀಮತಿ ಬಾನು ಮುಷ್ತಾಕ್ ಅವರು ತಮ್ಮ ಈ ರೀತಿ ಬಿಡುವಿಲ್ಲದ ವೇಳಾಪಟ್ಟಿಯಲ್ಲೂ ದೆಹಲಿಯಲ್ಲಿ ಕರ್ನಾಟಕ ರಾಜ್ಯದ ಸಾಂಸ್ಕೃತಿಕ ರಾಯಭಾರಿಯಂತೆ ಇರುವ ನಮ್ಮ ಅಚ್ಚುಮೆಚ್ಚಿನ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 18.07.2025 ರಂದು ಅವರನ್ನು ಸನ್ಮಾನಿಸಿ ಅಭಿನಂದಿಸಲು ಆಹ್ವಾನಿಸಿದ್ದರು. ಕೇವಲ ಐದು ನಿಮಿಷಕ್ಕೆಂದು ಬಂದಿದ್ದ ಅವರು ಸುಮಾರು ಒಂದೂವರೆ ಗಂಟೆಯವರೆಗೂ ಸಂಘದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಂಘದ ಸನ್ಮಾನವನ್ನು ಸ್ವೀಕರಿಸಿದ ಬಳಿಕ ಮಾತನಾಡಿ ಅವರ ಬೂಕರ್ ಪ್ರಶಸ್ತಿ ಪಡೆಯುವವರೆಗಿನ ಸುದೀರ್ಘ ಪಯಣವನ್ನು ಅನುಭವಗಳನ್ನು ಸಂತಸದಿಂದ ಹಂಚಿಕೊಂಡರು.

ಈ ಪ್ರಶಸ್ತಿಯು ಯಾವಾಗಲೂ ಒಂದು ಕಾದಂಬರಿಯಂತಹ ಕೃತಿಗಳಿಗೆ ಕೊಡುತ್ತಾರೆ, ನಿಮ್ಮ ಈ ಸಣ್ಣ ಕಥೆಗಳ ಸಂಕಲನಕ್ಕೆ ಸಿಗುವುದು ಚಾನ್ಸ್ ಕಡಿಮೆ ಎಂದು ಅವರ ಏಜೆಂಟ್ ಪ್ರತಿ ಬಾರಿ ನಿಮಗೆ ಈ ಪ್ರಶಸ್ತಿ ಸಿಗುವ ಲಕ್ಷಣ ಇಲ್ಲ ನೀವು ಯಾವುದಕ್ಕೂ ಜಾಸ್ತಿ ಭರವಸೆ ಇಟ್ಟುಕೊಳ್ಳಬೇಡಿ ಎಂದು ಸಮಾಧಾನ ಮಾಡಲು ಪದೇಪದೇ ನೆನಪಿಸುತ್ತಿದ್ದುದನ್ನು ಹೇಳಿ ಎಲ್ಲರಿಗೂ ನಗೆ ಬರಿಸಿದರು. ಅವರು ಆ ಸನ್ನಿವೇಶದ ಬಗ್ಗೆ ಹೇಳುತ್ತಿರುವಾಗ ಅದು ಒಂಥರಾ ನಕ್ಷತ್ರಕನು ಸತ್ಯ ಹರಿಶ್ಚಂದ್ರನಿಗೆ ಪೀಡಿಸಿದಂತಹ ಪ್ರಸಂಗದ ನೆನಪನ್ನು ತರಿಸಿತ್ತು.



ಬೆಂಗಳೂರಿನಿಂದ ಲಂಡನ್‌ವರೆಗೆ ವಿಮಾನದಲ್ಲಿ ಪ್ರಯಾಣಿಸುವಾಗ ವಿಮಾನದವರ ಅಜಾಗರೂಕತೆಯಿಂದ ಅವರ ಲಗೇಜ್ ಮಿಸ್ ಆಗಿ ಹೋದದ್ದರಿಂದ ತಮ್ಮ ಹೃದಯ ಚಿಕಿತ್ಸೆಯಲ್ಲಿ ಕೊಟ್ಟಂತಹ ಔಷಧಿ ಮಾತ್ರೆಗಳು ಇಲ್ಲದೆ ಮತ್ತು ಬೂಕರ್ ಪ್ರಶಸ್ತಿ ಸಮಾರಂಭದ

ಸಂದರ್ಭದಲ್ಲಿ ತಾವು ಉಡಬೇಕೆಂದು ತುಂಬಾ ಆಸೆಯಿಂದ ಆರಿಸಿ ತಂದಿದ್ದ ರೇಷ್ಮೆ ಸೀರೆಗಳು ಮತ್ತು ಇನ್ನೂ ಹಲವಾರು ವಸ್ತುಗಳ ಸಮೇತ ತಮ್ಮ ಸೂಟ್ಕೇಸ್ ಕಳೆದು ಹೋದ ಬಗ್ಗೆ ತಿಳಿಸಿದರು.ಅದರಿಂದ ಅವರಿಗಾದ ತೊಂದರೆಗಳ ಬಗ್ಗೆ ಮತ್ತು ಮಾತ್ರೆಗಳನ್ನು ಅಲ್ಲಿಯ ಮೆಡಿಕಲ್ ಸ್ಟೋರ್‌ನಿಂದ ಖರೀದಿಸಲು ಹೋದರೆ ಅಲ್ಲಿನ ಮೆಡಿಕಲ್ ಸ್ಟೋರ್‌ಗಳು ವೈದ್ಯರ ಪ್ರಿಸ್ಕ್ರಿಪ್ಷನ್ ಇಲ್ಲದೆ ಹಾಗೆಲ್ಲ ಯಾವುದೇ ಔಷಧಿ ಕೊಡುವುದಿಲ್ಲ ಎಂದಾಗ ಡಾಕ್ಟರ್ ಬಳಿ ಹೋಗಲು ಅವರ ಅಪಾಯಿಂಟ್‌ಮೆಂಟ್ ಸಿಗಲು ಸುಮಾರು ವಾರಗಳು ಕಾಯಬೇಕಾಗುತ್ತದೆ ಎಂಬ ವಿಷಯ ತಿಳಿದು ಹತಾಶರಾದಂತಹ ಹಲವು ಸಂಗತಿಗಳನ್ನು ಹಂಚಿಕೊಂಡಾಗ ಕಾರ್ಯಕ್ರಮದಲ್ಲಿ ನೆರೆದಿದ್ದ ದೆಹಲಿ ಕನ್ನಡಿಗರು ಮಮ್ಮಲ ಮರುಗಿದರು.




ಶ್ರೀಮತಿ ಬಾನು ಮುಷ್ತಾಕ್ ಅವರನ್ನು ಅವಿಶ್ರಾಂತ ಸಮಯದಲ್ಲೂ ಅಭಿನಂದಿಸಲು ಕರೆದು ನಮಗೆಲ್ಲ ಹತ್ತಿರದಿಂದ ನೋಡುವಂತಹ ಸೌಭಾಗ್ಯವನ್ನು ಮತ್ತು ಅವರ ಜೊತೆ ಮುಕ್ತ ಸಂವಾದ ಮಾಡಲು ಅನುವು ಮಾಡಿಕೊಟ್ಟ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ್ ಅವರಿಗೆ ಅನಂತ ಧನ್ಯವಾದಗಳನ್ನು ತಿಳಿಸಲೇಬೇಕು. ಮೇಡಂ ಅವರ ಪಕ್ಕದಲ್ಲಿಯೇ ಕುಳಿತು ಮಾತಾಡುತ್ತಾ ಇರುವಾಗ ನನ್ನ ಮನಸ್ಸಿನಲ್ಲಿ ಇರುವುದನ್ನು ಓದಿಕೊಂಡವರಂತೆ ದೆಹಲಿ ಕರ್ನಾಟಕ ಸಂಘದ ಉತ್ಸಾಹಿ ತರುಣ ಶ್ರೀ ಅರುಣ್ ಸಿ.ಎಸ್. ಅವರು, ಬಾನು ಮುಷ್ತಾಕ್ ಮೇಡಂ ಅವರಿಗೆ ನನ್ನ ಬಗ್ಗೆ ವೃತ್ತಿಯಲ್ಲಿ ಪೊಲೀಸ್ ಆಗಿದ್ದರೂ ಬರವಣಿಗೆ ಇವರ ಹವ್ಯಾಸ ಮತ್ತು ಇವರು ತುಂಬಾ ಚೆನ್ನಾಗಿ ಬರೆಯುತ್ತಾರೆ ಎಂದು ಹೇಳಿದ್ದನ್ನು ಕೇಳಿ ನನಗೆ ಎಲ್ಲಿಲ್ಲದ ಸಂತೋಷವಾಯಿತು. ಅದಕ್ಕೆ ಮೇಡಂ ಅವರು ತುಂಬಾ ಒಳ್ಳೆಯದು ನೋಡಿ ತಮ್ಮ ತಮ್ಮ ಹುದ್ದೆಯಲ್ಲಿನ ಅನುಭವಗಳ ಜೊತೆ ಜೊತೆಗೆ ಬರವಣಿಗೆ ಮಾಡುವುದರಲ್ಲಿ ಒಂದು ಖುಷಿ ಕಾಣಬಹುದು ಮತ್ತು ಸ್ವಂತ ಅನುಭವವಾದ್ದರಿಂದ ಚೆನ್ನಾಗಿ ಬರೆಯಲೂಬಹುದು ಎಂದರು. ಅವರ ಈ ಸಲಹೆಗಾಗಿ ನಾನು ಅರುಣ್ ಅವರಿಗೂ ಕೃತಜ್ಞನಾಗಬೇಕು, ಏಕೆಂದರೆ ನಾನು ಹೇಳಲೋ ಬೇಡವೋ ಎಂದು ಮನದಲ್ಲಿಯೇ ಲೆಕ್ಕಾಚಾರ ಹಾಕುತ್ತಿರುವಾಗ ಸರಿಯಾದ ಸಮಯದಲ್ಲಿ ಮೇಡಂ ಅವರ ಬಳಿ ತಲುಪಿಸಿದ್ದರು. ಅದು ನನಗೆ ಸಮಾಧಾನ ತಂದಿತ್ತು. ಏಕೆಂದರೆ ಅತ್ತ ಹೇಳಬೇಕೆಂದು ನನಗೆ ಮನಸ್ಸಿದ್ದರೂ ಅವರ ಮುಂದೆ ನನ್ನ ಬಗ್ಗೆ ಹೇಳಿಕೊಳ್ಳಲು ಚಡಪಡಿಕೆ ಇದ್ದಾಗ ನಮ್ಮ ಮನಸ್ಸನ್ನು ಓದಿದವರಂತೆ ತಿಳಿದು ಅರುಣ್ ಅವರು ವ್ಯಕ್ತಪಡಿಸಿದ್ದರು.

ನಮ್ಮ ರಾಜ್ಯದ ಕನ್ನಡ ಸಾಹಿತ್ಯ ಪರಿಷತ್ತು ಈ ಬಾರಿ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬಳ್ಳಾರಿಯಲ್ಲಿ ಆಯೋಜಿಸಲು ನಿರ್ಧರಿಸಿದ್ದು ಮತ್ತು ಈ ಸಮ್ಮೇಳನದ ಅಧ್ಯಕ್ಷರನ್ನಾಗಿ ಶ್ರೀಮತಿ ಬಾನು ಮುಷ್ತಾಕ್ ಮೇಡಂ ಅವರನ್ನು ಸರ್ವ ಸಮ್ಮತವಾಗಿ ಆಯ್ಕೆ ಮಾಡಿರುವುದು ತುಂಬಾ ಸೂಕ್ತವಾಗಿದೆ. ಆದಷ್ಟು ಬೇಗ ನಮ್ಮ ನಾಡಿಗೆ ಒಂಬತ್ತನೆಯ ಜ್ಞಾನಪೀಠ ಪ್ರಶಸ್ತಿಯು ಶ್ರೀಮತಿ ಬಾನು ಮುಷ್ತಾಕ್ ಮೇಡಂ ಮುಖಾಂತರ ದೊರಕಲಿ ಎಂದು ಆಶಿಸುತ್ತೇನೆ.❑

**ವೆಂಕಟೇಶ ಹೆಚ್** (ಚಿತ್ರದುರ್ಗ)
ಎಸ್‌ಐ. ಸಿಆರ್‌ಪಿಎಫ್, ನವದೆಹಲಿ

## ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತೆ

# ಕನ್ನಡ ಬರಹಗಾರ್ತಿ ಬಾನು ಮುಷ್ತಾಕ್ ನಮ್ಮ ಹೆಮ್ಮೆ

2025ನೇ ಸಾಲಿನ ಇಂಟರ್‌ನ್ಯಾಷನಲ್ ಬೂಕರ್ ಪ್ರಶಸ್ತಿ ಪಡೆದ ಕನ್ನಡತಿ, ಅಡ್ವೋಕೇಟ್ ಹಾಗು ಬರಹಗಾರ್ತಿ ಶ್ರೀಮತಿ ಬಾನು ಮುಷ್ತಾಕ್ ಇವರಿಗೆ ದಿನಾಂಕ 18.07.2025 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನೀಡಿದ ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ನನಗೆ ವೈಯಕ್ತಿಕವಾಗಿ ಸಂತಸ ತಂದಿದೆ.





ಈ ಸಂದರ್ಭದಲ್ಲಿ ಶ್ರೀಮತಿ ಬಾನು ಮುಷ್ತಾಕ್‌ರವರು ಕಳೆದ ಮೇ 20 ರಂದು ಪ್ರಶಸ್ತಿ ಪಡೆಯಲು ಹೋದಾಗ ಲಂಡನ್‌ನಲ್ಲಿ ತಮಗಾದ ಸಿಹಿ–ಕಹಿ ನೆನಪುಗಳನ್ನು ಮೆಲುಕು ಹಾಕಿದರು. ಇವರು ಈ ಕಾರ್ಯಕ್ರಮಕ್ಕಾಗಿ 15 ದಿನ ಮೊದಲೇ ತಮ್ಮ ಪರಿವಾರದೊಂದಿಗೆ ಲಂಡನ್ ತೆರಳಿದ್ದರು. ಅದೇ ಸಮಯದಲ್ಲಿ ಅವರ ಸೂಟ್‌ಕೇಸ್ ಲಂಡನ್ ಏರ್‌ಪೋರ್ಟ್‌ನಲ್ಲಿ ನಾಪತ್ತೆಯಾಯಿತು. ತಮ್ಮ ಬಟ್ಟೆಗಳು ಹಾಗೂ ಮೆಡಿಸಿನ್ ಕಳೆದು ಹೋಗಿದ್ದು, ಲಂಡನ್‌ನ ಮೈನಸ್ ಡಿಗ್ರಿ ತಾಪಮಾನದಲ್ಲಿ ಪಟ್ಟ ತಾಪತ್ರೆಗಳು, ಯಾಕಾದ್ರು ಲಂಡನ್‌ಗೆ ಬಂದೇನೋ ಎನ್ನುವಷ್ಟು ಬೇಸರವಾಗಿತ್ತು ಎಂದು ತಮ್ಮ ಮನಸ್ಸಿಗಾದ ವ್ಯಥೆಯನ್ನು ವ್ಯಕ್ತಪಡಿಸಿದರು.

ಶ್ರೀಮತಿ ಬಾನು ಮುಷ್ತಾಕ್ ಅವರು ಅನೇಕ ಕಥೆ, ಕವನ ಹಾಗೂ ಸಂಕಲನ ಬರೆದಿದ್ದಾರೆ. ಇದರಲ್ಲಿ ಅವರಿಗೆ ಕಿರು ಕಥೆಗಳ ಸಂಕಲನ ಇಂಗ್ಲಿಷ್‌ಗೆ ಅನುವಾದಿತ 'ಹಾರ್ಟ್ ಲ್ಯಾಂಪ್' ಎಂಬ ಕೃತಿಗೆ ಈ ವರ್ಷದ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಸಿಕ್ಕಿದ್ದು ಎಲ್ಲ ಕನ್ನಡಿಗರಿಗೆ ಹೆಮ್ಮೆ ತಂದಿದೆ. ಮೂಲ ಕನ್ನಡದಲ್ಲಿ ಬರೆದ ಕೃತಿ 'ಎದೆಯ ಹಣತೆ'ಯನ್ನು ಇನ್ನೋರ್ವ ಕನ್ನಡತಿ ಶ್ರೀಮತಿ ದೀಪಾ ಭಾಸ್ತಿ ಅವರು ಇಂಗ್ಲಿಷ್‌ಗೆ ಅನುವಾದಿಸಿದ್ದರು.

ಶ್ರೀಮತಿ ಬಾನು ಮುಷ್ತಾಕ್‌ರವರ ಮನೆ ಹಾಸನದ ಪೆನ್ಷನ್ ಮೊಹಲ್ಲಾದಲ್ಲಿ ಇದೆ. ಇವರಿಗೆ ಮೂವರು ಹೆಣ್ಣು ಮಕ್ಕಳು. ಇವರ ಮಕ್ಕಳ ಜೊತೆ ನಾನು ಮತ್ತು ನನ್ನ ತಂಗಿ ಹಾಸನದ ಪ್ರಸಿದ್ಧ ಸೈಂಟ್ ಫಿಲೋಮಿನಾಸ್ ಗರ್ಲ್ಸ್ ಹೈಸ್ಕೂಲ್‌ನಲ್ಲೇ ಓದುತ್ತಿದ್ದೆವು. ನನ್ನ ತಾಯಿಯು ಮುಸ್ಲಿಂ ಶಾಲೆಯಲ್ಲಿ ಕನ್ನಡ ಶಿಕ್ಷಕಿಯಾಗಿದ್ದರು. ಅವರ ಶಾಲೆಯು ಪೆನ್ಷನ್ ಮೊಹಲ್ಲಾದಲ್ಲೇ ಇತ್ತು. ಆದುದರಿಂದ ಅವರೊಂದಿಗೆ ನಿಕಟ ಸಂಪರ್ಕವಿತ್ತು. ಇವರ ಜೊತೆಗೆ ಅವರ ಮಗಳು ದೆಹಲಿಗೆ ಬಂದಿದ್ದು, ಈ ಸಂದರ್ಭ ನನ್ನ ಹಳೆಯ ನೆನಪುಗಳನ್ನು ಮೆಲುಕು ಹಾಕಿದ್ದು ಖುಷಿ ತಂದಿತು.

ನಮ್ಮ ದೆಹಲಿ ಕನ್ನಡಿಗರ ಪರವಾಗಿ ಬಾನು ಮುಷ್ತಾಕ್ ಅವರಿಗೆ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಲಭಿಸಿರುವುದಕ್ಕಾಗಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ. ಇದು ಕನ್ನಡ ಸಾಹಿತ್ಯಕ್ಕೆ ಗೌರವದ ಕ್ಷಣವಾಗಿದೆ. ಅವರು ಭವಿಷ್ಯದಲ್ಲಿ ಜ್ಞಾನಪೀಠ ಪ್ರಶಸ್ತಿಗೆ ಭಾಜನರಾಗಲಿ ಎಂಬುದು ನಮ್ಮೆಲ್ಲರ ಹಾರೈಕೆಗಳು.❑

**ಸುಮಿತ ಆನಂದ ಮುರಗೋಡ್**

## 2025ರ ಡಾ. ಬಿ.ಸಿ. ರಾಯ್ ಸ್ಮಾರಕ ಐ.ಎಮ್.ಎ. ಸಮುದಾಯ ಸೇವಾ ಪುರಸ್ಕಾರಕ್ಕೆ ಭಾಜನರಾದ

# ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು ಅವರಿಗೆ ಸಂಘದಲ್ಲಿ ಗೌರವ ಸನ್ಮಾನ



ಪ್ರಖ್ಯಾತ ವೈದ್ಯರಾಗಿ, ವೈದ್ಯ ಸಾಹಿತಿಯಾಗಿ ಕನ್ನಡ ನಾಡಿನಲ್ಲಿ ಕಳೆದ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಕನ್ನಡಿಗ ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು ಅವರಿಗೆ ಅವರ ಸಮಾಜಮುಖಿ ವೈದ್ಯಕೀಯ ಸೇವೆ, ಸಮುದಾಯ ಸೇವೆ ಹಾಗು ಸಾಮಾಜಿಕ ಸಂಘಟನೆಗಾಗಿ ಈ ವರ್ಷದ ಡಾ. ಬಿ.ಸಿ. ರಾಯ್ ಸ್ಮಾರಕ ಐ.ಎಮ್.ಎ. ಸಮುದಾಯ ಸೇವೆ ಪುರಸ್ಕಾರ ಲಭಿಸಿರುವುದು ಎಲ್ಲ ಕನ್ನಡಿಗರಿಗೆ ಬಹಳ ಹೆಮ್ಮೆಯ ವಿಷಯ. ಜುಲೈ 13,2025 ರಂದು ದೆಹಲಿಯ ಇನ್ಸ್ಟಿಟ್ಯೂಟ್ ಆಫ್ ಟೌನ್‌ಪ್ಲಾನರ್ಸ್ ಇಂಡಿಯಾದ ಸಭಾಂಗಣದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕೇಂದ್ರ ಸರ್ಕಾರದ ಸೈನ್ಸ್ ಅಂಡ್ ಟೆಕ್ನಾಲಜಿ ಸಚಿವರೂ, ಸ್ವತಃ ವೈದ್ಯರೂ ಆದ ಡಾ. ಜೀತೇಂದ್ರ ಸಿಂಗ್, ದೆಹಲಿ ವಿಧಾನ ಸಭಾ ಶಾಸಕರೂ ಹಾಗೂ ಖ್ಯಾತ ಯುರಾಲಜಿಸ್ಟ್ ಆದ ಡಾ. ಅನಿಲ್ ಗೊಯಲ್, ಐ.ಎಂ.ಎ. ರಾಷ್ಟ್ರೀಯ ಅಧ್ಯಕ್ಷ ಡಾ. ದಿಲೀಪ್ ಭಾನುಶಾಲಿ ಹಾಗು ಇತರ ಹಿರಿಯ ಪದಾಧಿಕಾರಿ ವೈದ್ಯರೂ ಹಾಗು ಕೇಂದ್ರ ಸರ್ಕಾರದ ಉನ್ನತ ಅಧಿಕಾರಿಗಳ ಸಮ್ಮುಖದಲ್ಲಿ ಇವರಿಗೆ ಈ ಪುರಸ್ಕಾರವನ್ನು ನೀಡಿ ಗೌರವಿಸಲಾಗಿದೆ.

ಈ ನಿಮಿತ್ತ, ದಿನಾಂಕ 14.07.2025ರಂದು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲಿನಲ್ಲಿ ಡಾ. ಎಂ. ಅಣ್ಣಯ್ಯ ಅಣ್ಣಯ್ಯ ಕುಲಾಲ್ ಉಳ್ತೂರು ಅವರ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಪ್ರಾರಂಭದಲ್ಲಿ ಡಾ. ಎಂ. ಅಣ್ಣಯ್ಯ ಅವರನ್ನು ಹಾಗು ನೆರೆದಿದ್ದ ದೆಹಲಿ ಕನ್ನಡಿಗರನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಆತ್ಮೀಯವಾಗಿ ಸ್ವಾಗತಿಸಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಅರುಣ್ ಸಿ.ಎಸ್. ಅವರು ಡಾ. ಎಂ. ಅಣ್ಣಯ್ಯ ಅವರ ಪರಿಚಯ ಮಾಡಿಕೊಟ್ಟರು. ಕಾರ್ಯಕ್ರಮದಲ್ಲಿ ಡಾ. ಅಣ್ಣಯ್ಯ ಅವರ ಧರ್ಮಪತ್ನಿ ಶ್ರೀಮತಿ ಮಮತ ಎ. ಕುಲಾಲ್ ಹಾಗು ಪುತ್ರಿ ಕು. ಅನನ್ಯ ವಿ. ಕುಲಾಲ್ ಅವರು ಉಪಸ್ಥಿತರಿದ್ದರು. ಹಾಗೆಯೇ, ಸಂಘದ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು, ಸದಸ್ಯರು ಮತ್ತು ಅನೇಕ ದೆಹಲಿ ಕನ್ನಡಿಗರು ಭಾಗವಹಿಸಿದ್ದರು. ಡಾ. ಎಂ. ಅಣ್ಣಯ್ಯ ಅವರ ಕುರಿತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಡಾ. ವೈ. ಅವನೀಂದ್ರನಾಥ್ ರಾವ್ ಅವರು ಮೆಚ್ಚುಗೆ ನುಡಿಗಳನ್ನಾಡುತ್ತಾ, ಅಭಿನಂದನೆ ಸಲ್ಲಿಸಿದರು.

ನಂತರ ಡಾ. ಅಣ್ಣಯ್ಯ ಅವರನ್ನು ಅವರ ಕುಟುಂಬದವರೊಂದಿಗೆ ಎಲ್ಲರ ಸಮ್ಮುಖದಲ್ಲಿ, ಸಂಘದ ಪರವಾಗಿ ಗೌರವಿಸಿ ಅಭಿನಂದಿಸಲಾಯಿತು. ಅಭಿನಂದನೆ ಸ್ವೀಕರಿಸಿ ಮಾತನಾಡಿದ ಡಾ. ಅಣ್ಣಯ್ಯ ಅವರು ತಮ್ಮ ಜೀವನದ ವಿವಿಧ ಹಂತಗಳ ಕುರಿತು ತಿಳಿಸಿದರು. ಆರಂಭಿಕ ಶಾಲಾ ದಿನಗಳಲ್ಲಿ ಆರ್ಥಿಕ ಸಂಕಷ್ಟ ಎದುರಿಸಿದ ಪರಿಸ್ಥಿತಿಯಲ್ಲಿ ಕೃಷಿ ಕಾನೂನು ಕಾರಣದಿಂದಾಗಿ ಶಾಲೆಯನ್ನು ಬಿಡಬೇಕಾದ ಪರಿಸ್ಥಿತಿ ಎದುರಾಗಿ, ಹೋಟೆಲ್‌ನಲ್ಲಿ, ದೇವಸ್ಥಾನದ ಚಾವಡಿಯಲ್ಲಿ, ನಂತರ 16 ವರ್ಷ ಸರ್ಕಾರದ ಬಿಸಿಎಂ ಹಾಸ್ಟೆಲ್‌ನಲ್ಲಿ ಓದಿದ್ದನ್ನು, ಕುಂದಾಪುರದ ಭಂಡಾರ್‌ಕರ್ಸ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿಎಸ್ಸಿಯಲ್ಲಿ 8ನೇ ರ್‍ಯಾಂಕ್ ಪಡೆದಿದ್ದನ್ನು, ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗಡೆಯವರು ಸಹಾಯ ಮಾಡಿದ್ದನ್ನು, ಬಿಎಸ್ಸಿ ನಂತರ ತಾವು L&T ಕಂಪನಿಯಲ್ಲಿ ಕೆಲಕಾಲ ಕೆಲಸ ಮಾಡಿದ್ದನ್ನು ಆಮೇಲೆ ಬಿ.ಎಡ್. ಮತ್ತು ಎಂ.ಎಸ್ಸಿ ಗೆ ಸೇರಿದ್ದನ್ನು, ತರುವಾಯ ಕೆಎಂಸಿ ಯಿಂದ ಎಂ.ಬಿ.ಬಿ.ಎಸ್. ಪದವಿಯನ್ನು ಪಡೆದಿದ್ದನ್ನು ನೆನಪಿಸಿಕೊಂಡರು.

ಡಾಕ್ಟರ್ ಆದ ನಂತರ ಕಾಣೆ ಊರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸ್ವಲ್ಪ ಕಾಲ ಕೆಲಸ ಮಾಡಿ, ತರುವಾಯ ಶ್ರೀನಿವಾಸ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗೆ 25 ವರ್ಷಗಳ ಕಾಲ ಅನಾಟಮಿ ಮತ್ತು ನ್ಯೂರೋ ಸರ್ಜರಿ ಮುಂತಾದ ವಿಭಾಗಗಳಲ್ಲಿ ಬೋಧನೆಯ ಕೆಲಸವನ್ನು ಮಾಡಿದ್ದನ್ನು, ಪ್ರಸ್ತುತ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವುದನ್ನು ಉಲ್ಲೇಖಿಸಿದರು. ಕನ್ನಡವೇ ಸತ್ಯ, ತುಳುವೇ ನಿತ್ಯ ಎಂಬ ಮಂತ್ರವನ್ನ ಪಾಲಿಸಿಕೊಂಡು, ಮಾತಾಡು ಮಂಗಳೂರು ಕಾರ್ಯಕ್ರಮ, ಕನ್ನಡಕಟ್ಟೆ (ಕನ್ನಡ ಚಿಂತಕರ ಕೂಟ), ನೇತ್ರಾವತಿ ಹೋರಾಟ ಮುಂತಾದ ಅಭಿಯಾನಗಳಲ್ಲಿ ಪಾಲ್ಗೊಂಡಿದ್ದನ್ನು ಸ್ಮರಿಸಿಕೊಂಡರು. ಹಾಗೆಯೇ ಕೂಲಿ ಮಾಡುವವರು ಮತ್ತು ಇತರ ಕೆಲಸಗಾರರಿಗೆ ಅನುಕೂಲವಾಗುವಂತೆ ಪ್ರತಿದಿನ ಬೆಳಗ್ಗೆ 7:00 ಗಂಟೆಗೇ ತಮ್ಮ ಕ್ಲಿನಿಕ್ ಅನ್ನು ನಡೆಸುತ್ತಿದ್ದನ್ನು, ಬೆಳಗಾಂನಲ್ಲಿ ಐಎಂಎ ನ ಸಮ್ಮೇಳನವನ್ನು ಆಯೋಜಿಸಿದ್ದನ್ನು, ಐದು ವರ್ಷ ವೈದ್ಯ ಬರಹಗಾರರ ಬಳಗದಿಂದ ನೂರಕ್ಕೂ ಹೆಚ್ಚು ಪುಸ್ತಕಗಳನ್ನ, ಸುಮಾರು 70 ವೈದ್ಯರ ಅನುಭವದ ಲೇಖನವುಳ್ಳ 'ಸಿರಿಂಜ್ ಹಿಡಿವ ಕೈ ಪೆನ್ನು ಹಿಡಿದಾಗ' ಎಂಬ ಕೃತಿಯನ್ನು ಹೊರ ತಂದ ಮತ್ತು ಪ್ರಜಾವಾಣಿಯಲ್ಲಿ ಬರೆದಿದ್ದ ಅಂಕಣಗಳ ಕುರಿತು ಮಾಹಿತಿ ನೀಡಿದರು.

ಹಾಗೇನೇ, ಕಾಸರಗೋಡಿನಿಂದ ಕಾಸರಕೋಡಿನವರೆಗೆ, ಬಾರ್ಕೂರಿನಿಂದ ಬಸರೂರಿನವರೆಗೆ ಕನ್ನಡದ ಜೊತೆ ತುಳು ಭಾಷೆ ಪ್ರಚಲಿತದಲ್ಲಿರುವುದನ್ನು ಹಾಗೂ ಕುಂದಾಪುರ ಭಾಗದ ಕನ್ನಡವು ತುಳು ಮತ್ತೆ ಕನ್ನಡ ಭಾಷೆಯ ಸೇತುವೆಯಾಗಿರುವುದನ್ನು, ಹೊರನಾಡಿನ ಕನ್ನಡಿಗರು ತಮ್ಮ ಮಾತೃಭಾಷೆಯ ಬಗ್ಗೆ ಹೆಚ್ಚಿನ ಪ್ರತಿ ಒಲವು ತೋರುವುದನ್ನು ಒತ್ತಿ ಹೇಳಿದರು. ತಮಗೆ ಅಭಿನಂದನೆ ಸಲ್ಲಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸದಸ್ಯರಿಗೆ ಮತ್ತು ಇಲ್ಲಿ ನೆರೆದಿರುವ ಎಲ್ಲ ದೆಹಲಿ ಕನ್ನಡಿಗರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ ಎಂದರು.

ಅಭಿನಂದನಾ ಕಾರ್ಯಕ್ರಮದ ನಂತರ ಡಾ. ಎಂ. ಅಣ್ಣಯ್ಯ ಅವರ ಜೊತೆ ಸಂವಾದ ನಡೆಯಿತು. ದೆಹಲಿ ಕನ್ನಡ ಶಾಲೆಯ ಶಿಕ್ಷಕರಾದ ಶ್ರೀ ಅರವಿಂದ ಬಿಜ್ಜೈ ಅವರು ಡಾ. ಅಣ್ಣಯ್ಯ ಅವರಿಗೆ ಪ್ರಶಸ್ತಿ ಪಡೆದಿದ್ದಕ್ಕೆ ಶುಭಾಶಯಗಳನ್ನು ಸಲ್ಲಿಸುತ್ತಾ, ಮಹಾ ನಗರದಲ್ಲಿ ಇರುವವರಿಗೆ ತಮ್ಮ ಅರೋಗ್ಯ ಸಲಹೆ ತಿಳಿಸಬೇಕೆಂದು ಕೇಳಿಕೊಂಡಾಗ, ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಹರಿ–ಕರಿ–ವರಿ ಈ ಮೂರು ಅಂಶಗಳನ್ನು ದೂರವಿಟ್ಟರೆ ಆರೋಗ್ಯಕರ ಜೀವನ ನಡೆಸಬಹುದು ಎಂದು ಡಾ. ಅಣ್ಣಯ್ಯ ಕಿವಿ ಮಾತು ತಿಳಿಸಿದರು, ಇತರರು ಕೇಳಿದ ಪ್ರಶ್ನೆಗಳಿಗೆ ಅವರು ಸಮರ್ಪಕವಾದ ಉತ್ತರಗಳನ್ನು ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟ ಉಪಯುಕ್ತ ಸಲಹೆ, ಸೂಚನೆಗಳನ್ನು ನೀಡಿದರು. ದೆಹಲಿ ಕರ್ನಾಟಕ ಸಂಘದ ಅಭಿನಂದನೆಗಳನ್ನು ಸ್ವೀಕರಿಸಿದ ಡಾ.ಎಂ. ಅಣ್ಣಯ್ಯ ಕುಲಾಲ್ ಉಳ್ತೂರು ಅವರಿಗೆ ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ.ಎಸ್. ಮೂರ್ತಿ ಧನ್ಯವಾದಗಳನ್ನು ಅರ್ಪಿಸಿದರು. ಕಾರ್ಯಕ್ರಮದ ನಂತರ ಎಲ್ಲರಿಗೂ ಲಘು ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ❑




**ಅಭಿಮತ ವರದಿ**



# ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು

2025ರ ಡಾ. ಬಿ.ಸಿ. ರಾಯ್ ಸ್ಮಾರಕ ಐ.ಎಮ್.ಎ. ರಾಷ್ಟ್ರೀಯ ಸಮುದಾಯ ಸೇವಾ ಪ್ರಶಸ್ತಿ ಪುರಸ್ಕೃತರಾದ ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು ಅವರು ಒಬ್ಬ ಜನಾನುರಾಗಿ ವೈದ್ಯ ಶಿಕ್ಷಕ, ಶಿಕ್ಷಣ ತಜ್ಞ, ಸಮಾಜಮುಖಿ, ಸಾಹಿತಿ, ಬರಹಗಾರ, ಸಾಮಾಜಿಕ ಹೋರಾಟಗಾರ, ಸಂಘಟಕ ಹಾಗೂ ರಾಜ್ಯ ಸರ್ಕಾರದಿಂದ ಗೌರವಿಸಲ್ಪಟ್ಟ ಸಮಾಜ ವಿಜ್ಞಾನಿ ಮತ್ತು ತುಳುನಾಡಿನಿಂದ ಬಂದ ಅಪ್ಪಟ ಕನ್ನಡಿಗ.

ಕರ್ನಾಟಕ ರಾಜ್ಯದ IMA ಬಳಗದಲ್ಲಿ ಕನ್ನಡ ಸಾಹಿತ್ಯ, ಬರಹ ಭಾಷಣ, ಹೋರಾಟ, ಲೇಖನ ಎಂದಾಗ ತಕ್ಷಣ ನೆನಪಾಗುವ ಹೆಸರೇ ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು, ಮೂಲತಃ ದಕ್ಷಿಣ ಕನ್ನಡದವರಾದ ಶ್ರೀಯುತರು ಬಾಲ್ಯದಿಂದಲೇ ಕಾರಂತ, ಅಡಿಗ, ಕುವೆಂಪು, ಮಾಸ್ತಿ, ಕಯ್ಯಾರ, ಗೋವಿಂದ ಪೈಯಂತಹ ದಿಗ್ಗಜರ ಬರಹಗಳಿಂದ ಪ್ರಭಾವಿತರಾಗಿ ಅದೇ ನೇರ ನಿಷ್ಠುರದ ದಾರಿಯಲ್ಲಿ ಸಾಗಿದ್ದರು. ಹಾಗೆಯೇ ತುಳುನಾಡ ಉತ್ತರದ ಕುಂದಾಪುರ/ಬಾರಕೂರು ಭಾಗದಿಂದ ಬಂದು ತುಳುನಾಡ ದಕ್ಷಿಣದ ಮಂಗಳೂರಲ್ಲಿ ಸರ್ವಜ್ಞ ವೃತ್ತ, ರಾಷ್ಟ್ರಕವಿ ಗೋವಿಂದ ಪೈ ವೃತ್ತ, ಅಂಪಣ್ಣ ಕಟ್ಟೆ ಬೈರಾಡಿಕೆರೆ ಮಾಡುವಲ್ಲಿ ಕನ್ನಡ ಕಟ್ಟೆಯ ಮೂಲಕ ನೇರ ಭಾಗಿಯಾಗಿ ಯಶಸ್ವಿಯಾದವರು. ಕರವೇ ಕರಾವಳಿ, ಪುಟ್ಟಣ್ಣ ಕುಲಾಲ್ ಪ್ರತಿಷ್ಠಾನ, ಬಜಾಲ್ ರೈಲ್ವೇ ಹೋರಾಟ ಸಮಿತಿ, ನೇತ್ರಾವತಿ ನದಿ ತಿರುವು SEZ, MSEZ, ಹೋರಾಟಗಳಲ್ಲಿಯೂ ಭಾಗವಹಿಸಿದ್ದರು. ಡಾ ಕುಲಾಲ್ ನಂತೂರಿನಲ್ಲಿ ಕಯ್ಯಾರ ಕಿಂಞ್ಞಣ್ಣ ರೈ ವೃತ್ತ ಮಾಡಲು ಹೋರಾಟ ಮಾಡುತ್ತಿದ್ದಾರೆ.

ಸಹ್ಯಾದ್ರಿ ಸಂಚಯನ, ಅಣ್ಣಾ ಹಜಾರೆ ಚಳುವಳಿ, ಯುವ ವೇದಿಕೆ ಮೂಲಕ ಸರ್ವಜ್ಞ ಜನ ಜಾಗೃತಿ ಚಳುವಳಿ, ವೈದ್ಯ ಬರಹಗಾರರ ಬಳಗ, ಕುಟುಂಬ ವೈದ್ಯರ ಸಂಘಟನೆಗಳ ಮೂಲಕ ಆರೋಗ್ಯ, ಶಿಕ್ಷಣ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಹೋರಾಟಗಳಿಂದ, ಸಮಾಜಮುಖಿ ಆರೋಗ್ಯ ಸೇವೆಗಳಿಂದ ಕರ್ನಾಟಕ ಸರಕಾರದಿಂದಲೇ ಸಮಾಜ ವಿಜ್ಞಾನಿ (Social Scientist / Social Engineering) ಎಂಬ ಗೌರವ ಗಳಿಸಿಕೊಂಡವರು.

ಕನ್ನಡಕ್ಕಾಗಿ ಮಿತ್ರರ ಜೊತೆ ಸೇರಿ ಕಾಸರಗೋಡು ಚಲೋ ನಡೆಸಿ, ಲಾಠಿ ಏಟು ತಿಂದವರು, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಾಗ ತಲಪಾಡಿಯಿಂದ ಮಂಗಳೂರು ನಗರ ಓಣಿ ಓಣಿಗಳಲ್ಲಿ ಮೆರವಣಿಗೆ ಮಾಡಿದವರು, ಕನ್ನಡ ಕಟ್ಟೆಯ ಮೂಲಕ ತುಳುನಾಡಿನ ಕನ್ನಡ, ತುಳು, ಕೊಂಕಣಿ, ಬ್ಯಾರಿ, ಕುಂದಗನ್ನಡ, ಅರೆಗನ್ನಡ, ಹವ್ಯಾಕದವರ ಜೊತೆ ಸೇರಿಕೊಂಡು, ಕನ್ನಡವೇ ಸತ್ಯ–ತುಳುವೇ ನಿತ್ಯ ಎಂಬ ಜನಪ್ರಿಯ ಘೋಷಣೆ ಹಾಗು 'ಮಾತಾಡು ಮಂಗಳೂರು ಮಾತಾಡು' ಎಂಬ ಸಾಮಾಜಿಕ ನ್ಯಾಯದ ಕರೆ ಕೊಟ್ಟು, ಮದ್ದಲ್ಲ ಕಷಾಯ, ಚುಚ್ಚುಮದ್ದು, ಸದ್ದಿಲ್ಲದೇ ಸುದ್ದಿ ಆಗು, ಎಂಬ ಕಿರು ಚಿಂತನಾ ಬರಹಗಳಿಂದ ಹಿಡಿದು, 'ಸಿರಿಂಜ್ ಹಿಡಿಯುವ ಕೈ ಪೆನ್ನು ಹಿಡಿದಾಗ' ಎಂಬ ಬೃಹತ್ ನೈಜ ಘಟನೆಗಳ ಪುಸ್ತಕವನ್ನು ಸಂಪಾದಿಸಿ ರಾಜ್ಯಮಟ್ಟದಲ್ಲಿ ಸುದ್ದಿ ಮಾಡಿದವರು.

ಕಸ್ತೂರ್ಬಾ ಮೆಡಿಕಲ್ ಕಾಲೇಜು ಮಾಹೆ ಯುನಿವೆರ್ಸಿಟಿಯಿಂದ ಎಂ.ಬಿ.ಬಿ.ಎಸ್. ಪದವಿ. ಸ್ಟ್ಯಾನಲಿ ಮೆಡಿಕಲ್ ಕಾಲೇಜು, ಅಣ್ಣಾಮಲೈ ಯುನಿವರ್ಸಿಟಿ ಚೆನ್ನೈನಿಂದ ಎಂ.ಬಿ.ಎ. ಪದವಿ ಹಾಗು ಚೆನ್ನೈನ ಅಂಗಪ್ಪ ಯುನಿವರ್ಸಿಟಿಯಿಂದ PGDHA (Industrial Medicine & Ocupational Health) ಪಡೆದಿರುತ್ತಾರೆ. ಚೆನ್ನೈನ ಎಂ.ವಿ. ಹಾಸ್ಪಿಟಲ್‌ನಿಂದ Fellowship in Diabetes, ಬೆಂಗಳೂರಿನ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯಿಂದ Fellowship in Palliation Medicine ಹಾಗು IMA College of General Practitioner HQ ಚೆನ್ನೈನಿಂದ Fellowship in Family Medicine ಪಡೆದಿರುತ್ತಾರೆ.

ಹಿರಿಯ ಕುಟುಂಬ ವೈದ್ಯರು, ಪಾಲಿಯೇಟಿವ್ ಹಾಗು Occupational Medicine ತಜ್ಞರಾದ ಶ್ರೀಯುತರು ಪ್ರಸುತ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯ ಪಾಲಿಯೇಟಿವ್ ಹಾಗೂ Elderly Care ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಹಿಂದೆ 25 ವರ್ಷಗಳ ಕಾಲ ಶ್ರೀನಿವಾಸ್ ವಿಶ್ವವಿದ್ಯಾಲಯ, ಶ್ರೀನಿವಾಸ್ ಮೆಡಿಕಲ್ ಕಾಲೇಜು ಶ್ರೀನಿವಾಸ್ ಆಸ್ಪತ್ರೆಗಳಲ್ಲಿ ವಿವಿಧ ಹಿರಿಯ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಮೆಡಿಕಲ್, ಡೆಂಟಲ್, ಫಿಜಿಯೋಥೆರಪಿ, ಫಾರ್ಮಸಿ, ನರ್ಸಿಂಗ್, ಡಯಾಲಿಸಿಸ್ ವಿದ್ಯಾರ್ಥಿಗಳಿಗೆ ಶಿಕ್ಷಕರಾಗಿಯೂ ಸೇವೆ ಸಲ್ಲಿಸಿದ್ದಾರೆ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ಅನೇಕ ಪಠ್ಯ ಪುಸ್ತಕ ಬರೆದಿದ್ದಾರೆ.

ಭಾರತೀಯ ವೈದ್ಯಕೀಯ ಸಂಘ (IMA) ದ ಮಂಗಳೂರು ಘಟಕದ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿಯಾಗಿ, IMA ಟ್ರಸ್ಟ್ ಸದಸ್ಯರಾಗಿ, ಜಿಲ್ಲಾ ಮತು ವಿವಿಧ ವಿಭಾಗಗಳ ಸಂಚಾಲಕರಾಗಿ, ರಾಜ್ಯ ಘಟಕೆದ ಉಪಾಧ್ಯಕ್ಷ, PRO ಹಾಗೂ ಇತರ ಪ್ರಮುಖ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. IMA ಯ ಪ್ರತಿಷ್ಠಿತ IMA ವೈದ್ಯ ಬರಹಗಾರರ ಬಳಗವನ್ನು ಇವರು ಹುಟ್ಟು ಹಾಕಿದ್ದರು.

ಇವರಿಗೆ 2012 ರಲ್ಲಿ, ಐಎಂಎ ರಾಷ್ಟ್ರೀಯ ಅದ್ಯಕ್ಷರ ಸಕ್ರಿಯ ಯುವ ವೈದ್ಯನಾಯಕ ಪ್ರಶಂಸಾ ಪತ್ರ, 2014 ದ.ಕ. ಜಿಲ್ಲಾ ರಾಜ್ಯೋತ್ಸವ ಪುರಸ್ಕಾರ, 2020 ರಲ್ಲಿ ಐಎಂಎ ರಾಜ್ಯ ಡಾ. ಬಿ.ಸಿ. ರಾಯ್ ಪುರಸ್ಕಾರ, 2024 ರಲ್ಲಿ ಐಎಂಎ ಮಂಗಳೂರು ಜಿಲ್ಲಾ ಡಾ. ಬಿ.ಸಿ.ರಾಯ್ ಹಾಗು ಜೀವಮಾನದ ಸಾಧನೆಗೆ ಐಎಂಎ ಕನ್ನಡ ರಾಜ್ಯೋತ್ಸವ ಪುರಸ್ಕಾರ ದೊರಕಿವೆ. ದೇವರಾಜ ಅರಸರು ಸ್ಥಾಪಿಸಿದ ಸರಕಾರದ ಬಿಸಿಎಂ ಹಾಸ್ಟೆಲ್‌ನಲ್ಲಿ 16 ವರ್ಷ ಓದಿ ಎಂಬಿಬಿಎಸ್ ಮಾಡಿದ ಮೊದಲ ವಿದ್ಯಾರ್ಥಿ ಎಂಬ ಖ್ಯಾತಿಯ ಇವರ ಸಮಾಜ ಮುಖಿ ಬಡವರ ಸೇವೆಗೆ 2022 ರಲ್ಲಿ ಪ್ರತಿಷ್ಠಿತ ದೇವರಾಜ ಅರಸು ರಾಜ್ಯ ಪುರಸ್ಕಾರ (5 ಲಕ್ಷ ನಗದು ಸಹಿತ) ಅರ್ಜಿ ಹಾಕದೇ ಬಂದಿರುತ್ತದೆ.

ಇವರು ಮಂಗಳೂರು IMA ವತಿಯಿಂದ ಹೊರ ಬಂದ 'ಕಾಯಿಲೆಗಳು ಮನೆಮಾತು, ವೈದ್ಯರ ಕಿವಿಮಾತು' ಎಂಬ ಪುಸ್ತಕವನ್ನು 40 ಖ್ಯಾತ ವೈದ್ಯರೊಂದಿಗೆ ಬರೆದು ಸಂಪಾದಿಸಿದ್ದಾರೆ. ಹಾಗೆಯೇ 70 ಜನ ಹಿರಿಯ ವೈದ್ಯ ಸಾಹಿತಿಗಳ ವೈದ್ಯಕೀಯ ಜೀವನದ ಅನುಭವವುಳ್ಳ 'ಸಿರಿಂಜ್ ಹಿಡಿಯುವ ಕೈ ಪೆನ್ನು ಹಿಡಿದಾಗ' ಎಂಬ ಶ್ರೇಷ್ಠ ಗ್ರಂಥವನ್ನೂ ಬರೆದು ಪ್ರಕಟಿಸಿದ್ದಾರೆ. ಇವರ ಆತ್ಮಕಥೆ 'ಮಣ್ಣಿನಿಂದ ಮನ್ನಣೆಯತ್ತ' ಬರವಣಿಗೆಯ ಹಂತದಲ್ಲಿದ್ದು ಸದ್ಯದಲ್ಲೇ ಬಿಡುಗಡೆಯಾಗಲಿದೆ.

2025ರಲ್ಲಿ ಲಭಿಸಿದ ಡಾ. ಬಿ.ಸಿ. ರಾಯ್ ಸ್ಮಾರಕ IMA ರಾಷ್ಟ್ರೀಯ ಸಮುದಾಯ ಸೇವಾ ಪ್ರಶಸ್ತಿಯನ್ನು ನವದೆಹಲಿಯಲ್ಲಿ ಸ್ವೀಕರಿಸಿದ ಹೆಮ್ಮೆಯ ಕನ್ನಡಿಗ ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.❑

## ವಿವಿಧೆಡೆ ಗಣೇಶೋತ್ಸವ ಆಚರಣೆ



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಗಣೇಶ ಚತುರ್ಥಿ



ಶ್ರೀಗಣೇಶ ಮಿತ್ರ ಮಂಡಳಿಯ ಗಣೇಶ



ಶ್ರೀ ಗಣೇಶನ ಪೂಜೆಯಲ್ಲಿ ಭಾಗಿಯಾದ ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನ ಸದಸ್ಯೆಯರು

# ದೆಹಲಿ ಕರ್ನಾಟಕ ಸಂಘದಲ್ಲಿ
# ಭಕ್ತಿಪೂರ್ಣ ಶ್ರೀ ಗಣೇಶ ಸಾಂಸ್ಕೃತಿಕ ಉತ್ಸವ ಆಚರಣೆ









ಈ ವರ್ಷದ ಗಣೇಶ ಸಾಂಸ್ಕೃತಿಕ ಉತ್ಸವವನ್ನು ದಿನಾಂಕ 27.08.2025 ರಿಂದ 31.08.2025 ರವರೆಗೆ ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಗಣೇಶ ಚತುರ್ಥಿಯ ಶುಭ ಸಂದರ್ಭದಲ್ಲಿ ಆಗಸ್ಟ್ 27ರ ಬುಧವಾರದಂದು ಪ್ರತಿಷ್ಠಾಪನಾ ಪೂಜೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ದಂಪತಿಗಳು, ಸಂಘದ ಪದಾಧಿಕಾರಿಗಳು ಸೇರಿದಂತೆ ಇತರ ಭಕ್ತಾಧಿಗಳು ಜೊತೆಗೂಡಿ ನೆರವೇರಿಸಿದರು. ಪ್ರತಿಷ್ಠಾಪನಾ ಪೂಜಾ ಸಮಯದಲ್ಲಿ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಮತ್ತು ಉಪಾಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಹಾ ಪೂಜೆಯನ್ನು ಸಲ್ಲಿಸಿ ಶ್ರೀಗಣೇಶನ ಕೃಪೆಗೆ ಪಾತ್ರರಾದರು. ಅದೇ ದಿನ ಸಂಜೆ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ದಂಪತಿಗಳು ಭಾಗಿಯಾಗಿ ಗಣಪತಿಯ ಪೂಜೆಯನ್ನು ನೆರವೇರಿಸಿದರು.

ಎರಡನೇಯ ದಿನ, ಗುರುವಾರದ ಬೆಳಿಗ್ಗೆಯ ಪೂಜೆಯನ್ನು ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ಅವರು ನೆರವೇರಿಸಿದರು. ಅದೇ ದಿನ ಸಂಜೆಯ ಪೂಜೆಯಲ್ಲಿ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಅರುಣ್ ಸಿ.ಎಸ್. ಭಾಗಿಯಾಗಿ ನಡೆಸಿಕೊಟ್ಟರು.

ಮೂರನೇ ದಿನ, ಶುಕ್ರವಾರ ಬೆಳಗ್ಗಿನ ಪೂಜೆಯನ್ನು ಸಮಿತಿ ಸದಸ್ಯರಾದ ಶ್ರೀ ಶಶಿಕಾಂತ ಪಿ. ಪಾಟೀಲ್ ನೆರವೇರಿಸಿದರು. ರಾತ್ರಿ ಪೂಜೆಯನ್ನು ಖಜಾಂಚಿ ಶ್ರೀಮತಿ ಆಶಾಲತಾ ಎಂ. ದಂಪತಿಗಳು ನಡೆಸಿಕೊಟ್ಟರು. ನಾಲ್ಕನೇಯ ದಿನ, ಶನಿವಾರದ ಬೆಳಗ್ಗಿನ ಪೂಜೆಯನ್ನು ಜಂಟಿ ಕಾರ್ಯದರ್ಶಿ ಶ್ರೀ ನಾರಾಯಣ ಬಿ. ದಂಪತಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ದಂಪತಿಗಳು ಜೊತೆಯಾಗಿ ನೆರವೇರಿಸಿದರು. ರಾತ್ರಿ ಪೂಜೆಯನ್ನು ಶ್ರೀಮತಿ ಮಾಲಿನಿ ಪ್ರಹ್ಲಾದ ದಂಪತಿಗಳು ನೆರವೇರಿಸಿಕೊಟ್ಟರು.

ಶ್ರೀ ಗಣೇಶ ಪೂಜೆಯ ಅಂಗವಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಸಹಾ ಪದಾಧಿಕಾರಿಗಳ ಜೊತೆ ಸಂಘದ ಅಧ್ಯಕ್ಷರಿಂದ ಮರು ದಿನ ಬೆಳಿಗ್ಗೆ ಗಣಹೋಮ ಮತ್ತು ವಿಶೇಷ ಪೂಜೆಯನ್ನು ನಡೆಸಲಾಯಿತು. ಸಂಜೆಯ ಪೂಜೆಯನ್ನು ಸಾಮೂಹಿಕವಾಗಿ ನೆರವೇರಿಸಲಾಯಿತು. ಪ್ರತಿ ದಿನ ಹೂವಿನ ಅಲಂಕಾರವನ್ನು ಮಾಡಲು ಸಂಘದ ಸಿಬ್ಬಂದಿ ಸಹಕರಿಸಿದರು. ಆಯಾದಿನ ಬೆಳಿಗ್ಗೆ ಮತ್ತು ಸಂಜೆ ಪೂಜೆಯ ನಂತರ ಭಕ್ತಾಧಿಗಳಿಗೆ ತೀರ್ಥ, ಪ್ರಸಾದ ವಿನಿಯೋಗ ಮಾಡಲಾಯಿತು.

ದಿನಾಂಕ 31.08.2025 ರಂದು ಭಾನುವಾರ ಐದನೇ ಮತ್ತು ಕೊನೆ ದಿನದ ಬೆಳಗ್ಗಿನ ಪೂಜೆಯನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ದಂಪತಿಗಳು ನಡೆಸಿಕೊಟ್ಟರು. ಅದೇ ಸಂಜೆ, ಮಹಾಮಂಗಳಾರತಿಯೊಂದಿಗೆ ವಿಸರ್ಜನಾ ಪೂಜೆಯನ್ನು ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ,





ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಹಾಗೂ ಸಮಿತಿ ಸದಸ್ಯರಾದ ಶ್ರೀ ಅರುಣ್ ಸಿ.ಎಸ್. ಮತ್ತು ಶ್ರೀ ಶಶಿಕಾಂತ ಪಿ. ಪಾಟೀಲ್ ಅವರು ನಡೆಸಿಕೊಟ್ಟರು. ಕಾರ್ಯಕಾರಿ ಸಮಿತಿಯ ಇತರ ಪದಾಧಿಕಾರಿಗಳು ಮತ್ತು ಸಂಘದ ಸದಸ್ಯರು, ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಸಂಘದ ವ್ಯವಸ್ಥಾಪಕರು ಮತ್ತು ಸಿಬ್ಬಂದಿ ವರ್ಗದವರು ಹಾಗೂ ಉತ್ತಮ ಸಂಖ್ಯೆಯಲ್ಲಿ ಸೇರಿದ್ದ ಭಕ್ತಾಧಿಗಳು ಮತ್ತು ದೆಹಲಿ ಕನ್ನಡಿಗರ ಸಮ್ಮುಖದಲ್ಲಿ ಅಂತಿಮ ಪೂಜೆ ಮತ್ತು ಮಹಾ ಮಂಗಳಾರತಿ ನಡೆದು ನಂತರ ಶ್ರೀಗಣೇಶನ ಮೂರ್ತಿಯನ್ನು ವಿಸರ್ಜನೆ ಮಾಡಲಾಯಿತು. ❑

***ಅಭಿಮತ ವರದಿ***

## ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿ ವತಿಯಿಂದ
# ವಿಜೃಂಭಣೆಯ ಶ್ರೀ ಗಣೇಶೋತ್ಸವ

ದಿನಾಂಕ 31.08.2025 ರಂದು ನವದೆಹಲಿಯ ಅಶೋಕ್ ವಿಹಾರದ ಪೊಲೀಸ್ ಕಾಲೋನಿಯಲ್ಲಿರುವ ಸಮುದಾಯ ಭವನದಲ್ಲಿ ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯ ಸದಸ್ಯರು, ಕುಟುಂಬದವರು ಮತ್ತು ಉತ್ತಮ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಒಟ್ಟು ಸೇರಿ ಬಹಳ ವಿಧಿ ವಿಧಾನಯುಕ್ತ ಶ್ರೀ ಗಣೇಶೋತ್ಸವವನ್ನು ಆಚರಿಸಲಾಯಿತು.



ಭಾನುವಾರ ಬೆಳಿಗ್ಗೆ 11.40ಕ್ಕೆ ಗಣೇಶನ ಪ್ರತಿಷ್ಠಾಪನೆ ಮಾಡಿ ಪೂಜೆ ನೆರವೇರಿತು. ಮಧ್ಯಾಹ್ನ 12.30ಕ್ಕೆ ಮಹಾ ಮಂಗಳಾರತಿ ಸಲ್ಲಿಸಲಾಯಿತು. ನಂತರ ಶ್ರೀ ಗಣೇಶ ಉತ್ಸವ ಕಾರ್ಯಕ್ರಮಕ್ಕೆ ಸಹಕಾರ ನೀಡಿದವರಿಗೆ ವೇದಿಕೆ ಮೇಲೆ ಹೂಗುಚ್ಛ ನೀಡಿ ಸಮಿತಿಯ ಪರವಾಗಿ ಕೃತಜ್ಞತೆ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ದೆಹಲಿ ಪೊಲೀಸ್‌ನಲ್ಲಿ ಸುಮಾರು 28 ವರ್ಷಗಳ ಕಾಲ ಸೇವೆ ಸಲ್ಲಿಸಿ ಇತ್ತೀಚೆಗಷ್ಟೇ ನಿವೃತ್ತಿಯಾದ ಶ್ರೀ ವಿ. ನಾಗರಾಜ್ ಅವರನ್ನು ಹಾಗು ಅವರ ಪತ್ನಿ, ಗಾಯಕಿ ಶ್ರೀಮತಿ ಮಂಜುಳಾ ನಾಗರಾಜ್ ಅವರೊಂದಿಗೆ ಅಭಿನಂದಿಸಲಾಯಿತು.ಅನಂತರ ಸ್ಥಳೀಯ ಕಲಾವಿದರು, ಮಕ್ಕಳು ಮಹಿಳೆಯರು ಹಾಗು ಸಮಿತಿಯ ಸದಸ್ಯರಿಂದ ಗಾಯನ ಮತ್ತು ನೃತ್ಯ ಕಾರ್ಯಕ್ರಮ ಪ್ರಸ್ತುತಿಯಾಯಿತು. ಶ್ರೀಮತಿ ಆಶಾಲತಾ ಎಂ. ಅವರು ಅಭಿನಂದನಾ ಮತ್ತು ಕಲಾವಿದರ ಕಾರ್ಯಕ್ರಮಗಳನ್ನು ಸುಂದರವಾಗಿ ನಿರೂಪಿಸಿದರು.

ಪೂಜಾ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ನಂತರ ಪ್ರಸಾದ ರೂಪವಾಗಿ ಮಧ್ಯಾಹ್ನದ ಭೋಜನವನ್ನು ಭಕ್ತಾದಿಗಳಿಗೆ ಆಯೋಜಿಸಲಾಗಿತ್ತು.

ದೆಹಲಿ ಎನ್‌ಸಿಆರ್ ನಿಂದ ಬಂದ ಅನೇಕ ಕನ್ನಡಿಗರು ಮತ್ತು ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯ ಪದಾಧಿಕಾರಿಗಳು, ಸದಸ್ಯರು ಮತ್ತು ಕುಟುಂಬದವರು ಸೇರಿದಂತೆ ಸುಮಾರು 500 ಕ್ಕೂ ಹೆಚ್ಚು ಭಕ್ತಾದಿಗಳು ಶ್ರೀ ಗಣೇಶ ಉತ್ಸವದಲ್ಲಿ ಪಾಲ್ಗೊಂಡು ಭಗವಂತನ ಅನುಗ್ರಹಕ್ಕೆ ಪಾತ್ರರಾದರು. ❑

***ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಪದಾಧಿಕಾರಿಗಳು***

ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿ





# ನವದೆಹಲಿ ಕರ್ನಾಟಕ ಭವನದಲ್ಲಿ ಸೇವಾ ನಿವೃತ್ತಿಯ ನಂತರ ತಾಯ್ನಾಡಿಗೆ ತೆರಳುತ್ತಿರುವ ಶ್ರೀ ರವಿ ಕೆ. ಅವರಿಗೆ ಆತ್ಮೀಯ ಬೀಳ್ಕೊಡುಗೆ



ದೆಹಲಿಗೆ ತಮ್ಮ ಉದ್ಯೋಗ ನಿಮಿತ್ತ ಹಲವು ವರ್ಷಗಳ ಹಿಂದೆ ಬಂದಂತಹ ಕನ್ನಡಿಗರು ತಮ್ಮ ಸೇವಾ ನಿವೃತ್ತಿ ನಂತರ ಮರಳಿ ತಾಯ್ನಾಡಿಗೆ ಹೋಗುವುದು ಸರ್ವೇಸಾಮಾನ್ಯ. ಅವರು ದೆಹಲಿಯಲ್ಲಿದ್ದಾಗ ಇಲ್ಲಿನ ಕನ್ನಡಿಗರ ಜೊತೆ ಉತ್ತಮ ಬಾಂಧವ್ಯ ಮತ್ತು ಒಡನಾಟವಿಟ್ಟುಕೊಳ್ಳುವುದರೊಂದಿಗೆ ದೆಹಲಿ ಕರ್ನಾಟಕ ಸಂಘದ ಸದಸ್ಯರಾಗಿ ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲಿ ಮತ್ತು ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುತ್ತಾರೆ. ನಿವೃತ್ತಿ ತರುವಾಯ ತಾಯ್ನಾಡಿಗೆ ಮರಳಿ ಹೋಗುತ್ತಿರುವ ಸದಸ್ಯರಿಗೆ ಕುಟುಂಬದವರಿಗೆ ಅಭಿನಂದನೆ ಸಲ್ಲಿಸಿ, ಶುಭ ಕೋರಿ ಬೀಳ್ಕೊಡುವ ಪರಿಪಾಠವನ್ನು ದೆಹಲಿ ಕರ್ನಾಟಕ ಸಂಘವು ನಡೆಸಿಕೊಂಡು ಬಂದಿದೆ.

ಇದೇ ನಿಟ್ಟಿನಲ್ಲಿ ನವದೆಹಲಿಯಲ್ಲಿರುವ ಕರ್ನಾಟಕ ಭವನದಲ್ಲಿ ನಿರಂತರ 33 ವರ್ಷಗಳ ಕಾಲ ಸೇವೆ ಸಲ್ಲಿಸಿ ಇದೀಗ ನಿವೃತ್ತರಾಗಿ ಕರ್ನಾಟಕಕ್ಕೆ ತೆರಳುತ್ತಿರುವ ಸಂಘದ ಆಜೀವ ಸದಸ್ಯ ಶ್ರೀ ರವಿ ಕೆ. ಅವರಿಗೆ ಬೀಳ್ಕೊಡುಗೆ ನೀಡುವ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ದಿನಾಂಕ 02.08.2025 ರಂದು ಹಮ್ಮಿಕೊಳ್ಳಲಾಗಿತ್ತು. ಅವರನ್ನು ಹಾಗು ಅವರ ಕುಟುಂಬದವರನ್ನು ಆತ್ಮೀಯವಾಗಿ ಸ್ವಾಗತಿಸಿದ ಸಂಘದ ಜಂಟಿ ಕಾರ್ಯದರ್ಶಿ ಶ್ರೀ ನಾರಾಯಣ ಬಿ. ಅವರು ಮಾತನಾಡುತ್ತಾ ಬಹುಮುಖ ಪ್ರತಿಭೆ ಇರುವ ಶ್ರೀ ರವಿ ಕೆ. ಅವರು ಗಣೇಶನ ಹಬ್ಬ ಮತ್ತು ಇತರ ಸಂದರ್ಭ ಅಲಂಕಾರ ಸೇರಿದಂತೆ ತಮಗೆ ಕೊಟ್ಟಂತಹ ಯಾವುದೇ ಕೆಲಸಗಳನ್ನು ನಿಷ್ಠೆಯಿಂದ ಮಾಡುವಂತಹ, ಪರಿಸರದ ಬಗ್ಗೆ ಕಾಳಜಿಯುಳ್ಳ ವ್ಯಕ್ತಿತ್ವದವರು. ಅವರ ನಿವೃತ್ತ ಜೀವನ ಸುಖಮಯವಾಗಲಿ ಎಂದರು.

ದೆಹಲಿಯಲ್ಲಿ ಇರದಿದ್ದ ಕಾರಣ, ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಕಾರ್ಯಕ್ರಮ ಮಧ್ಯೆ ದೂರವಾಣಿ ಕರೆ ಮೂಲಕ ಮಾತನಾಡಿ ಶ್ರೀ ರವಿ ಕೆ. ಅವರಿಗೆ ಅಭಿನಂದನೆ ಸಲ್ಲಿಸುತ್ತಾ ಕರ್ನಾಟಕ ಭವನದಲ್ಲಿ ಅವರು ಮಾಡಿದ ಸೇವೆಯನ್ನು ಹಾಗು ರಾಜಧಾನಿ ದೆಹಲಿಯಲ್ಲಿ ಕರ್ನಾಟಕವನ್ನು ಮತ್ತು ಕನ್ನಡತನವನ್ನು ದೊಡ್ಡಮಟ್ಟದಲ್ಲಿ ಪ್ರಸರಿಸಿದ್ದನ್ನು ಶ್ಲಾಘಿಸಿ ಅವರ ನಿವೃತ್ತ ಜೀವನಕ್ಕೆ ಶುಭ ಕೋರಿದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ ಅವರು ಮಾತನಾಡಿ ಕರ್ನಾಟಕ ಭವನಕ್ಕೆ ಯಾರೇ ಕನ್ನಡಿಗರು ಭೇಟಿ ನೀಡಿದಾಗ ರವಿಯವರು ಅವರನ್ನು ಬಹಳ ಆತ್ಮೀಯವಾಗಿ ನೋಡಿಕೊಳ್ಳುತ್ತಿದ್ದರು. ಅವರಿಗೆ ಶುಭವಾಗಲಿ ಎಂದರು.

ಶ್ರೀ ಶಿವಕುಮಾರ್ ಮಾತನಾಡಿ ಶ್ರೀ ರವಿ ಅವರು ಒಬ್ಬ ಅಪ್ಪಟ ಪರಿಸರ ಪ್ರೇಮಿ, ಎನ್ನುತ್ತಾ ಅವರ ನಿವೃತ್ತ ಜೀವನಕ್ಕೆ ಶುಭ ಹಾರೈಸಿದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಅರುಣ್ ಸಿ.ಎಸ್. ಮಾತನಾಡುತ್ತಾ ಒಳ್ಳೆಯ ವ್ಯಕ್ತಿತ್ವದ ಶ್ರೀ ರವಿ ಅವರು ಎಲ್ಲರಿಗೂ ಪ್ರೀತಿ ಪಾತ್ರರು. ನಗುಮುಖದ ಒಡೆಯ, ಕರ್ನಾಟಕ ಭವನದಲ್ಲಿ ಹೂವಿನಿಂದ ಕಂಗೊಳಿಸುವಂತಹ ಅಲಂಕಾರವನ್ನು ಸದಾ ಮಾಡುತ್ತಿದ್ದರು, ಅವರಿಗೆ ಶುಭ ಹಾರೈಸುತ್ತೇನೆ ಎಂದರು. ಶ್ರೀ ಶಿವಪ್ಪ ಎಂ. ಅವರು ಮಾತನಾಡಿ ಮೃದು ಸ್ವಭಾವದ ಶ್ರೀ ರವಿಯವರನ್ನು ಕಳೆದ 25 ವರ್ಷದಿಂದ ನೋಡಿದ್ದೇನೆ ಅವರ ನಿವೃತ್ತಿ ಜೀವನ ಸುಖಕರವಾಗಲಿ ಎಂದರು. ಶ್ರೀ ಎಸ್. ರಮೇಶ್ ಅವರು ಮಾತನಾಡುತ್ತಾ ಶ್ರೀ ರವಿ ಅಣ್ಣನವರು ತಮ್ಮ ಸ್ವಂತ ಅಣ್ಣನಿಗಿಂತಲೂ ಹೆಚ್ಚಿನ ಪ್ರೀತಿ ವಿಶ್ವಾಸಕ್ಕೆ ಪಾತ್ರರು. ಕೆಲಸದಲ್ಲಿ ಶ್ರದ್ಧೆ ಅವರ ವ್ಯಕ್ತಿತ್ವದ ಸಂಕೇತ, ಅವರ ಮುಂದಿನ ಜೀವನಕ್ಕೆ ಶುಭಾಶಯಗಳು ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರು ಮಾತನಾಡಿ ನವದೆಹಲಿಯ ಕರ್ನಾಟಕ ಭವನದಲ್ಲಿ 33 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ ಶ್ರೀ ರವಿ ಕೆ. ಅವರು ತಮ್ಮ ಸರಳ ವಿಶೇಷ ವ್ಯಕ್ತಿತ್ವದಿಂದ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಭವನಕ್ಕೆ ಯಾರೇ ಬರಲಿ, ಯಾವುದೇ ಭೇದಬಾವವಿಲ್ಲದೆ ತಿಂಡಿ, ಊಟ ಮಾಡಿಸಿ ಕಳುಹಿಸುವುದು, ರೂಮಿನ ವ್ಯವಸ್ಥೆ ಮಾಡಿ ಕೊಡುವುದು, ಭವನದ ರಾಜ್ಯೋತ್ಸವ ಹಾಗೂ ಇತರ ಕಾರ್ಯಕ್ರಮಗಳಲ್ಲಿ ಹೂವಿನ ಅಲಂಕಾರ ಮಾಡುವುದು, ಗಿಡ ಮರ ನೆಡುವುದು ಹಾಗು ಯಾವುದೇ ತಕರಾರಿಲ್ಲದೆ ಕೊಟ್ಟಿರುವ ಕೆಲಸವನ್ನು ಸಮರ್ಪಕವಾಗಿ ಮಾಡುವ ವಿಶೇಷ ಗುಣ ಅವರದ್ದು. ಕರ್ನಾಟಕ ಭವನದಲ್ಲಿ ಈ ರೀತಿಯ ವ್ಯಕ್ತಿಗಳು ವಿರಳ, ತಾವು ಸ್ಟೋರ್ ಮ್ಯಾನೇಜರ್ ಆಗಿದ್ದ ಸಮಯ ಸೂಕ್ತ ಸಲಹೆ ಮಾರ್ಗದರ್ಶನ ನೀಡಿದ್ದರು. ಅವರ ನಿವೃತ್ತ ಜೀವನಕ್ಕೆ ಶುಭ ಹಾರೈಸುತ್ತೇನೆ ಎಂದರು. ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಅವರು ಮಾತನಾಡಿ ಶ್ರೀ ರವಿಯವರಲ್ಲಿ ರಾಷ್ಟ್ರಕವಿ ಕುವೆಂಪು ಅವರಂತಹ ಪರಿಸರ ಪ್ರೇಮ ಕಾಣಬಹುದು, ಅವರೊಬ್ಬ ಉತ್ತಮ ಸಂಘಟಕರು, ನಾನು, ನನ್ನಿಂದ ಎನ್ನುವ ಈ ಕಾಲದಲ್ಲಿ ಪ್ರತಿಯೊಬ್ಬರಿಗೂ ಸಹಾಯ ಮಾಡುವ ವ್ಯಕ್ತಿಯಾದ ಅವರದ್ದು ಹೂವಿನ ಅಲಂಕಾರ ಮಾಡುವಲ್ಲಿ ಎತ್ತಿದ ಕೈ. ಅವರಿಗೆ ಮತ್ತು ಕುಟುಂಬದವರಿಗೆ ಶುಭಾಶಯಗಳು ಎಂದರು.

ಅನಂತರ ಶ್ರೀ ರವಿ ಕೆ. ಅವರಿಗೆ ಸಂಘದ ಪರವಾಗಿ ಗೌರವಿಸಿ ಅಭಿನಂದನೆ ಸಲ್ಲಿಸಲಾಯಿತು. ಈ ಸಂದರ್ಭ ಅವರ ಧರ್ಮಪತ್ನಿ ಶ್ರೀಮತಿ ಲಕ್ಷ್ಮೀ, ಮಗ ಶ್ರೀ ಭಾನುಪ್ರಸಾದ್, ಮಗಳು ಶ್ರೀಮತಿ ಲಾವಣ್ಯ, ಅಳಿಯ ಶ್ರೀ ಗೋಪಿನಾಥ್ ಮತ್ತು ಮೊಮ್ಮಗಳು ಕು. ಸೋನಾಕ್ಷಿ ಮತ್ತು ಕರ್ನಾಟಕ ಭವನದ ಅವರ ಸಹೋದ್ಯೋಗಿಗಳು ಉಪಸ್ಥಿತರಿದ್ದರು. ಅಭಿನಂದನೆ ಸ್ವೀಕರಿಸಿ ಮಾತನಾಡಿದ ರವಿ ಅವರು ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು ಎಂಬ ಕವಿವಾಣಿ ಉಲ್ಲೇಖಿಸುತ್ತಾ ದೆಹಲಿಯ ಎಲ್ಲ ಕನ್ನಡಿಗರಿಗೂ ಸಹಾಯ ಮಾಡಲು ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟ, ಹಲವಾರು ಜನರ ಸೇವೆ ಮಾಡಿದ್ದು ನನ್ನ ಭಾಗ್ಯ. ಈಗ ನನ್ನ ಎಲ್ಲ ಕಷ್ಟಗಳೂ ಪರಿಹಾರವಾಗಿವೆ. ನಮ್ಮ ಸಂಸ್ಥೆ ನಮಗೆ ಮುಖ್ಯ, ಅದು ಚೆನ್ನಾಗಿದ್ದರೆ ನಮ್ಮ ಮನೆ ಚೆನ್ನಾಗಿರುತ್ತದೆ. ಎಲ್ಲರೂ ಶ್ರದ್ಧೆಯಿಂದ ಕೆಲಸ ಮಾಡಬೇಕು. ಎಲ್ಲರಿಗೂ ಶುಭವಾಗಲಿ, ತಮ್ಮನ್ನು ಅಭಿನಂದಿಸಿದ ದೆಹಲಿ ಕರ್ನಾಟಕ ಸಂಘಕ್ಕೆ ಕೃತಜ್ಞತೆಗಳು ಎಂದರು. ಅವರ ಪತ್ನಿ ಶ್ರೀಮತಿ ಲಕ್ಷ್ಮೀ ಮಾತನಾಡಿ ಉತ್ತಮ ವ್ಯಕ್ತಿತ್ವದ ಇಂತಹ ಗಂಡ ಸಿಕ್ಕಿದ್ದು ನನ್ನ ಭಾಗ್ಯ ಎಲ್ಲರಿಗೂ ಧನ್ಯವಾದಗಳು ಎಂದರು. ಕೊನೆಯಲ್ಲಿ ರವಿ ಕೆ. ಮತ್ತು ಕುಟುಂಬದವರಿಗೆ ಶುಭಕೋರಿ ಆತ್ಮೀಯವಾಗಿ ಬೀಳ್ಕೊಡಲಾಯಿತು.❑

*ಅಭಿಮತ ವರದಿ*




ಪ್ರಾರ್ಥನಾ ಗೀತೆ ಹಾಡಿದ ಸ್ಥಳೀಯ ಕನ್ನಡಿಗರ ಮಕ್ಕಳು

### ಅಗಲಿದ ಹಿರಿಯ ದೆಹಲಿ ಕನ್ನಡತಿ

# ಶ್ರೀಮತಿ ಜಮುನಾ ಸಿ. ಮಠದ ಅವರಿಗೆ ನುಡಿನಮನದ ಶ್ರದ್ಧಾಂಜಲಿ



ದೆಹಲಿ ಕರ್ನಾಟಕ ಸಂಘದ ಹಿರಿಯ ಆಜೀವ ಸದಸ್ಯರಾದ ಶ್ರೀ ಚೆನ್ನು ಎಸ್. ಮಠದ ಅವರ ಧರ್ಮಪತ್ನಿ ಶ್ರೀಮತಿ ಜಮುನಾ ಸಿ. ಮಠದ ಅವರು 22.07.2025 ರಂದು ದೆಹಲಿಯಲ್ಲಿ ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಜಂಟಿ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ ಮತ್ತು ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು ಮತ್ತು ದೆಹಲಿ ಕರ್ನಾಟಕ ಸಂಘದ ಬೆಳವಣಿಗೆಗೆ ವಿಶೇಷ ಆಸಕ್ತಿಯನ್ನು ಹೊಂದಿದ್ದರು.

ಅವರ ಆತ್ಮಕ್ಕೆ ಮೋಕ್ಷ ಸಿಗಲಿ ಹಾಗು ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಪತಿ, ಮಕ್ಕಳು ಮತ್ತು ಕುಟುಂಬ ವರ್ಗಕ್ಕೆ ದೇವರು ದಯಪಾಲಿಸಲಿ ಎಂದು ದೆಹಲಿ ಕರ್ನಾಟಕ ಸಂಘ ಪ್ರಾರ್ಥಿಸುತ್ತದೆ. ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಈ ನುಡಿನಮನದ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಣೆ.

ಶ್ರೀಮತಿ ಜಮುನಾ ಸಿ. ಮಠದ ಅವರು ಹಠಾತ್ತಾಗಿ ನಿಧನರಾಗಿದ್ದು ದೆಹಲಿ ಕನ್ನಡಿಗರಿಗೆ ತುಂಬಲಾರದ ನಷ್ಟವಾಗಿದೆ. ಬೆಂಗಳೂರು, ಧಾರವಾಡ, ದಾವಣಗೆರೆಯಲ್ಲಿ ಸ್ವಲ್ಪ ಸಮಯ ಕಳೆದು ಮತ್ತೆ ದೆಹಲಿಗೆ ಬಂದು ಮಗಳು ನಂದಿನಿ ಮತ್ತು ಪತಿ ಶ್ರೀ ಚೆನ್ನು ಎಸ್. ಮಠದ ಅವರೊಂದಿಗೆ ವಾಸವಾಗಿದ್ದ ಶ್ರೀಮತಿ ಜಮುನಾ ಸಿ. ಮಠದ ಅವರು ಇತ್ತೀಚೆಗಷ್ಟೇ ತಮ್ಮ ಮಗ ಕು. ವಿನಯನನ್ನು ಭೇಟಿ ಮಾಡಲು ಜಪಾನ್ ಪ್ರವಾಸ ಕೈಗೊಂಡು ದೆಹಲಿಗೆ ಮರಳಿದ್ದರು. ಕಳೆದ ಸ್ವಲ್ಪ ಸಮಯ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ದೆಹಲಿ ಕನ್ನಡಿಗರನ್ನು ಇಷ್ಟು ಬೇಗ ಬಿಟ್ಟು ಹೋಗುತ್ತಾರೆಂದು ಯಾರೂ ಊಹಿಸಿರಲಿಲ್ಲ.

ದಿನಾಂಕ 22.07.2025 ರಂದು ಸಂಜೆ ದೆಹಲಿ ಕರ್ನಾಟಕ ಸಂಘದ ಪರಿಸರದಲ್ಲಿ ಅವರ ಪಾರ್ಥೀವ ಶರೀರವನ್ನು ತಂದು ಅಂತಿಮ ದರ್ಶನಕ್ಕಾಗಿ ಅವಕಾಶ ಮಾಡಿಕೊಡಲಾಗಿತ್ತು. ಅವರ ಹಿತೈಷಿಗಳು, ಬಂಧುಗಳು ಹಾಗು ನೂರಾರು ದೆಹಲಿ ಕನ್ನಡಿಗರು ಆ ವೇಳೆ ಬಂದು ತಮ್ಮ ಗೌರವ ನಮನ ಸಲ್ಲಿಸಿದರು. ತದ ನಂತರ ಅವರ ಮೃತದೇಹವನ್ನು ಕರ್ನಾಟಕಕ್ಕೆ ರವಾನಿಸಿ, ಧಾರವಾಡ ಮುಖೇನ ಅಂತಿಮವಾಗಿ ದಾವಣಗೆರೆಯಲ್ಲಿ ಅವರ ಕುಟುಂಬದವರ ಸಂಪ್ರದಾಯದಂತೆ ಅಂತಿಮ ಸಂಸ್ಕಾರ ನೆರವೇರಿತು.

ಅವರ ಕುಟುಂಬದವರು ದೆಹಲಿ ಮರಳಿ ಬಂದ ತರುವಾಯ ದಿನಾಂಕ 09.08.2025 ರಂದು ಸಂಘದ ಸೆಮಿನಾರ್ ಹಾಲ್‌ನಲ್ಲಿ ಅವರಿಗೆ ನುಡಿ ನಮನ ಸಲ್ಲಿಸಲು ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿತ್ತು. ಇದರಲ್ಲಿ ಸಂಘದ ಪದಾಧಿಕಾರಿಗಳು ಹಾಗು ಸದಸ್ಯರಲ್ಲದೇ ಅನೇಕ ಹಿರಿಯ ದೆಹಲಿ ಕನ್ನಡಿಗರು ಭಾಗವಹಿಸಿದ್ದರು. ಮೊದಲಿಗೆ ಅವರ ಭಾವಚಿತ್ರಕ್ಕೆ ಎಲ್ಲರೂ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು. ಅನಂತರ ಅವರ ಆತ್ಮಕ್ಕೆ ಶಾಂತಿ ಕೋರಲು ಒಂದು ನಿಮಿಷ ಮೌನಾಚರಣೆ ಮಾಡಲಾಯಿತು. ಆಗಮಿಸಿದ್ದ ಎಲ್ಲರನ್ನು ಸ್ವಾಗತಿಸಿದ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡುತ್ತಾ, ತಾವು ಈ ಹಿಂದೆ ಎರಡು ಬಾರಿ ಕಾರ್ಯದರ್ಶಿಯಾಗಿದ್ದ ಕಾಲದಲ್ಲಿ ಸಂಘದ ಕೆಲಸ ಕಾರ್ಯಗಳಿಗೆ ಹೆಗಲಿಗೆ ಹೆಗಲು ಕೊಟ್ಟು ಜಮುನಕ್ಕ ಅವರು ಸಕ್ರಿಯವಾಗಿ ಸಂಘಕ್ಕೆ ಅಮೂಲ್ಯವಾದ ಸೇವೆ ಮತ್ತು ಸಮಯ ನೀಡಿದ್ದರಲ್ಲದೆ ಸಂಘಕ್ಕೆ ಇನ್ನೊಂದು ಹೊಸ ಜಾಗ ಪಡೆಯುವ ನಿಟ್ಟಿನಲ್ಲಿ ಮಾಡುತ್ತಿರುವ ತಮ್ಮ ಪ್ರಯತ್ನಕ್ಕೆ ಬೆಂಬಲ ಸೂಚಿಸಿದ್ದರು. ದೆಹಲಿ ಕರ್ನಾಟಕ ಸಂಘ, ಕನ್ನಡ ಶಾಲೆ, ಬಸವ ಇಂಟರ್‌ನ್ಯಾಷನಲ್ ಹಾಗೂ ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ಗಳ ಜೊತೆ ಸಹಕಾರ ನೀಡಿದ್ದರು. ಹುಬ್ಬಳ್ಳಿ ಧಾರವಾಡ ಶೈಲಿಯ ಉಡುಪು ಧರಿಸುವ ಆಸಕ್ತಿ, ಕಲಾತ್ಮಕವಾಗಿ ಚೆನ್ನಾಗಿ ಕಾಣಬೇಕೆಂಬ ಹಂಬಲವಿದ್ದ ಅವರು, ಸಂಘದ





ಕನ್ನಡ ಕಲಿಕಾ ತರಗತಿಗಳನ್ನು ಪ್ರಾರಂಭದ ಹಂತದಲ್ಲಿ ನಡೆಸಿಕೊಟ್ಟಿದ್ದರು ಹಾಗು ದಿನಕರ ಫೌಂಡೇಶನ್ ಆರಂಭಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು ಎಂದರು.

ಸಂಘ ನಮ್ಮದು ಎಂಬ ಮನೋಭಾವ, ನಾಟಕ, ಗಾಯನ, ನೃತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಉತ್ಸಾಹ ಹಾಗೂ ಎಲ್ಲ ದೆಹಲಿ ಕನ್ನಡಿಗರನ್ನ ಒಂದೇ ರೀತಿಯಾಗಿ ಪ್ರೀತಿ ವಿಶ್ವಾಸದಿಂದ ಕಾಣುವ ಗುಣಗಳು ಅವರಲ್ಲಿ ಇತ್ತು. ಅವರು ನಮ್ಮನ್ನಗಲಿರುವುದು ದುಃಖಕರ ವಿಷಯ, ನಮ್ಮ ಕುಟುಂಬದ ಸದಸ್ಯರಲ್ಲಿ ಒಬ್ಬರನ್ನು ಕಳೆದುಕೊಂಡಂತೆ ಭಾಸವಾಗುತ್ತಿದೆ, ನಮ್ಮ ಕಾರ್ಯಕಾರಿ ಸಮಿತಿಯ ಎಲ್ಲಾ ಪದಾಧಿಕಾರಿಗಳು, ಸದಸ್ಯರು ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತೇನೆ, ಅವರ ಆತ್ಮಕ್ಕೆ ಮೋಕ್ಷ ಸಿಗಲಿ ಮತ್ತು ಅವರ ಕುಟುಂಬದವರಿಗೆ ಅವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದರು.

ನಂತರ ಮಾತನಾಡಿದ ಹಿರಿಯ ದೆಹಲಿ ಕನ್ನಡಿಗ ಶ್ರೀ ವಿ.ವಿ. ಬಿರಾದಾರ ಅವರು, ಶ್ರೀಮತಿ ಜಮುನಾ ಮಠದ ಅವರ ನಿಧನ ಸೋಜಿಗ ಹಾಗು ಕಾಣದ ಲೋಕದಲ್ಲಿ ಕುಳಿತಿದ್ದೇವೆ ಅನಿಸುತ್ತೆ, ಕಳೆದ ಹಲವಾರು ವರ್ಷಗಳಿಂದ ಅವರನ್ನು ನಾನು ನೋಡಿದ್ದೇನೆ, ವ್ಯಕ್ತಿ ಸಂಬಂಧಕ್ಕಿಂತ ಭಕ್ತಿ ಸಂಬಂಧ ಶ್ರೇಷ್ಠ, ಅವರ ದೇಹ ಕರ್ನಾಟಕದಲ್ಲಿದ್ದರೂ ಮನಸ್ಸು ದೆಹಲಿಯಲ್ಲಿತ್ತು, ದೆಹಲಿಗೆ ಪುನಃ ಬಂದು ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು, ಇಲ್ಲಿನ ಕನ್ನಡಿಗರಿಗೆ ಅವರು ಮಾಡಿದ ಸೇವೆ ಅಪಾರ, ಅವರದ್ದು ತ್ಯಾಗಮಯಿ ಜೀವನ, ಬೇಗ ನಮ್ಮೆಲ್ಲರನ್ನು ಅಗಲಿದ್ದು ದುಃಖದಾಯಕ, ಅವರ ಮಕ್ಕಳ ಮದುವೆ ಬೇಗ ಆಗಲಿ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದರು.

ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷೆಯಾದ ಶ್ರೀಮತಿ ಸರೋಜಮಾಧವ ಅವರು ಮಾತನಾಡಿ, ಬಹಳ ಒಳ್ಳೆಯ ವ್ಯಕ್ತಿತ್ವದವರಾಗಿದ್ದ ಶ್ರೀಮತಿ ಜಮುನಾ ಮಠದ ಅವರು ಸ್ನೇಹಾ ಆಸೋಸಿಯೇಷನ್‌ನ ಉತ್ತಮ ಸದಸ್ಯೆಯಾಗಿದ್ದರು, ಕಳೆದ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಸ್ನೇಹಾ ತಂಡದ ಜೊತೆ ಲತಾ ಮಂಗೇಷ್ಕರ್ ಪಾತ್ರ ವಹಿಸಿದ್ದರು, ಸಂಘದ ಜೊತೆ ಆಳವಾದ ಸಂಬಂಧ ಹೊಂದಿದ್ದ ಅವರಿಗೆ ಎಲ್ಲರೊಂದಿಗೆ ಸೇರುವ ಅಭಿಲಾಷೆ ಮತ್ತು ಉತ್ಸಾಹವಿತ್ತು, ಅವರದ್ದು ಇಷ್ಟು ಬೇಗ ತೀರಿ ಹೋಗುವ ವಯಸ್ಸಲ್ಲ, ಅವರ ನಿಧನದ ಸುದ್ದಿ ಬಹಳ ಅಘಾತಕರ, ತನ್ನ ಮಗಳನ್ನು ತನ್ನ ಕಾಲ ಮೇಲೆ ತಾನು ನಿಲ್ಲುವಂತೆ ಮಾಡಿದ ಮಹಾತಾಯಿ ಆಗಿದ್ದರು, ಮಗನ ಮದುವೆ ಚಿಂತೆ ಅವರಿಗೆ ಇತ್ತು, ಅವರ ಮಕ್ಕಳಿಗೆ ಒಳ್ಳೆಯ ಭವಿಷ್ಯ ಸಿಗಲಿ, ಶ್ರೀಮತಿ ಜಮುನಾ ಮಠದ ಅವರಿಗೆ ನನ್ನ ನಮನಗಳು ಎಂದರು.

ಇನ್ನೊರ್ವ ಹಿರಿಯ ದೆಹಲಿ ಕನ್ನಡಿಗ ಶ್ರೀ ಎನ್.ಎ. ಮಾಧವ ಅವರು ಮಾತನಾಡಿ, ಶ್ರೀಮತಿ ಜಮುನಾ ಮಠದ ಅವರು ಸಾಧಾರಣ ಮಹಿಳೆಯಾಗಿರಲಿಲ್ಲ,

ಸರಳ, ಸಜ್ಜನಿಕೆಯ ರೂಪ, ಎಲ್ಲರನ್ನು ಯಾವುದೇ ಭೇದ ಭಾವವಿಲ್ಲದೇ ನೋಡುವ ವ್ಯಕ್ತಿತ್ವ, ಎಲ್ಲ ಸಂಘ ಸಂಸ್ಥೆಗಳ ಕಾರ್ಯಗಳಿಗೆ ನೆರವು ನೀಡುತ್ತಿದ್ದರು, ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದರು. ಡಾ. ಅಶೋಕ ಎಂ. ಈಟಿ ಅವರು ಮಾತನಾಡಿ ಶ್ರೀಮತಿ ಜಮುನಾ ಮಠದ ಅವರದ್ದು ಒಂದು ಕಲಾತ್ಮಕ ಕುಟುಂಬ, ಧಾರವಾಡ ಶೈಲಿ ವೇಷಭೂಷಣ, ಸಂಘಕ್ಕೆ ಪೂರಕವಾದ ಕಾರ್ಯಕ್ರಮಗಳಲ್ಲಿ ಕಲೆ ಬಗ್ಗೆ ಪ್ರೋತ್ಸಾಹ ನೀಡುತ್ತಿದ್ದರು, ನಮ್ಮಿಂದ ಅಗಲಿದ ಅವರಿಗೆ ಶ್ರದ್ಧಾಂಜಲಿ ಎಂದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಡಾ. ವೈ ಅವನೀಂದ್ರನಾಥ್ ರಾವ್ ಅವರು ಮಾತನಾಡುತ್ತಾ, ಶ್ರೀಮತಿ ಜಮುನಾ ಮಠದ ಅವರ ನಿಧನ ಅಕಾಲಿಕ, ಅವರು ದೆಹಲಿ ಕರ್ನಾಟಕ ಸಂಘವನ್ನು ತನ್ನ ಮನೆಯ ಹಾಗೆ ತುಂಬಾ ಹಚ್ಚಿಕೊಂಡಿದ್ದರು, ಕಳೆದ ನಾಲ್ಕು ದಶಕಗಳಿಂದ ಅವರು ಮತ್ತು ಅವರ ಪತಿ ಶ್ರೀ ಚೆನ್ನು ಮಠದ ಅವರೊಂದಿಗೆ ಒಡನಾಟವಿತ್ತು, ಎಂದರು. ಶ್ರೀಮತಿ ಜಮುನಾ ಅವರೊಂದಿಗೆ ತಾವು ಸಹಾ ಏಕಕಾಲದಲ್ಲಿ ಸಂಘದ ಕಾರ್ಯಕಾರಿ ಸಮಿತಿ ಉಪಾಧ್ಯಕ್ಷರಾಗಿದ್ದನ್ನು ಸ್ಮರಿಸಿಕೊಂಡ ಅವರು ಜಮುನಾ ಅವರಿಗೆ, ನಾಟಕದಲ್ಲಿ ನಟನೆ ರಚನೆ ಮತ್ತು ಪ್ರಸಾದನ ಮಾಡುವಲ್ಲಿ ಆಸಕ್ತಿ ಇತ್ತು, ಅಭಿಮತದಲ್ಲಿ ಅನೇಕ ಕವನಗಳನ್ನು ಬರೆದಿದ್ದಾರೆ, ಕೆಲವು ಕನ್ನಡದ ನಿಯತಕಾಲಿಕಗಳಲ್ಲಿಯೂ ಒಳ್ಳೆಯ ಸಾಹಿತಿಯಾಗಿ ಲೇಖನ ಬರೆದಿದ್ದಾರೆ, ಎಲ್ಲ ಸಂಘ ಸಂಸ್ಥೆಗಳ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದರು, ಅವರ ನಿಧನ ಎಲ್ಲರಿಗೂ ನಷ್ಟ ಮತ್ತು ಶೂನ್ಯದ ವಾತಾವರಣ ಉಂಟುಮಾಡಿದೆ, ಅವರಿಗೆ ಸದ್ಗತಿ ದೊರಕಲಿ ಎಂದು ಪ್ರಾರ್ಥಿಸಿದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಪ್ರಭಾಕರ ಮಡ್ಡಿತೋಟ ಅವರು ಶ್ರೀ ಚೆನ್ನು ಎಸ್. ಮಠದ ಮತ್ತು ಶ್ರೀಮತಿ ಜಮುನಾ ಸಿ. ಮಠದ  ಅವರಿಬ್ಬರು ಜೋಡಿಹಕ್ಕಿ ಹಾಗೆ ಇದ್ದಾರೆ ಎಂದು ಕೆಲವೊಮ್ಮೆ ತಾವು ಹೇಳುತ್ತಿದ್ದನ್ನು ಹಾಗು ಸಂಘದ ಯೋಗ ದಿನಾಚರಣೆಯಲ್ಲಿ ಅವರು ಪಾಲ್ಗೊಂಡಿದ್ದನ್ನು ಜ್ಞಾಪಿಸಿಕೊಂಡರು. ಡಾ. ಅಶೋಕ್ ಗೋನಾಲ್ ಅವರು ಮಾತನಾಡಿ ಶ್ರೀಮತಿ ಜಮುನಾ ಸಿ. ಮಠದ ಅವರ ನಿಧನ ಒಂದು ಶಾಕಿಂಗ್ ನ್ಯೂಸ್, ಅವರು ತಮ್ಮ ಮನೆಗೆ ಬಂದವರಿಗೆಲ್ಲ ಬಹಳ ಆತ್ಮೀಯತೆಯಿಂದ ನೋಡಿಕೊಂಡು ಊಟ ಮಾಡಿಸದೇ ಕಳಿಸುತ್ತಿರಲಿಲ್ಲ, ಅವರು ಎಲ್ಲರಿಗೂ ಅಚ್ಚುಮೆಚ್ಚಿನ ಸಹೋದರಿಯಾಗಿದ್ದರು, ಸಂಘಕ್ಕಾಗಿ ಬಹಳ ಕೊಡುಗೆ ನೀಡಿದ್ದಾರೆ, ಅವರ ಎಲ್ಲಾ ಆಸೆಗಳು ಮಕ್ಕಳಲ್ಲಿ ಈಡೇರಲಿ, ಅವರ ಅಕಾಲಿಕ ಮರಣದ ದುಃಖವನ್ನು ಸಹಿಸುವ ಶಕ್ತಿಯನ್ನು ಕುಟುಂಬಕ್ಕೆ ನೀಡಲೆಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದರು.

ಶ್ರೀಮತಿ ಜಮುನಾ ಮಠದ ಅವರ ಪತಿ ಶ್ರೀ ಚೆನ್ನು ಎಸ್. ಮಠದ ಅವರು ಮಾತನಾಡಿ ತಮ್ಮ ಪತ್ನಿ ಪ್ರತಿ ಬಾರಿ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಕ್ಕೆ ಬರುವಾಗ ತವರು ಮನೆಗೆ ಹೋಗುವಂತೆ ತಮ್ಮನ್ನು ತಯಾರಿ ಮಾಡಿಕೊಂಡು ಬರುತ್ತಿದ್ದರು, ತಮ್ಮ ಹೆಚ್ಚಿನ ಸಂಬಂಧಿಕರು ದೆಹಲಿಯಲ್ಲಿಯೇ ಇದ್ದಾರೆ ಎಂದು ಆಗಾಗ್ಗ ಹೇಳುತ್ತಿದ್ದರು, ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲಿ ತಪ್ಪದೇ ಭಾಗವಹಿಸುತ್ತಿದ್ದರು, ಶ್ರೀ ಕೆ.ಆರ್. ನಾಗರಾಜ ಮತ್ತು ಶ್ರೀ ಸಿ. ಎಂ. ನಾಗರಾಜ ಇವರಿಬ್ಬರನ್ನು ಅಣ್ಣ ತಮ್ಮಂದಿರಂತೆ ನೋಡಿಕೊಂಡಿದ್ದರು, ತಮ್ಮ ಪತ್ನಿ ತಮಗೆ ಕಲಿಸಿದ ಪಾಠವೆಂದರೆ, ಖರ್ಚು ಮಾಡುವುದನ್ನ ಕಡಿಮೆ ಮಾಡುವುದನ್ನ ಹಾಗೂ ಸದಾ ಉಳಿತಾಯ ಮಾಡುವುದಕ್ಕೆ ಒತ್ತು ಕೊಟ್ಟಿದ್ದರು, ಅವರ ಆರೋಗ್ಯ ಹಠಾತ್ತಾಗಿ ಕ್ಷೀಣಿಸಿದಾಗ, ತಾವು ದೆಹಲಿಯಲ್ಲಿ ಇರಲಿಲ್ಲ, ಆ ಸಮಯದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಮತ್ತು ವ್ಯವಸ್ಥಾಪಕರಾದ ಶ್ರೀ ದೇವಯ್ಯನವರು ಮಾಡಿದ ಸಹಾಯ ಎಂದಿಗೂ ಮರೆಯಲಾಗದು, ಎಲ್ಲರೂ ಎಷ್ಟೇ ಕಷ್ಟಪಟ್ಟರೂ ಅವರನ್ನು ಉಳಿಸಿಕೊಳ್ಳಲಾಗಲಿಲ್ಲ, ನಮ್ಮ ಕುಟುಂಬಕ್ಕೆ ನೆರವಾದ ದೆಹಲಿ ಕರ್ನಾಟಕ ಸಂಘಕ್ಕೆ ಹಾಗೂ ಸಮಸ್ತ ದೆಹಲಿ ಕನ್ನಡಿಗರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಭಾವುಕರಾಗಿ ಹೇಳಿದರು.

ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಹಲವಾರು ಹಿರಿಯ ಕನ್ನಡಿಗರು, ದೆಹಲಿ ಕರ್ನಾಟಕ ಸಂಘದ ಮತ್ತು ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಸದಸ್ಯರುಗಳು ಭಾಗಿಯಾಗಿದ್ದರು.

ಕೊನೆಯಲ್ಲಿ ಮಾತನಾಡಿದ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ಅಭಿಮತ ಪತ್ರಿಕೆಯ ಪ್ರಧಾನ ಸಂಪಾದಕ ಶ್ರೀ ಕೆ.ಎಸ್. ಮೂರ್ತಿಯವರು, ಶರಣರ ಬಾಳನ್ನ ಅವರ ಮರಣದಲ್ಲಿ ನೋಡು ಎನ್ನುವಂತೆ, ಶ್ರೀಮತಿ ಜಮುನಾ ಮಠದ ಅವರ ಅಂತಿಮ ದರ್ಶನಕ್ಕೆ ಬಂದ ಜನರೇ ಸಾಕ್ಷಿ, ಹುಟ್ಟಿದಾಗ ಉಸಿರಿರುತ್ತದೆ, ಹೆಸರು ಇರುವುದಿಲ್ಲ, ಮರಣ ಹೊಂದಿದಾಗ ಉಸಿರಿರುವುದಿಲ್ಲ ಹೆಸರಿರುತ್ತದೆ ಎನ್ನುವುದು ಶ್ರೀಮತಿ ಜಮುನಕ್ಕ ಅವರಿಗೆ ಅನ್ವಯಿಸುತ್ತದೆ, ಅವರು ಸರಳ ಸಜ್ಜನಿಕೆ ವ್ಯಕ್ತಿತ್ವದ ಶಿಸ್ತಿನ ಸಿಪಾಯಿ ಆಗಿದ್ದರು, ಅವರಿಗೆ ಸರಿಸಾಟಿಯಾಗಿ ಪತಿ ಚೆನ್ನು ಎಸ್. ಮಠದ ಅವರು ದಾಂಪತ್ಯ ಜೀವನದಲ್ಲಿ ಜೊತೆಯಾಗಿ ಹೆಜ್ಜೆ ಹಾಕಿದ್ದರು, ಅವರ ಮುದ್ದಿನ ಇಬ್ಬರು ಮಕ್ಕಳಾದ ಕುಮಾರಿ ನಂದಿನಿ ಮತ್ತು ಕುಮಾರ ವಿನಯ್ ತಂದೆ ತಾಯಿಯರ ಸದ್ಗುಣಗಳನ್ನು ತಮ್ಮಲ್ಲಿ ರೂಡಿಸಿಕೊಂಡಿದ್ದಾರೆ, ಶ್ರೀಮತಿ ಜಮುನಾ ಅಕ್ಕ ಅವರ ನಿಧನ ಎಲ್ಲ ದೆಹಲಿ ಕನ್ನಡಿಗರಿಗೆ ಬಹಳ ದುಃಖ ತಂದಿದೆ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸದಸ್ಯರ ಪರವಾಗಿ ಹಾಗು ಸಮಸ್ತ ದೆಹಲಿ ಎನ್‌ಸಿಆರ್ ಕನ್ನಡಿಗರ ಪರವಾಗಿ ಅವರಿಗೆ ಈ ನುಡಿ ನಮನದ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇವೆ, ಈ ಕಾರ್ಯಕ್ರಮದಲ್ಲಿ ಭಾಗಿಯಾಗಿ ತಮ್ಮ ಗೌರವ ನಮನಗಳನ್ನ ಅರ್ಪಿಸಿದ ಎಲ್ಲರಿಗೂ ಸಂಘದ ಪರವಾಗಿ ಧನ್ಯವಾದಗಳು ಎಂದರು. ❑

***ಅಭಿಮತ ವರದಿ***

## ನವದೆಹಲಿಯ ಮೂರೂ ಕರ್ನಾಟಕ ಭವನಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ

ನವದೆಹಲಿಯ ಮೂರೂ ಕರ್ನಾಟಕ ಭವನಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ವೈಭವ ಸಡಗರದಿಂದ ಆಚರಿಸಲಾಯಿತು. ಕರ್ನಾಟಕ ಭವನ ಕಾವೇರಿಯಲ್ಲಿ ನಿವಾಸಿ ಆಯುಕ್ತರಾದ ಶ್ರೀಮತಿ ಇಂಕೊಂಗ್ಲಾ ಜಮೀರ್ ಐಎಎಸ್., ಕರ್ನಾಟಕ ಭವನ ಶರಾವತಿಯಲ್ಲಿ ಅಪರ ನಿವಾಸಿ ಆಯುಕ್ತರಾದ ಶ್ರೀಮತಿ ಆಕೃತಿ ಬನ್ಸಾಲ್ ಐ.ಎ.ಎಸ್., ಹಾಗೂ ಕರ್ನಾಟಕ ಭವನ ಭೀಮಾದಲ್ಲಿ ಸಹಾಯಕ ನಿವಾಸಿ ಆಯುಕ್ತ ಶ್ರೀ ಸಿ. ಮೋಹನ್ ಕುಮಾರ್ ಅವರುಗಳು ಧ್ವಜಾರೋಹಣ ಮಾಡಿದರು. ಕರ್ನಾಟಕ ಭವನದ ಅಧಿಕಾರಿಗಳು, ವ್ಯವಸ್ಥಾಪಕರುಗಳು ಸೇರಿದಂತೆ ಭವನಗಳ ಸಿಬ್ಬಂದಿ ಹಾಗೂ ಅವರ ಪರಿವಾರದವರೂ ಸಹ ಈ ಸಂದರ್ಭದಲ್ಲಿ ಹಾಜರಿದ್ದರು. ❑

***ಎಸ್. ರಮೇಶ***
ಕರ್ನಾಟಕ ಭವನ







# ದೆಹಲಿಯಲ್ಲಿ ರಾಷ್ಟ್ರೀಯ ಸಮ್ಮೇಳನ–ಪಾಲೆದ ಕಶಾಯ ಮತ್ತು ಆಧುನಿಕ ಔಷಧ ವಿಜ್ಞಾನ ಬಗ್ಗೆ ತುಳುವರ ಪ್ರಾಚೀನ ಜ್ಞಾನದ ಬಗ್ಗೆ ಚರ್ಚೆ

"ಪಾಲೆದ ಕಷಾಯ ಮತ್ತು ಆಧುನಿಕ ಔಷಧ ವಿಜ್ಞಾನದಲ್ಲಿ ಅದರ ಅನ್ವಯಿಕೆಗಳು" ಎಂಬ ವಿಷಯದ ಕುರಿತು ರಾಷ್ಟ್ರೀಯ ಸಮ್ಮೇಳನವು ಇತ್ತೀಚೆಗೆ ನವದೆಹಲಿಯ ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಯಶಸ್ವಿಯಾಗಿ ನಡೆಯಿತು. ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿ ಮತ್ತು ಶ್ರೀ ಉಸ್ಮಾನ್ ಅಬ್ದುಲ್ ಷರೀಫ್ ಅವರು 'ತುಳು ಚಾನೆಲ್'–youtube.com/@ತುಳು ಚಾನೆಲ್ ಸಹಯೋಗದೊಂದಿಗೆ ಆಯೋಜಿಸಿದ್ದ ಈ ಕಾರ್ಯಕ್ರಮವು, ಪ್ರಮುಖ ವೈದ್ಯಕೀಯ ವೃತ್ತಿಪರರು ಮತ್ತು ಸಾಂಸ್ಕೃತಿಕ ಉತ್ಸಾಹಿಗಳನ್ನು ಒಟ್ಟುಗೂಡಿಸಿ, ಸಾಂಪ್ರದಾಯಿಕ ತುಳುವ ತಯಾರಿಕೆಯಾದ ಪಾಲೆದ ಕಷಾಯದ ಆಳವಾದ ಔಷಧೀಯ ಗುಣಗಳನ್ನು ಅನ್ವೇಷಿಸಿತು.

ತುಳುವರ ಆಟಿ ತಿಂಗಳ 'ಆಟಿದ ಅಮಾವಾಸ್ಯೆ' ಎಂಬ ಶುಭ ದಿನದಂದು ನಡೆದ ಈ ಸಮ್ಮೇಳನವು ಪಾರಂಪರಿಕ ಚಿಕಿತ್ಸಾ ಪದ್ಧತಿಗಳ ಶ್ರೀಮಂತ ಪರಂಪರೆಯನ್ನು ಹಾಗೂ ಅವುಗಳ ಆಧುನಿಕ ಆರೋಗ್ಯ ಕ್ಷೇತ್ರದಲ್ಲಿನ ಪ್ರಾಸಕ್ತಿಯನ್ನು ಹೈಲೈಟ್ ಮಾಡಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ದೆಹಲಿ ಕ್ಯಾಥೋಲಿಕ್ ಆರ್ಚ್‌ಡಯೋಸಿಸ್‌ನ ಎಸ್ಟೇಟ್ಸ್ ಮತ್ತು ಪ್ರಾಪರ್ಟೀಸ್ ಆಡಳಿತಾಧಿಕಾರಿಯಾದ ಫಾ. ರೋಹನ್ ರೊನಾಲ್ಡ್ ಸಿಕ್ವೇರಾ ಅವರು ಕಾರ್ಯಕ್ರಮವನ್ನು ಪಾಲೆದ ಕಷಾಯ ಮತ್ತು ಮೆಂತೆದ ಗಂಜಿಯನ್ನು (ಮೆಂತೆ ಕಾಳಿನಿಂದ ತಯಾರಿಸಲಾದ ಪಾಯಸ) ಅತಿಥಿಗಳಿಗೆ ವಿತರಿಸುವ ಮೂಲಕ ಉದ್ಘಾಟನೆ ಮಾಡಿದರು.

ದೆಹಲಿ ಮತ್ತು ಎನ್‌ಸಿಆರ್‌ನಿಂದ ಬಂದ ನೂರಾರು ಜನರು ಪಾಲೆದ ಕಷಾಯ ಮತ್ತು ಮೆಂತೆದ ಗಂಜಿಯ ಉಚಿತ ವಿತರಣೆಯಲ್ಲಿ ಪಾಲ್ಗೊಂಡು, ಅದರ ಆರೋಗ್ಯಕಾರಿ ಲಾಭಗಳನ್ನು ನೇರವಾಗಿ ಅನುಭವಿಸಿದರು.

**ವೈದ್ಯಕೀಯ ತಜ್ಞರಿಂದ ಚರ್ಚಾಕೂಟ :**

ಭಾಗವಹಿಸಿದ ಗೌರವಾನ್ವಿತ ವೈದ್ಯರ ತಂಡವು ಪಾಲೆದ ಕಷಾಯದ ವೈಜ್ಞಾನಿಕ ಆಧಾರ ಮತ್ತು ಸಂಭಾವ್ಯ ಅನ್ವಯಿಕೆಗಳ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಂಡರು.

ಗುರುಗ್ರಾಮದ ಫೋರ್ಟಿಸ್ ಸ್ಮಾರಕ ಸಂಶೋಧನಾ ಸಂಸ್ಥೆಯ ಸರ್ಜಿಕಲ್ ಆಂಕೊಲಾಜಿ ವಿಭಾಗದ ಸೀನಿಯರ್ ಡೈರೆಕ್ಟರ್, ಪ್ರಸಿದ್ಧ ಕನ್ನಡಿಗ ಕ್ಯಾನ್ಸರ್ ತಜ್ಞ ಡಾ. ನಿರಂಜನ್ ನಾಯಕ್, ಆಟಿ ತಿಂಗಳಲ್ಲಿ ತಯಾರಿಸಲಾಗುವ ಪಾಲೆದ ಕಷಾಯದ ವಿವಿಧ ಔಷಧೀಯ ಮೌಲ್ಯಗಳ ಕುರಿತು ಅದ್ಭುತ ಸಂಶೋಧನೆಗಳನ್ನು ಪ್ರಸ್ತುತಪಡಿಸಿದರು. ಈ ಮದ್ದಿನಲ್ಲಿ ಆಟಿ ಅಮಾವಾಸ್ಯೆಯಂದು ಇತರ ದಿನಗಳಿಗಿಂತ ಹೆಚ್ಚಾಗಿ ಆಂಟಿ ಆಕ್ಸಿಡೆಂಟ್‌ಗಳಾದ ಫ್ಲೇಮನಾಯ್ಡ್‌ಗಳು, ನೈಸರ್ಗಿಕ ಸ್ಟೀರಾಯ್ಡ್‌ಗಳು ಮತ್ತು ಟೆರ್ಪೀನ್‌ಗಳಂತಹ ಪ್ರಬಲವಾದ ಉತ್ಕರ್ಷಣ ನಿರೋಧಕಗಳ ಉಪಸ್ಥಿತಿಯನ್ನು ಅವರು ಎತ್ತಿ ತೋರಿಸಿದರು, ಉರಿಯೂತ ನಿವಾರಕ, ಅಲರ್ಜಿ ನಿವಾರಕ, ಬ್ಯಾಕ್ಟೀರಿಯಾ ನಿವಾರಕ, ಅತಿಸಾರ ನಿವಾರಕ ಮತ್ತು ಮಲೇರಿಯಾ ನಿವಾರಕ ಏಜೆಂಟ್‌ಗಳಾಗಿ ಅವುಗಳ ವ್ಯಾಪಕ ಪ್ರಯೋಜನಗಳನ್ನು ಒತ್ತಿ ಹೇಳಿದರು.



ಡಾ. ವಿ.ಜಿ. ಹುದ್ದಾರ್, ಅಡಿಶನಲ್ ಪ್ರೊಫೆಸರ್, ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಆಯುರ್ವೇದ, ನವದೆಹಲಿ, ಅವರು ಮಾತನಾಡುತ್ತಾ ಸಪ್ತಪಣಿ ಅಲ್ಸ್ಟೋನಿಯಾ ಸ್ಕಾಲರೀಸ್) ಬಗ್ಗೆ ಸ್ಪಷ್ಟವಾದ ಉಲ್ಲೇಖವನ್ನು ವಿವರಿಸಿದರು. ಪಾಲೆದ ಕಷಾಯವು ಆಯುರ್ವೇದ ಗ್ರಂಥಗಳಲ್ಲಿ ಪ್ರಮುಖ ಅಂಶವಾದ ಸಪ್ತಪರ್ಣಿಯು ತ್ರಿದೋಷಗಳಾದ ವಾತ, ಪಿತ್ತ ಮತ್ತು ಕಫವನ್ನು ಸಮತೋಲನಗೊಳಿಸುತ್ತದೆ ಎಂದು ಅವರು ಅಭಿಪ್ರಾಯಪಟ್ಟರು ಮತ್ತು ಆಟಿಯಲ್ಲಿ ಈ ಕಷಾಯವನ್ನು ತಯಾರಿಸುವ ವಿಶಿಷ್ಟ ಮಹತ್ವವನ್ನು ಮತ್ತಷ್ಟು ಒತ್ತಿ ಹೇಳಿದರು. ಅಮವಾಸ್ಯೆ, ದಿನದ ದೈವಿಕ ಸ್ವಭಾವ ಮತ್ತು ಸಾಂಪ್ರದಾಯಿಕ ವಿಧಾನಗಳಿಗೆ ವರ್ಧಿತ ಗುಣಪಡಿಸುವ ಗುಣಗಳನ್ನು ಅವರು ವಿವರಿಸುತ್ತಾ ವರ್ಷಕ್ಕೊಮ್ಮೆ ತಯಾರಿಸಲಾಗುವ ಈ ತಾಜಾ ತಯಾರಿಕೆಯ ಕಡ್ಡಾಯ ಸೇವನೆಯನ್ನು ಪ್ರೋತ್ಸಾಹಿಸಿದರು.

ದಂತ ವಿಶೇಷಜ್ಞ ಡಾ. ಸೂರಜ್ ಆರ್. ಸುವರ್ಣ (ಪ್ರೋಸ್ಥೋಡಾಂಟಿಸ್ಟ್), ಅವರು ಪಾಲೆದ ಕಷಾಯವು ದೀರ್ಘಕಾಲೀನ ರೋಗಗಳನ್ನು ಗುಣಪಡಿಸುವ ಸಾಮರ್ಥ್ಯ ಹೊಂದಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿ, ಅದರ ದಂತ ವೈದ್ಯಕೀಯ ಪದ್ದತಿಯಲ್ಲಿ ವಿಶೇಷವಾಗಿ ಬಾಯಿಯಲ್ಲಿ ಹುಟ್ಟುವ ಬ್ಯಾಕ್ಟೀರಿಯಾಗಳ ವಿರುದ್ಧ ಹೋರಾಡುವ ಸಾಮರ್ಥ್ಯದ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಯಬೇಕೆಂದು ಸೂಚಿಸುತ್ತಾ ಸಭಿಕರಿಗೆ ಸಾಂಪ್ರದಾಯಿಕ ಪದ್ಧತಿಗಳನ್ನು ಅಳವಡಿಸಿಕೊಂಡು ಅನುಸರಿಸಲು ಕೋರಿದರು.

ಉತ್ತರ ಪ್ರದೇಶದ ವೆಂಕಟೇಶ್ವರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸಮುದಾಯ ಔಷಧ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಡಾ. ಅಮೃತೇಶ್ ಕುಮಾರ್, ಅವರು ಮಾತನಾಡುತ್ತಾ ದುಬಾರಿ ಮಾರುಕಟ್ಟೆ ಉತ್ಪನ್ನಗಳಿಗಿಂತ ನೈಸರ್ಗಿಕ ಉತ್ಪನ್ನಗಳು ಮತ್ತು ಔಷಧಿಗಳು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಬಗ್ಗೆ ಪ್ರತಿಪಾದಿಸಿದರು. ಅವರು ಪ್ರೇಕ್ಷಕರನ್ನು ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುಲಭವಾಗಿ ಲಭ್ಯವಿರುವ ಗಿಡಮೂಲಿಕೆಗಳನ್ನು ಬಳಸುವಂತೆ ಪ್ರೋತ್ಸಾಹಿಸಿದರು, ಅಂತಹ ನೈಸರ್ಗಿಕ ಪರಿಹಾರಗಳ ನಿರಂತರ ಸೇವನೆಯು ಗಣನೀಯ ವೆಚ್ಚವಿಲ್ಲದೆ ಆರೋಗ್ಯ ಮತ್ತು ರೋಗನಿರೋಧಕ ಶಕ್ತಿಯನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆ ಎಂದು ಒತ್ತಿ ಹೇಳಿ ಮುಂಬರುವ ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಹೆಚ್ಚಿನ



ಸಂಶೋಧನೆ ನಡೆಯುವ ಭರವಸೆಯನ್ನು ಅವರು ವ್ಯಕ್ತಪಡಿಸಿದರು.

ಡಾ. ರಮೇಶ್, ಅಸೋಸಿಯೇಟ್ ಪ್ರೊಫೆಸರ್, ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಆಯುರ್ವೇದ, ನವದೆಹಲಿ, ಇವರು ಸಪ್ತಪರ್ಣಿ (Alstonia scholaris) ಯ ಗುಣಗಳನ್ನು ವಿವರಿಸಿ, ಅದರಲ್ಲಿ ಇರುವ ಪಾಲಿಫಿನಾಲ್ಸ್ ಮತ್ತು ಇತರ ಸಸ್ಯರಸಾಯನಗಳ ಕಾರಣದಿಂದ ಅದರ ವಿಶಿಷ್ಟ ಕಹಿ ರುಚಿಯನ್ನು ಉಲ್ಲೇಖಿಸಿದರು. ಅವರು ಇದನ್ನು ಶಕ್ತಿಶಾಲಿ ಸೂಕ್ಷ್ಮಜೀವಿ ವಿರೋಧಿ (Antimicrobial) ಹಾಗೂ ಶೋಧನಾಶಕ (Anti-inflammatory) ಗುಣಗಳನ್ನು ಹೊಂದಿದೆ ಎಂದು ದೃಢಪಡಿಸಿದರು. ವಿಶೇಷವಾಗಿ ಹೈಪರ್‌ಲಿಪಿಡೀಮಿಯಾ ಮತ್ತು ಮಧುಮೇಹದಂತಹ ಸ್ಥಿತಿಗಳಲ್ಲಿ ಇದು ಉಪಯುಕ್ತವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಫಾ. ರೋಹನ್ ರೊನಾಲ್ಡ್ ಸಿಕ್ವೇರಾ ಅವರು ಪಾರಂಪರಿಕ ಜ್ಞಾನದ ಆಳವಾದ ಮೌಲ್ಯದ ಕುರಿತು ತಮ್ಮ ವೈಯಕ್ತಿಕ ಅನುಭವವನ್ನು ಹಂಚಿಕೊಂಡರು. ಧಾರ್ಮಿಕ ಗಡಿ ಮೀರಿ ಸಾಂಸ್ಕೃತಿಕ ಹಬ್ಬಗಳನ್ನು ಆಚರಿಸುವುದರ ಮೂಲಕ ಏಕತೆ ಬೆಳೆಸಿ, ಕಲ್ಯಾಣವನ್ನು ಉತ್ತೇಜಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದರು.

ಈ ಕಾರ್ಯಕ್ರಮದ ಆಯೋಜಕರಾದ ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿ ಅವರು, ತುಳುವರ ಪಾರಂಪರಿಕ ಔಷಧಶಾಸ್ತ್ರದ ಕುರಿತು ರಾಷ್ಟ್ರೀಯ ಮಟ್ಟದ ಚರ್ಚೆ ನಡೆದಿರುವುದರಿಂದ ಅಪಾರ ಸಂತೋಷ ವ್ಯಕ್ತಪಡಿಸಿದರು. ಇಂತಹ ಸಮ್ಮೇಳನಗಳು ತುಳು ಸಂಸ್ಕೃತಿಯ ಉನ್ನತಿಗೆ ಹಾಗೂ ಸಹಜ, ಆರೋಗ್ಯಕರ ಜೀವನಶೈಲಿಯ ಪ್ರಚಾರಕ್ಕೆ ಮಹತ್ತರ ಕೊಡುಗೆ

ನೀಡುತ್ತವೆ ಎಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದರು. ವಿಶೇಷವಾಗಿ ಮಹಾನಗರ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಪದ್ಧತಿಗಳ ನಿಜವಾದ ಔಷಧೀಯ ಮೌಲ್ಯವನ್ನು ಪತ್ತೆಹಚ್ಚಲು ಹೆಚ್ಚಿನ ಸಂಶೋಧನೆ ಅಗತ್ಯವಿದೆ ಎಂದು ಅವರು ಒತ್ತಿ ಹೇಳಿದರು. ಜೊತೆಗೆ, ಈ ಸಮ್ಮೇಳನವು ತುಳು ಭಾಷೆಯನ್ನು ಭಾರತದ ಸಂವಿಧಾನದ 8ನೇ ಅನುಸೂಚಿಯಲ್ಲಿ ಸೇರಿಸಲು ಹಾಗೂ ಕರಾವಳಿ ಕರ್ನಾಟಕ ಮತ್ತು ಮಂಗಳೂರು ಪ್ರದೇಶದ ಜನತೆಗೆ ಹೆಚ್ಚಿನ ಗೌರವ ತರಲು ಸಹಕಾರಿಯಾಗಲಿದೆ ಎಂಬ ಭರವಸೆಯನ್ನೂ ವ್ಯಕ್ತಪಡಿಸಿದರು.

ಈ ಸಮ್ಮೇಳನದಲ್ಲಿ ಏಮ್ಸ್ ನವದೆಹಲಿಯ ನಿವಾಸಿ ವೈದ್ಯರಾದ ಡಾ. ಪ್ರಜ್ವಲ್ ಸುರೇಶ್ ರಾವ್, ಡಾ. ಸುಧಿಕ್ಷಾ, ಡಾ. ಶ್ರೀಷ ನಾಯಕ್ ಮತ್ತು ಡಾ. ರಿತೇಶ್ ಕುಮಾರ್ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಶ್ರೀ ಮೆಲ್ವಿನ್ ಲೋಬೋ ಅವರ ನಿಪುಣತೆಯ ಕಾರ್ಯಕ್ರಮ ನಿರ್ವಹಣೆ ಮೆರಗು ನೀಡಿತು. ಈ ಕಾರ್ಯಕ್ರಮವು ಹಲವಾರು ಗಣ್ಯರನ್ನು ಆಕರ್ಷಿಸಿತು. ಕರ್ಣಾಟಕ ಬ್ಯಾಂಕ್ ದೆಹಲಿಯ ಡಿಜಿಎಂ ಶ್ರೀ ಬಸವರಾಜ್ ದೇಶಳ್ಳಿ, ರಾಷ್ಟ್ರೀಯ ಹಿಂದೂ ಸೇನೆಯ ಮುಖ್ಯಸ್ಥ ಶ್ರೀ ಪ್ರಮೋದ್ ಮುತಾಲಿಕ್, ದೆಹಲಿ ತುಳುಸಿರಿ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಇತರ ಅನೇಕ ಗಣ್ಯರು



ಪಾರಂಪರಿಕ ಜ್ಞಾನವನ್ನು ರಾಷ್ಟ್ರೀಯ ವೇದಿಕೆಯಲ್ಲಿ ಚರ್ಚಿಸುವ ಮೂಲಕ ಸಮ್ಮೇಳನದ ಪ್ರಯತ್ನವನ್ನು ಪ್ರಶಂಸಿಸಿದರು.

ಹರ್ಷಿತಾ ಕುಶಾಲಪ್ಪ, ಅರವಿಂದ್ ಬಿಜೈ, ನಾಗರಾಜ್, ಮಾಲಿನಿ ಪ್ರಹ್ಲಾದ್, ಡೆರಲ್ ಜೆಸಿಕಾ, ಫರ್ನಾಂಡಿಸ್, ಚಿತ್ರಾ ಭಟ್, ಮಿಥೇಶ್ ಶೆಟ್ಟಿ, ಅಶ್ವಿತಾ ಶೆಟ್ಟಿ ಮತ್ತು ರವಿ ಇವರಂತಹ ಸ್ವಯಂಸೇವಕರ ಅಹೋರಾತ್ರಿ ಪರಿಶ್ರಮವು ಈ ಕಾರ್ಯಕ್ರಮದ ಯಶಸ್ಸಿಗೆ ಮಹತ್ವದ ಬೆಂಬಲ ನೀಡಿತು.


ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘ, ದೆಹಲಿ ತುಳುಸಿರಿ ಸೇರಿದಂತೆ ಹಲವಾರು ಸ್ಥಳೀಯ ಪ್ರತಿಷ್ಠಿತ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸಹಾ ಭಾಗಿಯಾಗಿದ್ದು, ಪಾರಂಪರಿಕ ಜ್ಞಾನವನ್ನು ಉಳಿಸಿ ಬೆಳೆಸುವತ್ತ ಸಮುದಾಯದ ಬದ್ಧತೆಯನ್ನು ಮತ್ತಷ್ಟು ಬಲಪಡಿಸಿದರು.

ಪಾಲೆದ ಕಷಾಯದ ಬಗ್ಗೆ ನಡೆದ ರಾಷ್ಟ್ರೀಯ ಸಮ್ಮೇಳನವು ಪಾರಂಪರಿಕ ಜ್ಞಾನ ಮತ್ತು ಆಧುನಿಕ ವೈಜ್ಞಾನಿಕ ತಿಳುವಳಿಕೆಯನ್ನು ಸೇರ್ಪಡೆಗೊಳಿಸುವ ಮಹತ್ವದ ಹೆಜ್ಜೆಯಾಗಿದ್ದು, ಭವಿಷ್ಯದಲ್ಲಿ ಸಂಶೋಧನೆಗೆ ಹಾಗೂ ಪುರಾತನ ಚಿಕಿತ್ಸಾ ಪದ್ಧತಿಗಳ ವ್ಯಾಪಕ ಸ್ವೀಕಾರಕ್ಕೆ ದಾರಿ ಮಾಡಿಕೊಟ್ಟಿದೆ. ❑

***ಪ್ರಕಾಶ್ ಶೆಟ್ಟಿ ಉಳೆಪಾಡಿ***

## ಅಭಿನಂದನೆ





ಕಾರ್ಯಕ್ರಮದ ನಂತರ ಸಂಘಕ್ಕೆ ಭೇಟಿ ನೀಡಿದ ಶ್ರೀರಾಮ ಸೇನೆಯ ಸ್ಥಾಪಕರಾದ ಶ್ರೀ ಪ್ರಮೋದ್ ಮುತಾಲಿಕ್ ಮತ್ತು ಸಂಗಡಿಗರನ್ನು ಸಂಘದ ಉಪಾಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಅಭಿನಂದಿಸಿದ ದೃಶ್ಯ.



ಶ್ರೀ ಪ್ರಮೋದ್ ಮುತಾಲಿಕ್ ಅವರೊಂದಿಗೆ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗು ಕರ್ಣಾಟಕ ಬ್ಯಾಂಕಿನ ಅಧಿಕಾರಿಗಳು



ದೆಹಲಿ ಕನ್ನಡಿಗ, ಪ್ರಸಿದ್ಧ ದಂತ ತಜ್ಞ ಡಾ. ಸೂರಜ್ ಆರ್. ಸುವರ್ಣ ಅವರನ್ನು ಸಂಘದ ಕಾರ್ಯಕಾರಿ ಸಮಿತಿ ಜಂಟಿ ಕಾರ್ಯದರ್ಶಿ ಮತ್ತು ಸದಸ್ಯರು ಭೇಟಿ ಮಾಡಿದ ಸಂದರ್ಭ.

**ಅಭಿನಂದನೆ**

# 2025ರಲ್ಲಿ ಪದವಿ /ಸ್ನಾತಕೋತ್ತರ ಪದವಿ ಗಳಿಸಿ ಉದ್ಯೋಗಕ್ಕೆ ಸೇರಿದ /ಉನ್ನತ ವ್ಯಾಸಂಗ ನಡೆಸುತ್ತಿರುವ ದೆಹಲಿ ಕನ್ನಡಿಗರ ಹೆಮ್ಮೆಯ ಮಕ್ಕಳು



**ಕು. ಕ್ಷಿತಿಜ್ ಎಸ್.**

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಹಾಗೂ ಶ್ರೀಮತಿ ರೂಪಶ್ರೀ ಮತ್ತು ಶ್ರೀ ನರಸಿಂಹ ಮೂರ್ತಿಯವರ ಕಿರಿಯ ಮಗ ಕು. ಕ್ಷಿತಿಜ್ ಎಸ್. 2024–25 ಸಾಲಿನಲ್ಲಿ ಬ್ಯಾಚುಲರ್ ಆಫ್ ಇಂಜಿನಿಯರಿಂಗ್ ತಾಂತ್ರಿಕ ಪದವಿಯನ್ನು ಬೆಂಗಳೂರಿನ ಬಸವನಗುಡಿಯ ಬಿ.ಎಂ.ಎಸ್. ಕಾಲೇಜ್ ಆಫ್ ಇಂಜಿನಿಯರಿಂಗ್‌ನಿಂದ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಪಡೆದಿರುತ್ತಾನೆ. 7ನೇ ಸೆಮಿಸ್ಟರ್‌ನಲ್ಲಿ SGPA 9.5 ಹಾಗೂ 8 ನೇ ಸೆಮಿಸ್ಟರ್‌ನಲ್ಲಿ 9.88 ಒಟ್ಟಾರೆಯಾಗಿ CGPA 9.55 ಪಡೆದಿರುತ್ತಾನೆ. ಈ ವರ್ಷ ಜುಲೈನಲ್ಲಿ ಬೆಂಗಳೂರಿನ ಓರಾಕಲ್ ಕಂಪನಿ ಸೇರಿದ್ದಾನೆ. ಅವರ ಮುಂದಿನ ಜೀವನಕ್ಕೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಶುಭ ಹಾರೈಕೆಗಳು.



**ಕು. ಜೆ. ಸಂಜಯ್‌ಚಂದ್ರ**

ಸಂಘದ ಆಜೀವ ಸದಸ್ಯರಾದ ಶ್ರೀ ಚಂದ್ರಶೇಖರ ಜೋಳದರಾಶಿ ಮತ್ತು ಶ್ರೀಮತಿ ಶ್ರೀಲಕ್ಷ್ಮೀ ಚಂದ್ರಶೇಖರ ದಂಪತಿಗಳ ಸುಪುತ್ರನಾದ ಕು. ಜೆ. ಸಂಜಯ್‌ಚಂದ್ರ ಕಳೆದ ಮೇ ತಿಂಗಳಿನಲ್ಲಿ ಎನ್.ಐ.ಟಿ. ಕುರುಕ್ಷೇತ್ರದಿಂದ ಬಿ.ಟೆಕ್ (ಕಂಪ್ಯೂಟರ್ ಸೈನ್ಸ್) ಪದವಿ ಗಳಿಸಿ ಪ್ರಸ್ತುತ ನೋಯ್ಡಾದ ಆರ್ಗಸ್ ಇನ್ಫೋಟೆಕ್ ಕಂಪನಿಯಲ್ಲಿ ಉದ್ಯೋಗದಲ್ಲಿದ್ದಾರೆ. ಇವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದನೆಗಳು.



**ಕು. ಓಶೋ ಮುರಗೋಡ್**

ಖ್ಯಾತ ಚಿತ್ರ ಕಲಾವಿದರಾದ ಶ್ರೀ ಭೀಮರಾವ್ ಮುರಗೋಡ್ ಹಾಗೂ ಶ್ರೀಮತಿ ಶಾಲನ್ ಮುರಗೋಡ್ ಅವರ ಮೊಮ್ಮಗ ಹಾಗು ಶ್ರೀ ಆನಂದ್ ಮುರಗೋಡ್ ಮತ್ತು ಶ್ರೀಮತಿ ಸುಮಿತ ಆನಂದ ಮುರಗೋಡರ ಸುಪುತ್ರ ಕು. ಓಶೋ ಮುರಗೋಡ್ 2025 ರಲ್ಲಿ ಮೆಕಾನಿಕಲ್ ಬ್ರಾಂಚ್‌ನಲ್ಲಿ ಇಂಜಿನಿಯರಿಂಗ್ ಪದವಿಯನ್ನು ಡೆಲ್ಲಿ ಟೆಕ್ನೋಲಾಜಿಕಲ್ ಯುನಿವರ್ಸಿಟಿ (DTU) ಯಿಂದ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗುವುದರೊಂದಿಗೆ ಪಡೆದಿರುತ್ತಾರೆ. ಪ್ರಸ್ತುತ ನೋಯಿಡಾದಲ್ಲಿರುವ MNC (French) Company, Air Liquide ನಲ್ಲಿ ಈ ವರ್ಷದ ಆಗಸ್ಟ್ ತಿಂಗಳಿನಿಂದ ತಮ್ಮ ವೃತ್ತಿ ಜೀವನಕ್ಕೆ ಕಾಲಿಟ್ಟಿದ್ದಾರೆ. ಲೋಧಿ ರೋಡ್‌ನ ಬಳಿ ಇರುವ ಏರ್ ಫೋರ್ಸ್ ಬಾಲ್ ಭಾರತಿಯಲ್ಲಿ ಹನ್ನೆರಡನೇ ತರಗತಿಯವರೆಗೆ ತಮ್ಮ ವಿದ್ಯಾಭ್ಯಾಸವನ್ನು ಪಡೆದಿರುವ ಓಶೋ ITO ನ ಗಂಧರ್ವ ಮಹಾವಿಶ್ವವಿದ್ಯಾಲಯದಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ತರಬೇತಿಯನ್ನು ಪಡೆಯುತ್ತಿದ್ದಾನೆ. ಚೆಸ್ ಆಟದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದಾನೆ, ಮುಂದಿನ ವ್ಯಾಸಂಗದಲ್ಲಿ ಅಭಿಲಾಷೆಯನ್ನು ಇಟ್ಟಿರುವ ಓಶೋವಿನ ಎಲ್ಲಾ ಕನಸುಗಳು ನನಸಾಗಿ ಯಶಸ್ಸಿನ ಮೆಟ್ಟಿಲನ್ನು ಏರಲಿ ಎಂದು ದೆಹಲಿ ಕನ್ನಡಿಗರ ಪರವಾಗಿ ಶುಭ ಹಾರೈಕೆಗಳು.



**ಕು. ಸಿ.ಬಿ. ವೈಷ್ಣವಿ** ಸಂಘದ ಆಜೀವ ಸದಸ್ಯರಾದ ಡಾ. ಬಸವರಾಜ ಮತ್ತು ಶ್ರೀಮತಿ ಎಂ.ಎಸ್. ಲಾವಣ್ಯ ಅವರ ಸುಪುತ್ರಿ ಕು. ಸಿ.ಬಿ. ವೈಷ್ಣವಿ 2025ರಲ್ಲಿ ನವದೆಹಲಿಯ ವಿವೇಕಾನಂದ ಕಾಲೇಜಿನಿಂದ ಬಿ.ಎ. ಆನರ್ಸ್ ಪದವಿ ಪಡೆದಿರುತ್ತಾಳೆ. ಪ್ರಸ್ತುತ ನವದೆಹಲಿ ಇಗ್ನೋ (IGNOU) ನಿಂದ ಎಂ.ಎ. (ಪೊಲಿಟಿಕಲ್ ಸೈನ್ಸ್) ವ್ಯಾಸಂಗ ಮಾಡುತ್ತಿದ್ದಾಳೆ. ಇವರಿಗೆ ದೆಹಲಿ ಕರ್ನಾಟಕ ಸಂಘದಿಂದ ಅಭಿನಂದನೆಗಳು.



**ಕು. ರಜತ್ ಗೋಸಲ್**

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀ ಮಂಜುನಾಥ್ ಗೋಸಲ್ ಮತ್ತು ಶ್ರೀಮತಿ ಲಲಿತಾ ಗೋಸಲ್ ಅವರ ಸುಪುತ್ರ ಹಾಗೂ ಶ್ರೀಮತಿ ಸುಮಿತ್ರಾ ಗೋಸಲ್ ಅವರ ಮೊಮ್ಮಗನಾದ ಕು. ರಜತ್ ಗೋಸಲ್ ಅವರ ಅತ್ಯುತ್ತಮ ಶೈಕ್ಷಣಿಕ ಸಾಧನೆಗಳಿಗಾಗಿ ಅಭಿನಂದನೆಗಳು. ರಜತ್ ಅವರು CMR Institute of Technology ಯಿಂದ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮತ್ತು ಮಷಿನ್ ಲರ್ನಿಂಗ್ ವಿಭಾಗದಲ್ಲಿ ತಮ್ಮ ಬ್ಯಾಚುಲರ್ ಆಫ್ ಇಂಜಿನಿಯರಿಂಗ್ ಪದವಿಯನ್ನು 2025ರಲ್ಲಿ ಪ್ರಥಮ ದರ್ಜೆಯೊಂದಿಗೆ ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಮುಂದುವರಿದ ಭಾಗವಾಗಿ, ಅವರು 'ಮಾಸ್ಟರ್ಸ್ ಇನ್ ಅಡ್ವಾನ್ಸ್ಡ್ ಎಐ' ಪದವಿಗಾಗಿ ಪ್ರತಿಷ್ಠಿತ University College Dublin, Ireland ಗೆ ಪ್ರವೇಶ ಪಡೆದಿದ್ದಾರೆ.

ರಜತ್ ಅವರು 10ನೇ ತರಗತಿಯಲ್ಲಿ 92.2% ಮತ್ತು 12ನೇ ತರಗತಿಯಲ್ಲಿ (ವಿಜ್ಞಾನ) 94.2% ಅಂಕಗಳನ್ನು ಗಳಿಸಿದ್ದರು. ಶೈಕ್ಷಣಿಕ ಅನ್ವೇಷಣೆಗಳ ಜೊತೆಗೆ, ರಜತ್ ಕ್ರೀಡೆ ಮತ್ತು ಸಂಗೀತ ಎರಡರಲ್ಲೂ ಆಸಕ್ತಿ ಹೊಂದಿರುವ ಬಹುಮುಖ ಪ್ರತಿಭೆ. ಅವರು ರಾಷ್ಟ್ರಮಟ್ಟದ ರೋಡ್ ಸೈಕ್ಲಿಂಗ್‌ನಲ್ಲಿ ಸ್ಪರ್ಧಿಸಿದ್ದು, ಐಟಿಒ ಬಳಿ ಇರುವ ಪ್ರಸಿದ್ಧ ಗಂಧರ್ವ ಮಹಾವಿದ್ಯಾಲಯದಲ್ಲಿ ನಾಲ್ಕು ವರ್ಷಗಳ ಕಾಲ ತಬಲಾ ಅಭ್ಯಾಸ ಮಾಡಿದ್ದಾರೆ. ತಮ್ಮ ಉನ್ನತ ಶಿಕ್ಷಣದ ಪ್ರಯಾಣವನ್ನು ಪ್ರಾರಂಭಿಸುತ್ತಿರುವ ಈ ಸಂದರ್ಭದಲ್ಲಿ ಕು. ರಜತ್ ಗೋಸಲ್ ಅವರಿಗೆ ಸಂಘದಿಂದ ಶುಭಾಶಯಗಳು. ಅವರು ಯಶಸ್ಸಿನ ಇನ್ನಷ್ಟು ಎತ್ತರವನ್ನು ಏರಲಿ ಎಂದು ದೆಹಲಿ ಕನ್ನಡಿಗರ ಪರವಾಗಿ ಶುಭ ಹಾರೈಕೆಗಳು.



**ಕು. ಸುಹಿತ್ ವಸಂತ್**-ಸಂಘದ ಆಜೀವ ಸದಸ್ಯರಾದ ಶ್ರೀಮತಿ ಮೀನಾಕ್ಷಿ ಮತ್ತು ಶ್ರೀ ವಸಂತ್ ಕುಮಾರ್ ಎಂ.ಬಿ. ಅವರ ಸುಪುತ್ರ ಕು. ಸುಹಿತ್ ವಸಂತ್ ಅವರು ಫರಿದಾಬಾದ್‌ನ ಸೆಕ್ಟರ್–37 ನಲ್ಲಿರುವ ಡಿ.ಎ.ವಿ. ಪಬ್ಲಿಕ್ ಸ್ಕೂಲ್‌ನಲ್ಲಿ 12 ನೇ ತರಗತಿಯವರೆಗೆ ಓದಿದ ನಂತರ ಬೆಂಗಳೂರಿನ ಜಯನಗರದ ಜೈನ್ ವಿಶ್ವವಿದ್ಯಾಲಯದಿಂದ ಬಿಎಸ್ಸಿ (ಅನಿಮೇಷನ್, ವಿಎಫ್‌ಎಕ್ಸ್ ಮತ್ತು ವಿನ್ಯಾಸ) ಪದವಿಯನ್ನು 2025 ರಲ್ಲಿ ಪಡೆದಿರುತ್ತಾರೆ.

ಅಮೇರಿಕಾದ ಇಂಡಿಯಾನಾ ವಿಶ್ವ ವಿದ್ಯಾಲಯದಲ್ಲಿ ಸಂಶೋಧನಾ ಸಹಾಯಕ ವಿದ್ಯಾರ್ಥಿವೇತನದೊಂದಿಗೆ ಹ್ಯೂಮನ್ ಕಂಪ್ಯೂಟರ್ಸ್ ಸಂವಹನ ವಿಷಯದಲ್ಲಿ ಎಂ.ಎಸ್. (MS-Human Computer Interaction) ವ್ಯಾಸಂಗಕ್ಕಾಗಿ ಇತ್ತೀಚೆಗೆ ಯುಎಸ್‌ಎ ಗೆ ಪ್ರಯಾಣ ಬೆಳೆಸಿದ್ದಾರೆ. ಕು. ಸುಹಿತ್ ವಸಂತ್ ಅವರಿಗೆ ದೆಹಲಿ ಕನ್ನಡಿಗರ ಪರವಾಗಿ ಶುಭಾಶಯಗಳು.



**ಕು. ಶ್ರದ್ಧಾ ಆರ್. ಭಟ್** -ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀಮತಿ ಸುಮಲತಾ ಮತ್ತು ಶ್ರೀ ರಾಮಕೃಷ್ಣ ದಂಪತಿಗಳ ಮಗಳಾದ ಕು. ಶ್ರದ್ಧಾ ಆರ್. ಭಟ್ ಪಿ.ಎಚ್.ಡಿ. ಮಾಡಲು ಆಸ್ಟ್ರೇಲಿಯಾಗೆ ಕಳೆದ ಮೇ ತಿಂಗಳಿನಲ್ಲಿ ತೆರಳಿದ್ದಾಳೆ. ದೆಹಲಿ ವಿ.ವಿ.ಯ ಗಾರ್ಗಿ ಕಾಲೇಜಿನಿಂದ ಬಿ.ಎಸ್ಸಿ. (ಆನರ್ಸ್) ಕೆಮಿಸ್ಟ್ರಿ ಪದವಿ ಮತ್ತು ತಿರುವನಂತಪುರದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಮತ್ತು ರೀಸರ್ಚ್‌ನಿಂದ ಎಂ.ಎಸ್.ಸಿ. ಕೆಮಿಸ್ಟ್ರಿ ಪದವಿಯನ್ನು ಪಡೆದಿರುವ ಶ್ರದ್ಧಾ ಆರ್. ಭಟ್ ಕೆಮಿಸ್ಟ್ರಿಯಲ್ಲಿ ಪಿ.ಎಚ್.ಡಿ. ಪದವಿಗಾಗಿ ANU Ph.D Scholarship ಅಡಿಯಲ್ಲಿ ಆಸ್ಟ್ರೇಲಿಯನ್ ನ್ಯಾಷನಲ್ ಯುನಿವರ್ಸಿಟಿಯಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದಾಳೆ. ಇವರಿಗೆ ದೆಹಲಿ ಕರ್ನಾಟಕ ಸಂಘದಿಂದ ಶುಭಾಶಯಗಳು.



**ಕು. ಎಸ್. ಪ್ರಿಯಾಂಕ**-ಸಂಘದ ಆಜೀವ ಸದಸ್ಯರಾದ ಶ್ರೀ ಎನ್. ಶ್ರೀಧರ್ ಮತ್ತು ಶ್ರೀಮತಿ ಎಂ. ಸುಮಿತ್ರ ಅವರ ಸುಪುತ್ರಿ ಕು. ಎಸ್. ಪ್ರಿಯಾಂಕ ಅವರು ಬೆಂಗಳೂರಿನ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿಯಿಂದ 2023 ರಲ್ಲಿ ಬಿ.ಇ. (ಕಂಪ್ಯೂಟರ್ ಸೈನ್ಸ್) ಪದವಿಯನ್ನು ಪಡೆದಿರುತ್ತಾರೆ. ಬೆಂಗಳೂರಿನ ಸೊನಟ ಸಾಫ್ಟ್‌ವೇರ್‌ನಲ್ಲಿ ಒಂದು ವರ್ಷ ಉದ್ಯೋಗ ಮಾಡಿದ ನಂತರ ಕಳೆದ ಜುಲೈ 2025ರಲ್ಲಿ ಉನ್ನತ ವ್ಯಾಸಂಗಕ್ಕಾಗಿ Royal Melbourne Institute of Technology (RMIT) ನಲ್ಲಿ ಎಂ.ಎಸ್. (ಇನ್‌ಫರ್‌ಮೇಷನ್ ಟೆಕ್ನಾಲಜಿ) ಮಾಡಲು ಆಸ್ಟ್ರೇಲಿಯಾದ ಮೆಲ್ಬೋರ್ನ್‌ಗೆ ತೆರಳಿದ್ದಾರೆ. ಇವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಶುಭಾಶಯಗಳು.

## 2024-25ನೇ ಶೈಕ್ಷಣಿಕ ವರ್ಷದಲ್ಲಿ 10ನೇ ಮತ್ತು 12ನೇ ತರಗತಿಯಲ್ಲಿ ಶೇ 80 ಮತ್ತು ಅಧಿಕ ಅಂಕಗಳನ್ನು ಪಡೆದ ದೆಹಲಿ ಕನ್ನಡಿಗರ ಹೆಮ್ಮೆಯ ಮಕ್ಕಳು



ಹೆಸರು : ಕು. ಸಂಚಿತ
ತಂದೆ : ಶ್ರೀ ರಾಜಕುಮಾರ್ ನೀಲೂರು
ತಾಯಿ : ಶ್ರೀಮತಿ ಶಿವಲೀಲಾ
ತರಗತಿ : 10
ಶಾಲೆ : ಶ್ರೀ ಎಸ್.ಎನ್. ಸಿದ್ದೇಶ್ವರ ಸೀನಿಯರ್ ಸೆಕೆಂಡರಿ ಪಬ್ಲಿಕ್ ಸ್ಕೂಲ್, ಗುರುಗ್ರಾಮ



ಹೆಸರು : ಕು. ಡಿಂಪಲ್
ತಂದೆ : ಶ್ರೀ ವೆಂಕಟ ಶೆಟ್ಟಿ ಬಿ.ವಿ.
ತಾಯಿ : ಶ್ರೀಮತಿ ಸತ್ಯ
ತರಗತಿ : 10
ಶಾಲೆ : ಲಯನ್ಸ್ ಪಬ್ಲಿಕ್ ಸ್ಕೂಲ್, ಜೆ-ಬ್ಲಾಕ್, ಅಶೋಕ ವಿಹಾರ್, ನವದೆಹಲಿ



ಹೆಸರು : ಕು. ಆಹನಾ ಕೆ.ಎಸ್.
ತಂದೆ : ಶ್ರೀ ಕೆ. ಶ್ರೀನಿವಾಸ ಮೂರ್ತಿ
ತಾಯಿ : ಶ್ರೀಮತಿ ಆರಾಧನ ಕೆ.ಸಿ.
ತರಗತಿ : 10
ಶಾಲೆ : ಅಮಿಟಿ ಇಂಟರ್‌ನ್ಯಾಷನಲ್ ಸ್ಕೂಲ್, ನೋಯಿಡಾ



ಹೆಸರು : ಕು. ರಿಯಾ ಚಂದ್ರ
ತಂದೆ : ಶ್ರೀ ಚಂದ್ರಶೇಖರ ಕೆ.
ತಾಯಿ : ಶ್ರೀಮತಿ ದಿವ್ಯಾ ಚಂದ್ರಶೇಖರ
ತರಗತಿ : 10
ಶಾಲೆ : ಸೆಂಟ್ ಏಂಜಲ್ಸ್, ಸೌತ್ ಸಿಟಿ, ಗುರುಗ್ರಾಮ



ಹೆಸರು : ಕು. ಸಮರ್ಥ್ ಹನುಮಂತ ದೇಶ್‌ಮುಖ್
ತಂದೆ : ಶ್ರೀ ಹನುಮಂತ ದೇಶ್‌ಮುಖ್
ತಾಯಿ : ಶ್ರೀಮತಿ ಶಿವಲೀಲಾ ದೇಶ್‌ಮುಖ್
ತರಗತಿ : 10
ಶಾಲೆ : ರೈಯಾನ್ ಇಂಟರ್‌ನ್ಯಾಷನಲ್ ಸ್ಕೂಲ್, ಗುರುಗ್ರಾಮ



ಹೆಸರು : ಕು. ಸುಯಶ್ ಪಾಟೀಲ್
ತಂದೆ : ಶ್ರೀ ಉಮೇಶ್ ಪಾಟೀಲ್
ತಾಯಿ : ಶ್ರೀಮತಿ ಸವಿತಾ ಪಾಟೀಲ್
ತರಗತಿ : 12
ಶಾಲೆ : ನಾರಾಯಣ ಇ-ಟೆಕ್ನೋ ಸ್ಕೂಲ್, ಸೆಕ್ಟರ್-37ಸಿ, ಗುರುಗ್ರಾಮ



ಹೆಸರು : ಕು. ಸೃಜನ್ ಪಾಟೀಲ್
ತಂದೆ : ಶ್ರೀ ಉಮೇಶ್ ಪಾಟೀಲ್
ತಾಯಿ : ಶ್ರೀಮತಿ ಸವಿತಾ ಪಾಟೀಲ್
ತರಗತಿ : 12
ಶಾಲೆ : ನಾರಾಯಣ ಇ-ಟೆಕ್ನೋ ಸ್ಕೂಲ್, ಸೆಕ್ಟರ್-37ಸಿ, ಗುರುಗ್ರಾಮ

**ಈ ಪ್ರತಿಭಾವಂತ ಮಕ್ಕಳಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು ಹಾಗು ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಶುಭಾಶಯಗಳು**

## ನಾಟಕೋತ್ಸವ

ದಿನಾಂಕ : 12.10.2025 (ಭಾನುವಾರ)
ಸಂಜೆ 3.00 ಗಂಟೆಗೆ-ಉದ್ಘಾಟನ
ಸಮಯ ಸಂಜೆ : 3.30 ರಿಂದ 4.30
**ನಾಟಕ : ಗಣ-ಗಣ-ರಾಜ್ಯ**
ಪ್ರಸ್ತುತಿ : ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್
ನಿರ್ದೇಶನ : ಶ್ರೀಮತಿ ಮಿತಾ ಮಿಶ
ಸಂಜೆ : 4.45 ರಿಂದ 5.45
**ನಾಟಕ : ನಮ್ಮನೆಲ-ಜೀವ ಜಲ**
ಪ್ರಸ್ತುತಿ : ನಾಡಪ್ರಭು ಕೆಂಪೇಗೌಡ ಫೌಂಡೇಷನ್ ನ ಸಾಂಸ್ಕೃತಿಕ ವಿಭಾಗ 'ರಂಗ ತರಂಗ' ತಂಡದಿಂದ
ರಚನೆ ಮತ್ತು ನಿರ್ದೇಶನ : ಶ್ರೀ ನ.ಮೂ. ಶ್ರೀರಾಮ್

ಸಂಜೆ : 6.00 ರಿಂದ 7.00
**ನಾಟಕ : ಹಗ್ಗದ ಕೊನೆ,** ಪ್ರಸ್ತುತಿ : ಡೆಲ್ಲಿ ಫ್ರೆಂಡ್ಸ್
ನಿರ್ದೇಶನ : ಶ್ರೀ ಮೈಲಾರಪ್ಪ ತಾವರೆಕೆರಿ

ದಿನಾಂಕ : 18.10.2025 (ಶನಿವಾರ)
ಸಮಯ ಮಧ್ಯಾಹ್ನ : 2.30 ರಿಂದ 3.30
**ನಾಟಕ : ಕಿತ್ತೂರಿನ ಕಿರಣ**
ಪ್ರಸ್ತುತಿ : ಜನಕಪುರಿ ಮಹಿಳಾ ಮಂಡಳಿ
ನಿರ್ದೇಶನ : ಶ್ರೀಮತಿ ಸವಿತಾ ಇನಾಮದಾರ್

ಸಮಯ ಸಂಜೆ : 3.45 ರಿಂದ 4.45
**ನಾಟಕ : ಶೂನ್ಯ,** ಪ್ರಸ್ತುತಿ : ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ
ನಿರ್ದೇಶನ : ಶ್ರೀ ಹರಿಪ್ರಿಯ

ಸಮಯ ಸಂಜೆ : 5.00 ರಿಂದ 6.00
**ನಾಟಕ : ಚಾರಿಟಿಯಾನ್ ಮೈಮ್**
ಪ್ರಸ್ತುತಿ : ದೆಹಲಿ ತುಳು ಸಿರಿ
ರಚನೆ ಮತ್ತು ನಿರ್ದೇಶನ : ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿ

ಸಮಯ ಸಂಜೆ : 6.15 ರಿಂದ 7.15
**ನಾಟಕ : ಶ್ರೀ ರಾಮೇಶ್ವರಮ್**
ಪ್ರಸ್ತುತಿ : ಜನಕಪುರಿ ಕನ್ನಡ ಕೂಟ
ನಿರ್ದೇಶನ : ಡಾ. ಎಸ್.ಎಲ್. ಭಂಡಾರ್‌ಕರ್

# ಗುರುಗಾಂವ್ ಕನ್ನಡ ಸಂಘದ ವತಿಯಿಂದ ಯಶಸ್ವಿಯಾಗಿ ನೆರವೇರಿದ 21ನೇ ಸಾಮೂಹಿಕ ಶ್ರೀ ಸತ್ಯ ನಾರಾಯಣ ಪೂಜೆ



ಎಲ್ಲಾ ಕನ್ನಡ ಬಂಧುಗಳಿಗೆ ನಮಸ್ಕಾರಗಳು.

ತಮಗೆಲ್ಲರಿಗೂ ತಿಳಿದಿರುವಂತೆ ಕಳೆದ ಜುಲೈ 20 2025ರಂದು ಭಾನುವಾರ ಗುರುಗಾಂವ್ ಕನ್ನಡ ಸಂಘವು ಆಯೋಜಿಸಿದ್ದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಗೆ ಸ್ವಇಚ್ಛೆಯಿಂದ ಮುಂದೆ ಬಂದು ತನು ಮನ ಧನದಿಂದ ದೇಣಿಗೆ ನೀಡಿ ಸಹಕರಿಸಿ ಪ್ರೋತ್ಸಾಹಿಸಿದ ಕನ್ನಡ ಭಕ್ತಾದಿಗಳಿಗೆ ಧನ್ಯವಾದಗಳು.

ಗುರುಗಾಂವ್ ಕನ್ನಡ ಸಂಘದ ಇತಿಹಾಸದಲ್ಲಿ ಈ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಗೆ 560ಕ್ಕೂ ಹೆಚ್ಚು ಭಕ್ತಾದಿಗಳು ಸೇರಿದ್ದು ವಿಶೇಷ ಹಾಗು ಎಲ್ಲರಿಗೂ ಆಶ್ಚರ್ಯಕರ ಸಂಗತಿ. ಪೂಜೆಗೆ ಆಗಮಿಸುತ್ತಿದ್ದ ಭಕ್ತಾದಿಗಳನ್ನು ಆತ್ಮೀಯತೆಯಿಂದ ಬರಮಾಡಿಕೊಳ್ಳುತ್ತಿದ್ದ ಸ್ನೇಹಿತರು, ಅರಿಶಿನ ಕುಂಕುಮ ಮಲ್ಲಿಗೆ ನೀಡಿ ಮುತ್ತೈದೆಯರನ್ನು ಅಕ್ಕರೆಯಿಂದ ಸ್ವಾಗತಿಸಿದ ಪದಾಧಿಕಾರಿಗಳು, ಪೂಜೆ ನಡೆಯುತ್ತಿದ್ದ ಹಾಲ್ ಒಳಗೆ ಬರುತ್ತಿದ್ದಂತ್ತೆಯೇ ಪುರೋಹಿತರ ಮಂತ್ರ ಪಟನೆಯಿಂದ ಭಕ್ತಿ ಭಾವದಿಂದ ತುಂಬಿದ್ದ ಮಂದಿರದ ವಾತಾವರಣ, ಘಮ ಘಮಿಸುವ ಹೂವಿನಿಂದ ಅಲಂಕಾರ ಮಾಡಿದ್ದ ಸ್ವಾಮಿಯ ಮಂಟಪ, ಪೂಜೆಯ ನಂತರ ಭಕ್ತಾದಿಗಳು ಸಮಾಧಾನವಾಗಿ ಮಂಗಳಾರತಿಯೊಡನೆ ಭಕ್ತಿಯಿಂದ ಸ್ವಾಮಿಗೆ ನಮಸ್ಕರಿಸಿ ಪ್ರಸಾದ ಸ್ವೀಕರಿಸಿದ ದೃಶ್ಯ, ಕರ್ನಾಟಕದ ಕಡೂರಿನಿಂದ ಬಂದಿದ್ದ ಅಡುಗೆ ಭಟ್ಟರಿಂದ ತಯಾರಾದ ರುಚಿಯಾದ ಶುಚಿಯಾದ ಅಡುಗೆ, ಸ್ವಚ್ಛತೆಯನ್ನು ಕಾಪಾಡಿಕೊಂಡು ನೀಡಿದ ಅನ್ನಸಂತರ್ಪಣೆ ಎಲ್ಲವೂ ವಿಶೇಷವಾಗಿತ್ತು.

ಈ ಅನ್ನ ಸಂತರ್ಪಣೆಯಲ್ಲಿ ಸಾಲು ಸಾಲಾಗಿ ನೆಲದ ಮೇಲೆ ಕುಳಿತು ಬಾಳೆ ಎಲೆಯ ಮೇಲೆ ಬಿಸಿ ಬಿಸಿಯಾದ ಬಗೆ ಬಗೆಯ ರುಚಿ ರುಚಿಯಾದ ಭೋಜನವನ್ನು ಪ್ರಸಾದದ ರೂಪದಲ್ಲಿ ಪ್ರೀತಿಯಿಂದ ಸ್ವೀಕರಿಸಿದ್ದು, ಮುತ್ತೈದೆಯರಿಗೆ ಅಕ್ಕರೆಯಿಂದ ನೀಡಿದ ಸಣ್ಣ ಉಡುಗೊರೆ, ಪೂಜೆಗೆ ದೇಣಿಗೆ ನೀಡಿದ ಭಕ್ತಾದಿಗಳಿಗೆ ಪ್ರಸಾದದ ರೂಪದಲ್ಲಿ ನೀಡಿದ ಬಾಳೆಹಣ್ಣು ತೆಂಗಿನಕಾಯಿ, ಕೊನೆಯಲ್ಲಿ ತಾಂಬೂಲದಲ್ಲಿ ಇಟ್ಟಿದ್ದ ಹಸಿರಾದ ವಿಳ್ಯದೆಲೆ–ಅಡಿಕೆ ಸುಣ್ಣವನ್ನು ಬಾಯಲ್ಲಿ ಜಗಿಯುತ್ತ ಮನೆ ಕಡೆ ಹೊರಟ ಭಕ್ತಾದಿಗಳು ಹೇಳಿದ್ದು ಹೀಗೆ ಏನು ಇಷ್ಟೊಂದು ಜನ ಈ ವರ್ಷ, ಎಲ್ಲಿದ್ರೂ ಇಷ್ಟೊಂದು ಕನ್ನಡಿಗರು, ತುಂಬಾ ಜನರನ್ನು ಸೇರಿಸಿದ್ದೀರಿ ಸೂಪರ್ ಕಣ್ರೀ, ಅಡುಗೆ ಸೂಪರ್, ಸ್ಟೇಜ್ ಅಲಂಕಾರ ಸೂಪರ್, ಪೂಜೆ ಸೂಪರ್, ಬಾಳೆ ಎಲೆ ಇಷ್ಟೊಂದು ಫ್ರೆಷ್ ಆಗಿದ್ದು ಎಲ್ಲಿಂದ ತರಿಸಿದ್ರಿ ಸೂಪರ್, ಕೊನೆವರೆಗೂ ತಾಂಬೂಲ ಖಾಲಿ ಆಗಿಲ್ಲಾ ಸೂಪರ್, ಕೊನೆಯ ಹಂತಿಯಲ್ಲಿ ಊಟ ಮಾಡಿದವರಿಗೂ ಎಲ್ಲಾ ಊಟದ ಐಟಮ್ಸ್ ಸಿಕ್ಕಿದ್ದು ಇನ್ನೂ ಸೂಪರ್, ಅಡುಗೆ ಕಡಿಮೆ ಆಗದಂತೆ ಪೂರ್ವ ಸಿದ್ಧತೆ ಮಾಡಿಕೊಂಡಿರುವುದು ಸೂಪರ್, ಸಂಪೂರ್ಣ ವ್ಯವಸ್ಥೆ ಸೂಪರ್, ಸ್ವಚ್ಛತೆ ಸೂಪರ್, ಅಡುಗೆ ಮಾಡಲು ಕಡೂರಿನಿಂದ ಬಂದಿದ್ದ ಅಡುಗೆ ಬಟ್ಟರ ಕೈ ರುಚಿ ಸೂಪರ್, ಈ ಪೂಜೆಗೆ ಮೊದಲ ಬಾರಿಗೆ ಇಷ್ಟೊಂದು ಭಕ್ತಾದಿಗಳು ಬಂದಾಗ ಉಡುಗೊರೆ, ಹಣ್ಣುಕಾಯಿ ಪ್ರಸಾದ ಖಾಲಿ ಆಗುವುದು ಸಹಜ ಕಣ್ರೀ, ಮುಂದಿನ ದಿನಗಳಲ್ಲಿ ಇದರ ಬಗ್ಗೆ ಸ್ವಲ್ಪ ಗಮನ ಕೊಡ್ರಿ, ಒಟ್ಟಾರೆ ಹೇಳಬೇಕು ಅಂದ್ರೆ ಈ ವರ್ಷದ ಕಾರ್ಯಕ್ರಮ ಸೂಪರ್ ಹಿಟ್ ಕಣ್ರೀ ಹೀಗೆ ಮುಂದುವರಿಯಲಿ ಎಂದು ಹೇಳಿ ಶುಭ ಹಾರೈಸಿದ್ದು ಗುರುಗಾಂವ್ ಕನ್ನಡ ಸಂಘದ ಸಮಸ್ತ ಪದಾಧಿಕಾರಿಗಳಿಗೆ ಹಾಗು ಸದಸ್ಯರಿಗೆ ತುಂಬಾ ಸಂತೋಷವನ್ನು ತಂದಿದೆ.

ತಾಯ್ನಾಡಿನಿಂದ ಸಾವಿರಾರು ಮೈಲಿ ದೂರವಿರುವ ನಾವುಗಳು ನಮ್ಮ ಕನ್ನಡ ನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಮೂಲಕ ನಮ್ಮ ಈಗಿನ ಪೀಳಿಗೆಗೆ ನಾಡು, ನುಡಿ, ಭಾಷೆ,ಕಲೆ ಸಂಸ್ಕೃತಿ ಮತ್ತು ಸಂಸ್ಕಾರವನ್ನು ಪರಿಚಯಿಸುವ ಹಾಗು ಈ ಉತ್ತರ ಭಾರತದ ನಾಡಿನ ಜನತೆಗೂ ನಮ್ಮ ಸಂಸ್ಕೃತಿಯನ್ನು ಪಸರಿಸುವ ಕಾರ್ಯವನ್ನು ಗುರುಗಾಂವ್ ಕನ್ನಡ ಸಂಘವು ನಿರಂತರವಾಗಿ ಕಳೆದ 27 ವರ್ಷಗಳಿಂದ ಮಾಡಿಕೊಂಡು ಬರುತ್ತಿದೆ.

ಇಂತಹ ಕಾರ್ಯಕ್ಕೆ ನಿಸ್ವಾರ್ಥದಿಂದ ಸಮಯ ಕೊಟ್ಟು ಸಲಹೆ, ಮಾರ್ಗದರ್ಶನ ನೀಡುತ್ತ ಬೆನ್ನು ತಟ್ಟಿ ಪ್ರೋತ್ಸಾಹ ನೀಡುವ ಹೃದಯ ಶ್ರೀಮಂತಿಕೆಯುಳ್ಳ



ಹಿರಿಯರ ಆಶೀರ್ವಾದದಿಂದ ಇಂತಹ ಅದ್ಭುತ ಕಾರ್ಯಕ್ರಮಗಳು ನಡೆಯುತ್ತಿವೆ.

ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರಲ್ಲದೆ ಸ್ವಯಂ ಸೇವಕರಾಗಿ ಎಲೆಮರೆ ಕಾಯಿಯಂತೆ ಸದಾ ಒಳ್ಳೆಯ ಮನಸ್ಸಿನಿಂದ ಕನ್ನಡ ಸೇವೆ ಮಾಡುತ್ತಾ ಬರುತ್ತಿರುವ ಕನ್ನಡಿಗರಿಂದ ಇಂತಹ ಕಾರ್ಯಕ್ರಮಗಳು ನಡೆಯುತ್ತಿವೆ. ಯಾವುದೇ ಕಾರ್ಯಕ್ರಮ ಯಶಸ್ವಿಯಾದರೆ ಮೊದಲು ಅಧ್ಯಕ್ಷರು ಹಾಗು ಕಾರ್ಯದರ್ಶಿಗಳಿಗೆ ಆ ಕಾರ್ಯಕ್ರಮದ ಯಶಸ್ಸಿನ ಶ್ರೇಯಸ್ಸನ್ನು ಕೊಡುವುದು ವಾಡಿಕೆ ಅಷ್ಟೆ, ಆದರೆ ಅದರ ಹಿಂದೆ ಅನೇಕ ಕನ್ನಡ ಮನಸ್ಸುಗಳ ಪ್ರೋತ್ಸಾಹ, ಉತ್ತಮವಾದ ಸಲಹೆಗಳು ಇಂತಹ ಕಾರ್ಯಕ್ರಮಗಳ ಯಶಸ್ಸಿಗೆ ಕಾರಣವಾಗಿರುತ್ತದೆ. ನಮ್ಮ ಈ ಗುರುಗಾಂವ್ ಕನ್ನಡ ಸಂಘಕ್ಕೆ ಯಾವುದೇ ಆದಾಯ ಬರುವ ಮೂಲಗಳಿಲ್ಲ, ಎಲ್ಲರೂ ಸೇರಿ ಸಮಯ ನೀಡಿ ಕೈ ಜೋಡಿಸಿ ತನು ಮನ ಧನದಿಂದ ಸಹಕರಿಸಿ ಶ್ರಮ ವಹಿಸಿ ಕೆಲಸ ಮಾಡಿದಾಗ ಮಾತ್ರ ಇಂತಹ ಕಾರ್ಯಕ್ರಮಗಳು ಯಶಸ್ವಿಯಾಗಲು ಸಾಧ್ಯವಾಗುತ್ತಿದೆ.

ಹಾಗಾಗಿ, ಈ ವರ್ಷದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಯು ಕೂಡ ಈ ವರ್ಷದ ಯುಗಾದಿ ಸಂಭ್ರಮದಂತೆಯೇ ಹೊಸ ರೆಕಾರ್ಡ್ ಮಾಡಿರುವ ಸೂಪರ್ ಹಿಟ್ ಕಾರ್ಯಕ್ರಮವಾಗಿದೆ, ಇಂತಹ ಯಶಸ್ವಿ ಕಾರ್ಯಕ್ರಮಕ್ಕೆ ಮನಃಸಾಕ್ಷಿ ಒಪ್ಪುವಂತೆ ಶ್ರದ್ಧೆಯಿಂದ ಶ್ರಮಿಸಿದ ಎಲ್ಲಾ ಪದಾಧಿಕಾರಿಗಳಿಗೆ ಹಾಗು ಸದಸ್ಯರಿಗೆ ಹಾಗು ಸ್ವಯಂ ಸೇವಕರಾಗಿ ಪ್ರತ್ಯಕ್ಷವಾಗಿ ಹಾಗು ಪರೋಕ್ಷವಾಗಿ ಸೇವೆ ಸಲ್ಲಿಸಿರುವ ಹಾಗು ವಿಶೇಷವಾಗಿ ಪೂಜೆಗೆ ದೇಣಿಗೆ ನೀಡಿರುವ ಪ್ರತಿಯೊಬ್ಬ ಕನ್ನಡ ಹೃದಯಗಳಿಗೆ ಶಿರಬಾಗಿ ನಮಸ್ಕರಿಸುತ್ತಾ ತಮಗೆಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ. ❑



**ತಿಮ್ಮಪ್ಪ ಜೆ.ಆರ್.**
ಪ್ರಧಾನ ಕಾರ್ಯದರ್ಶಿ
ಹಾಗು ಅಧ್ಯಕ್ಷರು, ಪದಾಧಿಕಾರಿಗಳು ಮತ್ತು
ಕಾರ್ಯಕಾರಿ ಸಮಿತಿಯ ಸದಸ್ಯರು
ಗುರುಗಾಂವ್ ಕನ್ನಡ ಸಂಘ (ರಿ)

# ಗುರುಗಾಂವ್ ಕನ್ನಡ ಸಂಘದ ವತಿಯಿಂದ ಭಕ್ತಿಭಾವದ ಸಾಮೂಹಿಕ ಶ್ರೀ ಗಣೇಶನ ಉತ್ಸವ

ಗುರುಗಾಂವ್ ಕನ್ನಡ ಸಂಘವು ದಿನಾಂಕ 27 ರಿಂದ 31 ಆಗಸ್ಟ್ 2025ರವರೆಗೆ ಶ್ರೀ ರಾಧಾ ಕೃಷ್ಣ ಮಂದಿರ ನ್ಯೂ ಕಾಲೋನಿ, ಗುರುಗ್ರಾಮದಲ್ಲಿ ಆಯೋಜಿಸಿದ್ದ 27ನೇ ವರ್ಷದ ಸಾಮೂಹಿಕ ಶ್ರೀ ಗಣೇಶನ ಉತ್ಸವವನ್ನು ಈ ಬಾರಿ ಐದು ದಿನಗಳ ಕಾಲ ಅನೇಕ ವಿಶೇಷತೆಗಳೊಂದಿಗೆ ಆಚರಿಸಲಾಯಿತು.

ಪ್ರತಿದಿನ ಗಣೇಶನ ಭಕ್ತಿಗೀತೆಗಳಿಂದ ಕೂಡಿದ ಭಜನೆ ಕಾರ್ಯಕ್ರಮಗಳು, ಸ್ಥಳೀಯ ಕನ್ನಡ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು, ಜಗಮಗಿಸುವ ದೀಪದ ಅಲಂಕಾರದಲ್ಲಿ ಸಜ್ಜಾಗಿದ್ದ ಗಣೇಶನ ಮಂಟಪ, ಪ್ರತಿ ದಿನ ಪೂಜೆಗೆ ಬಂದಂತಹ ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯನ್ನು ನಡೆಸಲಾಯಿತು. ಗುರುಗ್ರಾಮ, ದೆಹಲಿ ಎನ್‌ಸಿಆರ್ ನಿಂದ ನೂರಾರು ಸಂಖ್ಯೆಯಲ್ಲಿ ಬರುತ್ತಿದ್ದ ಕನ್ನಡಿಗರ ಕುಟುಂಬಗಳಿಂದ ತಾವು ಕರ್ನಾಟಕದಲ್ಲೆಯೇ ಎಲ್ಲೋ ಇದ್ದೇವೆ ಎನ್ನುವ ಅನುಭವ ಮೂಡುತ್ತಿತ್ತು.





ಭಕ್ತಿ ಭಾವದಿಂದ ಪ್ರತಿ ದಿನ ಕನ್ನಡ ಮಹಿಳೆಯರು ಶ್ರೀ ಗಣೇಶನಿಗೆ ಪ್ರಿಯವಾದ ಮೋದಕ, ಲಡ್ಡು, ಹೀಗೆ ಬಗೆ ಬಗೆಯ ಪ್ರಸಾದವನ್ನು ಮನೆಯಿಂದ ಮಾಡಿಕೊಂಡು ಬಂದು ಗಣೇಶನಿಗೆ ಅರ್ಪಿಸಿ ನಂತರ ನೆರೆದಿದ್ದ ಭಕ್ತಾದಿಗಳಿಗೆ ಆ ಪ್ರಸಾದವನ್ನು ವಿತರಣೆ ಮಾಡುತ್ತಿದ್ದರು.



ಗುರುಗಾಂವ್ ಕನ್ನಡ ಸಂಘದ ಕಾರ್ಯಕರ್ತರು ಹಾಗು ಸ್ವಯಂ ಸೇವಕರು ಮುಂದೆ ಬಂದು ಶ್ರೀ ಗಣೇಶನ ಹಬ್ಬವು ಯಶಸ್ವಿಯಾಗಿ ನಡೆಯಲು ಶ್ರಮಿಸಿದ್ದಾರೆ. ಕನ್ನಡ ಭಕ್ತಾದಿಗಳು ತನು, ಮನ, ಧನದಿಂದ ಈ ಗಣೇಶನ ಉತ್ಸವದ ಯಶಸ್ವಿಗೆ ಕಾರಣಕರ್ತರಾಗಿದ್ದಾರೆ.

ಎಲೆಮರೆ ಕಾಯಿಯಂತೆ ಕುಳಿತು ಪ್ರೋತ್ಸಾಹ ನೀಡುವ ಹಿರಿಯ ಮಾರ್ಗದರ್ಶಿಗಳು, ಅನ್ನಸಂತರ್ಪಣೆಯ ಪ್ರಾಯೋಜಕರು, ಗಣೇಶನ ಮೂರ್ತಿಯ ಪ್ರಾಯೋಜಕರು ಹಾಗು ಕೊನೆಯ ಎರಡು ದಿನಗಳ ಅನ್ನಸಂತರ್ಪಣೆಗೆ ಅಡುಗೆ ಮಾಡಲು ಸ್ವತಃ ಮುಂದೆ ಬಂದಂತಹ ಸಂಘದ ಕಾರ್ಯಕರ್ತರು, ಸ್ವಯಂ ಸೇವಕರು ರುಚಿಕರವಾದ ಭೋಜನವನ್ನು ಸಿದ್ಧಪಡಿಸಿದರು. ಗುರುಗಾಂವ್ ಕನ್ನಡ ಸಂಘದಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮದಲ್ಲೂ ಕೂಡ ಎಲ್ಲಾ ಗುರುಗ್ರಾಮ ಕನ್ನಡಿಗರು ಮತ್ತು ನಿಕಟಪೂರ್ವ ಪದಾಧಿಕಾರಿಗಳು, ಮಾಜಿ ಪದಾಧಿಕಾರಿಗಳು, ಸದಸ್ಯರು ಪ್ರೀತಿ ವಿಶ್ವಾಸದಿಂದ ಒಂದು ಕುಟುಂಬದವರಂತೆ ಒಟ್ಟಿಗೆ ಸೇರಿ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸುವುದು ಒಂದು ವಿಶೇಷತೆಯಾದರೆ, ನಮ್ಮ ಮನೆಯ ಕಾರ್ಯಕ್ರಮಕ್ಕೆ ಬರುವ ಅತಿಥಿಗಳನ್ನು ಆಹ್ವಾನಿಸಿ, ಅಕ್ಕರೆಯಿಂದ ಕಂಡು, ಆತಿಥ್ಯ ನೀಡಿ, ಬೀಳ್ಕೊಡುವಂತೆ ಸಂಘದ ಕಾರ್ಯಕ್ರಮಕ್ಕೆ ಬರುವ ಎಲ್ಲಾ ಕನ್ನಡಿಗರನ್ನು ಅದೇ ಅಕ್ಕರೆಯಿಂದ ಮಾತನಾಡಿಸಿ ಗೌರವದಿಂದ ಕಳುಹಿಸಿ ಕೊಡುವುದು ಕೂಡ ಇನ್ನೊಂದು ವಿಶೇಷವಾಗಿ ಕಾಣುತ್ತದೆ.

ಇಂತಹ ಪ್ರೀತಿ ವಿಶ್ವಾಸವನ್ನು ಕಣ್ತುಂಬ ನೋಡಿರುವ ಅನೇಕ ಕನ್ನಡಿಗರು ಸ್ವಇಚ್ಛೆಯಿಂದ ಮುಂದೆ ಬಂದು ತನು, ಮನ ಧನದಿಂದ ಕಾಣಿಕೆ ನೀಡಿ 27ನೇ ವರ್ಷದ ಸಾಮೂಹಿಕ ಶ್ರೀ ಗಣೇಶನ ಹಬ್ಬವು ಯಶಸ್ವಿಯಾಗಿ ನಡೆಯಲು ಕಾರಣರಾಗಿದ್ದಾರೆ ಎಂದು ಗುರುಗಾಂವ್ ಕನ್ನಡ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ತಿಮ್ಮಪ್ಪ ಜಿ.ಆರ್. ಅವರು ವ್ಯಕ್ತಪಡಿಸುತ್ತಾ ಶ್ರೀ ಗಣೇಶನ ಕೃಪೆಗೆ ಪಾತ್ರರಾದ ಪ್ರತಿಯೊಬ್ಬ ದೆಹಲಿ ಎನ್‌ಸಿಆರ್ ಕನ್ನಡಿಗರಿಗೆ ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಶಾಂತಕುಮಾರ ನಿಂಬಾಳ ಮತ್ತು ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸಿದ್ದಾರೆ. ❑

**ತಿಮ್ಮಪ್ಪ ಜಿ.ಆರ್.**

# ಖಿನ್ನತೆ–ಜಾಗತಿಕ ಸಂಘರ್ಷ (DEPRESSION–A GLOBAL CRISIS)



ಪದವಿ ಓದುತ್ತಿದ್ದ ಇಪ್ಪತ್ತು ವರ್ಷದ ಕಾವಳಲ್ಲಿ ಎರಡು ಮೂರು ತಿಂಗಳಿಂದ ಕಾಲೇಜಿಗೆ ಹೋಗುವುದರಲ್ಲಿ ಉತ್ಸಾಹ ಕಡಿಮೆ ಆಗಿತ್ತು. ಹೋದರೂ ಸಹ ಕಾಲೇಜು ಮುಗಿಯುವವರೆಗೂ ಅಲ್ಲಿ ಇರುತ್ತಿರಲಿಲ್ಲ. ಸ್ನೇಹಿತರೊಂದಿಗೆ ಮಾತನಾಡುತ್ತಿರುಲಿಲ್ಲ. ಸದಾ ಒಂಟಿಯಾಗಿರುತ್ತಿದ್ದಳು. ಮನೆಗೆ ಬಂದರೂ ಮನೆ ಮಂದಿಯ ಜೊತೆ ಹೆಚ್ಚು ಬೆರೆಯುತ್ತಿರಲಿಲ್ಲ. ಸರಿಯಾಗಿ ಊಟ ತಿಂಡಿಯನ್ನೂ ಮಾಡುತ್ತಿರಲಿಲ್ಲ. ಏಕೆ ಎಂದು ಕೇಳಿದರೆ ಯಾವುದೇ ರೀತಿಯ ಕಾರಣ ಕೊಡುತ್ತಿರಲಿಲ್ಲ. ಒಂದೇ ಕಡೆ ಹೆಚ್ಚು ಹೊತ್ತು ಮಂಕಾಗಿ ಕೂರುತ್ತಿದ್ದಳು. ನಿದ್ರೆಯನ್ನೂ ಕೂಡ ಮಾಡುತ್ತಿರಲಿಲ್ಲ. ಬಹಳ ಬೇಸರದಿಂದ ಯಾವಾಗಲೂ ಕಾಣುತ್ತಿದ್ದಳು. ದಿನ ಕಳೆದಂತೆ ಒಂದು ಕೋಣೆಯಲ್ಲಿ ಬಾಗಿಲು ಹಾಕಿಕೊಂಡು ಒಬ್ಬಳೆ ಕುಳಿತುಕೊಳ್ಳುತ್ತಿದ್ದಳು. ಎಲ್ಲದರಲ್ಲೂ ಆಸಕ್ತಿ ಕಳೆದುಕೊಂಡಂತಹ ಆಕೆ ಎರಡು ಸಲ ಆತ್ಮಹತ್ಯೆಗೂ ಪ್ರಯತ್ನಪಟ್ಟಿದ್ದಳು. ಇದೆಲ್ಲವನ್ನೂ ಗಮನಿಸಿದಂತಹ ಆಕೆಯ ತಂದೆ–ತಾಯಿ ನೆರೆ–ಹೊರೆಯವರ ಸಲಹೆಯ ಮೇರೆಗೆ ಮನೋವೈದ್ಯರ ಬಳಿ ಕರೆದುಕೊಂಡು ಹೋದಾಗ ಅದು ಮಾನಸಿಕ ಖಾಯಿಲೆಯಾದ ಖಿನ್ನತೆಯೆಂದು ದೃಢೀಕರಿಸಿ ಚಿಕಿತ್ಸೆಯನ್ನು ಪ್ರಾರಂಭಿಸಿದರು.

**ಖಿನ್ನತೆ :**

ತೊಂದರೆಗಳು ಬಂದಾಗ ದುಃಖ ದುಮ್ಮಾನಗಳು ಸಹಜವಾಗಿ ಎದುರಾಗುತ್ತವೆ. ಆರೋಗ್ಯವಂತನಾದ ಮನುಷ್ಯ ಈ ಪರಿಸ್ಥಿತಿಯಿಂದ ಬಹಳ ಬೇಗ ಚೇತರಿಸಿಕೊಳ್ಳುತ್ತಾನೆ. ಇದು ಜೀವನದಲ್ಲಿ ಆಗುವಂತಹ ಸಹಜವಾದ ಏರಿಳಿತಗಳೆಂದು ತಿಳಿದು ಮನೆಯವರ, ಸ್ನೇಹಿತರ, ಸಂಬಂಧಿಕರ ಸಹಾಯದಿಂದ ಬೇಗ ಹೊರಬರುತ್ತಾನೆ. ಆದರೆ ದುರ್ಬಲವಾದಂತಹ ವ್ಯಕ್ತಿಗಳು ಈ ಸಮಸ್ಯೆಗಳಿಂದ ಹೊರಬರಲು ಬಹಳ ಕಷ್ಟಪಡುತ್ತಾರೆ. ಯಾರೊಂದಿಗೂ ಚರ್ಚಿಸದೆ, ಸಹಾಯವನ್ನೂ ಪಡೆಯದೆ, ಒಳಗೊಳಗೇ





ಲೇಖಕರು :
ಡಾ. ವಿ. ಕಣ್ಣಪ್ಪ ಶೆಟ್ಟಿ
M.Phil & Ph.D (NIMHANS) PDF (USA)
ಸಹಾಯಕ ಪ್ರಾಧ್ಯಾಪಕರು
ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ (IGNOU), ನವದೆಹಲಿ
(ಮೊ.) : 9900374900
ಇಮೇಲ್ : vkshettymsw@gmail.com

ಕೊರಗಿ ಸಮಸ್ಯೆಗಳ ಸುಳಿಯೊಳಗೆ ಸಿಲುಕಿಕೊಂಡು ದೈಹಿಕವಾಗಿ ಬಳಲಿ ದೀರ್ಘಕಾಲದವರೆಗೆ ದುಃಖವನ್ನು ಅನುಭವಿಸುವ ಸ್ಥಿತಿಯೇ ಖಿನ್ನತೆ.

**ಖಿನ್ನತೆಯ ನಿಜ ಸಂಗತಿಗಳು:**

ಈ ಖಾಯಿಲೆಯ ನಿಜ ಸಂಗತಿಗಳ ಬಗ್ಗೆ ಸಮಾಜದಲ್ಲಿರುವ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕಾದ ಅಗತ್ಯವಿದೆ. ಖಿನ್ನತೆಯು 2030ಕ್ಕೆ ಪ್ರಪಂಚದ ಪ್ರಮುಖ ಖಾಯಿಲೆಯಾಗಬಹುದಾದೆಂದು ಅಂದಾಜಿಸಲಾಗಿದೆ. ಈ ಖಾಯಿಲೆಯು ಎಲ್ಲಾ ವಯೋಮಾನದವರಲ್ಲೂ ಕಾಣಿಸುತ್ತದೆ. ಸಾಮಾನ್ಯವಾಗಿ ಚಿಕ್ಕ ವಯಸ್ಸಿನಲ್ಲಿ ಈ ಖಾಯಿಲೆ ಆರಂಭವಾಗುತ್ತದೆ. ಮತ್ತು ವೃದ್ಧರಲ್ಲೂ ಕಾಣಬಹುದಾಗಿದೆ. ಈ ಖಿನ್ನತೆಯು ಶೇಕಡಾ 10–25 ಮಹಿಳೆಯರಲ್ಲಿ ಮತ್ತು ಶೇಕಡಾ 5–12 ಪುರುಷರ ಜೀವನದಲ್ಲಿ ಬರುವ ಸಾಧ್ಯತೆ ಇದೆ. ಶೇಕಡಾ 15 ರಷ್ಟು ತೀವ್ರ ಖಿನ್ನತೆಗೆ ಒಳಗಾದರು ಆತ್ಮಹತ್ಯೆಗೆ ಶರಣಾಗುತ್ತಾರೆ.

**ಖಿನ್ನತೆಯ ಲಕ್ಷಣಗಳು:**

ಒಂಟಿತನ, ತಪ್ಪಿತಸ್ಥ ಭಾವನೆ, ದುಃಖ, ಮಂಕುತನ, ನಿಶ್ಶಕ್ತಿ, ನಿರುತ್ಸಾಹ, ಅಸಹಾಯಕತೆ, ಪದೇ ಪದೇ ಅಳುವುದು, ತಾನು ಕೆಲಸಕ್ಕೆ ಬಾರದವ, ಭೂಮಿಗೆ ಹೊರೆ ಎಂಬ ಭಾವನೆ, ಕೀಳರಿಮೆ, ಹಸಿವಿಲ್ಲದಿರುವುದು, ಆತಂಕ, ಹತಾಶ ಪರಿಸ್ಥಿತಿ, ಏಕಾಗ್ರತೆ ಇಲ್ಲದಿರುವುದು, ತನಗೆ ಭವಿಷ್ಯವಿಲ್ಲವೆಂದು ಕೊರಗುವುದು, ಸದಾ ಸಾವಿನ ಬಗ್ಗೆ ಯೋಚನೆ ಮಾಡುವುದು, ಆತ್ಮಹತ್ಯೆಗೆ ಪ್ರಯತ್ನಿಸುವುದು ಇತ್ಯಾದಿ.

**ಖಿನ್ನತೆಗೆ ಕಾರಣಗಳು:**

ಮೆದುಳಿನ ರಾಸಾಯನಿಕ ಪದಾರ್ಥಗಳಾದ ಡೋಪಮೈನ್, ಸೆರೆಟೋನಿನ್‌ಗಳ ಪ್ರಮಾಣ ತಗ್ಗುವುದು ಖಿನ್ನತೆಗೆ ಮುಖ್ಯ ಕಾರಣಗಳು. ಇತರೇ ಕಾರಣಗಳೆಂದರೆ ಘರ್ಷಣೆಗಳು, ಒತ್ತಡಯುತ ಜೀವನ, ಅನುವಂಶೀಯತೆ, ಸಾಮಾಜಿಕ ಆಸರೆಯ ಕೊರತೆ, ದುರುಪಯೋಗಕ್ಕೆ ಒಳಗಾಗುವುದು,



ಮಾದಕ ವಸ್ತುಗಳ ದುರುಪಯೋಗ, ತೀವ್ರತರಹದ ಖಾಯಿಲೆಗಳಿಗೆ ತುತ್ತಾಗುವುದು ಇತ್ಯಾದಿ.

**ಖಿನ್ನತೆಗೆ ಚಿಕಿತ್ಸೆ (ಆರೈಕೆ)**

ಈ ಖಾಯಿಲೆಗೆ ಎರಡು ವಿಧದ ಚಿಕಿತ್ಸೆಯ ಅವಶ್ಯಕತೆ ಇರುತ್ತದೆ.

**1. ಔಷದೋಪಚಾರ:**

ಖಿನ್ನತೆ ನಿವಾರಣೆಗೆ ವಿವಿಧ ರೀತಿಯ ಖಿನ್ನತೆಯ ನಿವಾರಕ ಮಾತ್ರೆಗಳು ಲಭ್ಯವಿವೆ. ಮನೋವೈದ್ಯರ ಮಾರ್ಗದರ್ಶನದಲ್ಲಿ ಅವುಗಳನ್ನು ಸೇವಿಸಬೇಕಾಗುತ್ತದೆ.



**2. ಮನೋಸಾಮಾಜಿಕ ಚಿಕಿತ್ಸೆ:**

ಮನೋಸಾಮಾಜಿಕ ಚಿಕಿತ್ಸೆಯು ಔಷಧಿಯಷ್ಟೇ ಪ್ರಮುಖವಾಗಿರುತ್ತದೆ. ಈ ಕೆಳಗಿನವುಗಳು ಮನೋಸಾಮಾಜಿಕ ಚಿಕಿತ್ಸೆ ಆಗಿರುತ್ತವೆ ; ಆಪ್ತಸಮಾಲೋಚನೆ, ಕುಟುಂಬ ಮತ್ತು ವೃಂದ ಚಿಕಿತ್ಸೆ ಹಾಗು ಸಮುದಾಯ ಅರಿವು ಕಾರ್ಯಕ್ರಮಗಳು ಪ್ರಮುಖವಾಗಿರುತ್ತವೆ.

**ವಿವಿಧ ಚಟುವಟಿಕೆಗಳಲ್ಲಿ ನಿರತರಾಗಿರಿ, ವ್ಯಕ್ತಿಗಳ ದಿನಚರಿಯನ್ನು ಮೇಲ್ವಿಚಾರಣೆ ಮಾಡಿ, ಸಕಾರಾತ್ಮಕ ಗೌರವವನ್ನು ತೋರಿಸಿ. ಸಮತೋಲಿತ ಆಹಾರವನ್ನು ಸೇವಿಸಿ. ಕುಟುಂಬ ಮತ್ತು ಹಿರಿಯರೊಂದಿಗೆ ಸಮಸ್ಯೆಯನ್ನು ಚರ್ಚಿಸಿ, ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ, ನಿಯಮಿತ ವ್ಯಾಯಾಮ, ಸಕಾರಾತ್ಮಕ ಚಿಂತನೆ ಮತ್ತು ವಿವಿಧ ಅವಕಾಶಗಳನ್ನು ಕಂಡುಕೊಳ್ಳಿ.** ❑



# ಶ್ರೀ ಗಿರಿಯ ಪೂಜಾರಿ

ಸಾವಿರದ ಒಂಬೈನೂರ ಎಪ್ಪತ್ತರ ದಶಕದಲ್ಲಿ ದೆಹಲಿಯಲ್ಲಿದ್ದ ಕನ್ನಡಿಗರಲ್ಲಿ ಬಹುತೇಕ ಮಂದಿ ದಕ್ಷಿಣ ಕನ್ನಡದವರು. ಅದರಲ್ಲೂ ಮುಖ್ಯವಾಗಿ ಕರ್ನಾಟಕ ಮೂಲದ ಸುಪ್ರಸಿದ್ಧ ಬ್ಯಾಂಕುಗಳಲ್ಲಿ ಉದ್ಯೋಗಿಗಳಾಗಿದ್ದವರು. ಇನ್ನೊಂದು ವರ್ಗ ಹೋಟೆಲ್ ಉದ್ಯೋಗಿಗಳು. ಉತ್ತರ ಭಾರತದಲ್ಲಿ ಕರ್ನಾಟಕದ ಛಾಪು ಮೂಡಿಸಿದ ಎರಡು ವಲಯಗಳ ಹಿಂದೆ ದುಡಿದ ಅನೇಕರು ಈಗ ನಿವೃತ್ತರಾಗಿದ್ದಾರೆ; ತಾಯಿನಾಡಿಗೆ ಮರಳಿದ್ದಾರೆ. ಬಹಳಷ್ಟು ಮಂದಿ ನಮ್ಮನ್ನಗಲಿದ್ದಾರೆ. ಎಲೆಯ ಮರೆಯ ಕಾಯಿಗಳಂತೆ ದುಡಿದವರು ಅನೇಕರು. ಗೀತೋಪದೇಶದಲ್ಲಿ ಹೇಳಿದ ಹಾಗೆ ಕರ್ಮಸಿದ್ಧಾಂತವನ್ನು ಅನುಸರಿಸಿದ ಕರ್ಮಜೀವಿಗಳು ಅನೇಕರು. ಅಂತಹ ಕರ್ಮ ಜೀವಿಗಳ ಪೈಕಿ, ಈತನಕವೂ ದೆಹಲಿಯಲ್ಲಿದ್ದು, ಇದೀಗ ವಯೋಸಹಜ ಸಮಸ್ಯೆಗಳೊಂದಿಗೆ ನಿವೃತ್ತಿ ಹೊಂದುತ್ತಿರುವ ಒಬ್ಬ ಸಜ್ಜನ ವ್ಯಕ್ತಿ ಹಾಗೂ ಸಾಮಾಜಿಕ ಕಳಕಳಿ ಹೊಂದಿದ ಆತ್ಮೀಯ ಎಂದರೆ ಶ್ರೀ ಗಿರಿಯ ಪೂಜಾರಿಯವರು.

1974ರ ಕೊರೆಯುವ ಚಳಿಯಲ್ಲಿ ದೆಹಲಿಗೆ ಬಂದಿಳಿದ ಗಿರಿಯ ಪೂಜಾರಿಯವರು, ಲೋಧಿ ಎಸ್ಟೇಟ್‌ನಲ್ಲಿದ್ದ, ಕನ್ನಡಿಗರಿಂದಲೇ ನಡೆಸಲ್ಪಡುತ್ತಿದ್ದ, ವುಡ್‌ಲ್ಯಾಂಡ್ಸ್ ಹೋಟೆಲ್‌ಗೆ ಬಂದು ಸೇರಿದವರು ಮತ್ತೆಂದೂ ಹಿಂದಿರುಗಿ ನೋಡಲಿಲ್ಲ. ದೆಹಲಿಯಲ್ಲಿ ದಕ್ಷಿಣ ಭಾರತದ ಹೋಟೆಲ್‌ಗಳೇ ಬಹಳ ಕಡಿಮೆ. ಅದರಲ್ಲೂ ಕನ್ನಡದ ಕೈರುಚಿ ಕೇವಲ ಬೆರಳೆಣಿಕೆಯ ಹೋಟೆಲ್‌ಗಳಲ್ಲಿ ಮಾತ್ರವೇ ಸಿಗುತ್ತಿತ್ತು. ವುಡ್‌ಲ್ಯಾಂಡ್ಸ್ ಆ ದಿನಗಳಲ್ಲಿ ಅತ್ಯಂತ ಜನಪ್ರಿಯವಾದ ಹೋಟೆಲ್ ಆಗಿತ್ತು. ಅದರಲ್ಲಿ ದೋಸಾ ಮೇಕರ್ ಹಾಗೂ ಪಾಕ ಪ್ರವೀಣರಾಗಿ ಸೇರಿದ ಗಿರಿಯ ಪೂಜಾರಿಯವರು, 19 ವರ್ಷಗಳ ಕಾಲ, ಅಂದರೆ 1992 ರ ತನಕ ಸೇವೆ ಸಲ್ಲಿಸುತ್ತಾ ಬಂದರು. ವುಡ್‌ಲ್ಯಾಂಡ್ಸ್‌ನ ಶ್ರೀ ದಾಮೋದರ್ ರಾವ್ ತಮ್ಮನ್ನು ದೆಹಲಿಗೆ ಕರೆದುಕೊಂಡು ಬಂದರೆಂದು, ತಮ್ಮ ನೆನಪಿನ ಬುತ್ತಿಯಿಂದ ಒಂದೊಂದಾಗಿ ಬಿಚ್ಚುವ ಗಿರಿಯ ಪೂಜಾರಿಯವರು ಹಳೆಯ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ. ಅವರದೇ ವಲಯದಲ್ಲಿ ಅವರದೇ ಕ್ಷೇತ್ರದಲ್ಲಿ ಬಂದ ಬವಣೆ, ಮಾಡಿದ ಸಾಧನೆ–ಇವುಗಳನ್ನು ನಾವು ಗಮನಿಸಲೇಬೇಕು.



1992ರಲ್ಲಿ ದೆಹಲಿಯ ವುಡ್‌ಲ್ಯಾಂಡ್ಸ್‌ನಿಂದ ಹೊರ ಬಂದ ಗಿರಿಯ ಪೂಜಾರಿಯವರು, ನೆಹರು ಪ್ಲೇಸ್‌ನಲ್ಲಿರುವ ಪಾರ್ಕ್ ರಾಯಲ್ ಎಂಬ ಪಂಚತಾರಾ ಹೋಟೆಲ್ ಅನ್ನು ಸೇರಿದರು. 2000 ಇಸವಿಯಿಂದ ಗೋಲ್ ಮಾರ್ಕೆಟ್ ಎಂಬಲ್ಲಿರುವ ಮೆಟ್ರೋ ಪೊಲಿಟನ್ ಹೋಟೆಲ್‌ನಲ್ಲಿ ಕೆಲಸ ಮಾಡಿದರು. ಕೊನೆಗೆ 2008 ರಲ್ಲಿ ನೌಕರಿಯಿಂದ ನಿವೃತ್ತಿ ಹೊಂದಿದ್ದರೂ ಬದುಕಿನ ಬಂಡಿಯನ್ನು ಸಾಗಿಸಲು ದುಡಿಯುವುದು ಅನಿವಾರ್ಯವಾಗಿತ್ತು. ಐದು ವರ್ಷಗಳ ಕಾಲ ಓಲಿವ್ ಬಾರ್ ಅಂಡ್ ರೆಸ್ಟೋರೆಂಟ್, ದೆಹಲಿಯ ಇನ್‌ಬೇಟಾ ಸಂಸ್ಥೆಯಲ್ಲಿ ಒಂದು ವರ್ಷ, ತದನಂತರ ನೋಯ್ಡಾದಲ್ಲಿ ಮೂರು ವರ್ಷ–ಹೀಗೆ ಅನೇಕ ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ದುಡಿಯುತ್ತಾ ಮಕ್ಕಳಿಗೆಲ್ಲ ವಿದ್ಯಾಭ್ಯಾಸ ಒದಗಿಸಿ ಅವರನ್ನು ಸ್ವಾವಲಂಬಿಯಾಗಿಸಿದರು. ಕೊನೆಗೆ 2025ರ ಮಾರ್ಚ್‌ನಲ್ಲಿ ತಾಯ್ನಾಡಿಗೆ ಮರಳುವ ನಿರ್ಧಾರ ಮಾಡಿದರು. ಈಗ ದೆಹಲಿ ಮತ್ತು ಉಡುಪಿ ನಡುವೆ ಓಡಾಡುತ್ತಿರುತ್ತಾರೆ.

ಶ್ರೀ ಗಿರಿಯ ಪೂಜಾರಿಯವರ ದಾಂಪತ್ಯ ಜೀವನದಲ್ಲಿ 44 ವರ್ಷಗಳ ಕಾಲ ತಮ್ಮ ಕರ್ತವ್ಯ ನಿಭಾಯಿಸಿದ ಪತ್ನಿ ಶ್ರೀಮತಿ ಜಯಂತಿಯವರ ಆರೋಗ್ಯದಲ್ಲಿ ಏರುಪೇರುಗಳಾದಾಗ ಕೆಲವೊಮ್ಮೆ ತಪಾಸಣೆಗಾಗಿ ದೆಹಲಿಗೆ ಬರುತ್ತಿರುತ್ತಾರೆ. ತಮ್ಮ ಮೂವರು ಮಕ್ಕಳಾದ ಅನಿಲ್ ಪೂಜಾರಿ, ಅಶ್ವಿನಿ ಪೂಜಾರಿ ಮತ್ತು ಅಕ್ಷತಾ ಪೂಜಾರಿ ಇವರೆಲ್ಲ ನಮ್ಮ ದೆಹಲಿಯ ಕನ್ನಡ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮಾಡಿ, ಒಳ್ಳೆಯ ಉದ್ಯೋಗದಲ್ಲಿ ಇರುವುದು ಮಾತ್ರವಲ್ಲ, ಪೂಜಾರಿ ದಂಪತಿಗಳ ಬಗ್ಗೆ ಕಾಳಜಿ ವಹಿಸುತ್ತಿರುವುದು ಗಿರಿಯ ಪೂಜಾರಿ ಅವರ ಪರಿಶ್ರಮಕ್ಕೆ ದೊರೆತ ಫಲ.



ಸಾಮಾನ್ಯವಾಗಿ ಹೋಟೆಲ್ ಉದ್ಯೋಗಿಗಳಿಗೆ ಬಿಡುವು ಸಿಗುವುದು ತುಂಬಾ ಕಡಿಮೆ. ಆದರೂ ಬಿಡುವು ಮಾಡಿಕೊಂಡು, ದೆಹಲಿ ಕರ್ನಾಟಕ ಸಂಘದ ಮತ್ತು ಕನ್ನಡ ಶಾಲೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಗಿರಿಯಣ್ಣ ಯಾವತ್ತೂ ಸಹ ಸಂಘದ ರಾಜಕೀಯಕ್ಕೆ ಒಳಗಾದವರಲ್ಲ. ವಿಷಯಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಒಳ್ಳೆಯ ಕೆಲಸ ಮಾಡುವವರಿಗೆ ಮೌನವಾಗಿ ಬೆಂಬಲಿಸುತ್ತಾ ಬಂದಂತಹ ಪುಣ್ಯಾತ್ಮ. ತಮ್ಮದೇ ವಲಯದಲ್ಲಿ ಅಭಿಪ್ರಾಯವನ್ನು ನಿಖರವಾಗಿ ಮಂಡಿಸುವ ಗಿರಿಯ ಪೂಜಾರಿಯವರು ಸಂಘ ಸಂಸ್ಥೆಗಳ ಅಭಿವೃದ್ಧಿಗೆ ಪರೋಕ್ಷ ಕೊಡುಗೆದಾರರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ದೆಹಲಿ ಕರ್ನಾಟಕ ಸಂಘ, ತುಳುಕೂಟ ಮುಂತಾದ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಶಾಂತ ಮೂರ್ತಿ ಗಿರಿಯ ಪೂಜಾರಿಯವರ ಶಾಂತತೆಯ ಹಿಂದೆ ಅವರು ಬದುಕಲ್ಲಿ ಸಾಗಿದ ದಾರಿಯೇ ಕಾರಣ ಇದ್ದಿರಬೇಕು. ಸಮಚಿತ್ತತೆ ಅವರನ್ನು ನೋಡಿ ಕಲಿಯಬೇಕು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ್‌ರವರ ಸಹಾಯಗುಣ ಹಾಗೂ ಸಾಧನೆಯನ್ನು ಸದಾ ಮುಕ್ತ ಕಂಠದಿಂದ ಶ್ಲಾಘಿಸುವ ಗಿರಿಯ ಪೂಜಾರಿಯವರು ಸಂಘದ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ದೆಹಲಿ ಕನ್ನಡ ಶಾಲೆಯ ಮಾಜಿ ಪ್ರಾಂಶುಪಾಲ ಶ್ರೀ ಕೆ.ಟಿ. ಗಣೇಶ್, ವಿಜ್ಞಾನಿ ಡಾ. ಎಂ.ಎಸ್. ಶಶಿಕುಮಾರ್, ಶ್ರೀ ಕೆ.ಎಸ್. ಮೂರ್ತಿ, ಶ್ರೀಮತಿ ಆಶಾಲತಾ, ಶ್ರೀಮತಿ ಅಶ್ವಿನಿ ಬಿ.ಎಸ್., ದೆಹಲಿ ಕನ್ನಡ ಶಾಲೆಯ ಪ್ರಸ್ತುತ ಪ್ರಾಂಶುಪಾಲ ಶ್ರೀ ಪ್ರಶಾಂತ್ ಕುಮಾರ್, ದಿವಂಗತ ಶ್ರೀ ಬಸವರಾಜ್ ಮೇಟಿ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಸ್ತುತ ಅಧ್ಯಕ್ಷ ಶ್ರೀ ಬಿ.ಕೆ. ಬಸವರಾಜು ಮುಂತಾದವರನ್ನು ಕೃತಜ್ಞತೆಯಿಂದ ಆಗಾಗ ನೆನಪಿಸಿಕೊಳ್ಳುತ್ತಿರುವುದನ್ನು ನಾನು ಹತ್ತಿರದಿಂದ ಗಮನಿಸಿದ್ದೇನೆ. ನಾನು ಸೇರಿದಂತೆ ಕನ್ನಡ ಶಾಲೆಯ ಅಧ್ಯಾಪಕರುಗಳಾದ ಶ್ರೀ ಅರವಿಂದ ಬಿಜೈ, ಶ್ರೀ ಶಿವರಾಮ ಮಣಿಯಾಣಿ ಅವರ ಆತ್ಮೀಯ ಬಳಗದ ಕೆಲವು ಮಂದಿ ಸದಸ್ಯರು. ಬದುಕಿನ ಬಹುಪಾಲು ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತ ಬಂದರೂ ತಮ್ಮ ದುಡಿಮೆ, ಪರಿಶ್ರಮ, ಶ್ರದ್ಧೆ ಮತ್ತು ಜನರನ್ನು ಪ್ರೀತಿ ಗೌರವದಿಂದ ಕಾಣುವ ಹಿರಿಯರಾದ ಶ್ರೀಯುತ ಗಿರಿಯ ಪೂಜಾರಿಯವರಂಥಹ ವ್ಯಕ್ತಿಗಳು ನಮ್ಮ ಬದುಕಿನ ಪುಸ್ತಕದಲ್ಲಿ ಪುಟವಾಗಿ, ಸ್ಫುಟವಾಗಿ, ದಿಟವಾಗಿ ಉಳಿಯುತ್ತಾರೆ. ಭಗವಂತ ಅವರಿಗೆ ಶಕ್ತಿ ಕೊಡಲಿ, ಅವರ ಬದುಕಲ್ಲಿ ಸದಾ ಆರೋಗ್ಯ ನೆಮ್ಮದಿ ಇರಲಿ ಎಂದು ಹಾರೈಸುತ್ತೇನೆ. ❑



ಲೇಖಕರು: **ಸರವು ಕೃಷ್ಣ ಭಟ್**

# ಕಾರ್ಯತಂತ್ರದ ಸ್ವಾಯುತ್ತತೆ ನಿರ್ಬಂಧಗಳು ಮತ್ತು ಪುನರ್ ರಚನೆ

ಟ್ರಂಪ್ (ಅಮೇರಿಕಾ)–ಪುಟಿನ್ (ರಷ್ಯಾ) ನಡುವೆ ಇತ್ತೀಚೆಗೆ ಸಭೆ ನಡೆದಿದ್ದು ಉಕ್ರೇನಿನಲ್ಲಿನ ಯುದ್ಧವನ್ನು ಕೊನೆಗೊಳಿಸುವ ಬಗ್ಗೆ ಎರಡು ದೇಶಗಳು ಮಾರ್ಗಸೂಚಿಯನ್ನು ಅಂತಿಮಗೊಳಿಸಿದರೆ, ಹೆಚ್ಚುವರಿ ಸುಂಕಗಳನ್ನು ತಡೆಗಟ್ಟಬಹುದು .

ಇತ್ತೀಚಿನ ದಿನಗಳಲ್ಲಿ ಉಕ್ರೇನ್ ವಿರುದ್ಧ ರಷ್ಯಾ ನಿರಂತರ ಆಕ್ರಮಣ ನಡೆಸುತ್ತಿರುವ ಹಿನ್ನೆಲೆಯಲ್ಲಿ ನಿರ್ಬಂಧಗಳನ್ನು ಬಲಪಡಿಸುವ ಬಗ್ಗೆ ಚರ್ಚೆ ಅಮೆರಿಕ ಮತ್ತು ಯುರೋಪಿನಲ್ಲಿ ತೀವ್ರತೆ ಪಡೆದುಕೊಂಡಿದೆ. ಜುಲೈ ಮಧ್ಯದಲ್ಲಿ ಯುರೋಪಿಯನ್ ಒಕ್ಕೂಟವು 18ನೇ ಸುತ್ತಿನ ನಿರ್ಬಂಧಗಳನ್ನು ಜಾರಿಗೆ ತಂದಿತು, ಇದು ಇತರ, ಕ್ರಮಗಳ ಜೊತೆಗೆ ಪ್ರಮುಖ ಭಾರತೀಯ ತೈಲ ಆಮದುದಾರರ ಮೇಲೆ ನಿರ್ಬಂಧಗಳನ್ನು ವಿಧಿಸಿತು. ಅತೀ ಮುಖ್ಯವಾಗಿ ಅಮೇರಿಕಾದ ರಾಷ್ಟ್ರಪತಿ ಡೊನಾಲ್ಡ್ ಟ್ರಂಪ್ ಭಾರತದ ಮೇಲೆ ಇತ್ತೀಚೆಗೆ ವಿಧಿಸಿದ 25% ಸುಂಕ ಮತ್ತು ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿರುವ ಕಾರಣಕ್ಕಾಗಿ ಹೆಚ್ಚುವರಿ 25% ಸುಂಕವು ಅಮೆರಿಕಾದ ಅಧ್ಯಕ್ಷರು ರಷ್ಯಾದೊಂದಿಗೆ ವ್ಯವಹರಿಸುವ ವಿಧಾನದಲ್ಲಿನ ಬದಲಾವಣೆಯನ್ನು ಪ್ರತಿಬಿಂಬಿಸುತ್ತದೆ. (ಇದರ ಅರ್ಥ ಅಮೆರಿಕವು ರಷ್ಯಾದೊಂದಿಗೆ ಭಾರತ ವ್ಯವಹರಿಸುತ್ತಿದೆ, ಆದಕಾರಣ ಅದು 25% ಸುಂಕ ಹೆಚ್ಚಿಸಿದೆ ಎನ್ನುವುದು ಇಲ್ಲಿ ಒಳ ಅರ್ಥ).

ಈ ಬೆಳವಣಿಗೆಗಳು ಜಾಗತಿಕ ಇಂಧನ ಮಾರುಕಟ್ಟೆಗಳ ಸ್ಥಿರತೆಯ ಮೇಲೆ ಪರಿಣಾಮ ಬೀರುತ್ತವೆ ಮತ್ತಷ್ಟು ನಿರ್ಬಂಧಗಳ ಬೆದರಿಕೆಯ ಹಿನ್ನೆಲೆಯಲ್ಲಿ ಭಾರತವು ಏಕಪಕ್ಷೀಯ ನಿರ್ಬಂಧಗಳನ್ನು ತಿರಸ್ಕರಿಸುವ ಮೂಲಕ ಮತ್ತು ನಿರ್ಬಂಧಗಳನ್ನು ವಿಧಿಸುವಲ್ಲಿ ವಿಶ್ವಸಂಸ್ಥೆಯ ಕೇಂದ್ರೀಯತೆಯನ್ನು ಪುನರುಚ್ಚರಿಸುವ ಮೂಲಕ ತನ್ನ ಖರೀದಿಗಳನ್ನು ಸಮರ್ಥಿಸಿಕೊಳ್ಳುವುದನ್ನು ಮುಂದುವರಿಸಿದೆ. ನಿರ್ಬಂಧಗಳಿಂದ ಸಂತೋಷಪಡುವ ಅಮೆರಿಕವು ತನ್ನ ಪ್ರಮುಖ ರಾಷ್ಟ್ರೀಯ ಹಿತಾಸಕ್ತಿ ಎಂದು ಪರಿಗಣಿಸುವ ವಿಷಯದಲ್ಲಿ ಭಾರತದ ಮೇಲೆ ದ್ವಿತೀಯ ಸುಂಕಗಳನ್ನು ವಿಧಿಸುವುದರಿಂದ ಅಮೆರಿಕಾ ಭಾರತ ಸಂಬಂಧಗಳ ಸ್ವರೂಪದ ಮೇಲೆ ರಚನಾತ್ಮಕ ಪರಿಣಾಮ ಬೀರುತ್ತದೆ ಮತ್ತು ಈಗಾಗಲೇ ನಿರ್ಬಂಧಗಳ ಕುರಿತು ನವದೆಹಲಿಯ ಬದಲಾವಣೆಯ ಧ್ವನಿ ಮೂಡುತ್ತಿದೆ.

ನಿರ್ಬಂಧಗಳ ಬೆದರಿಕೆಗೆ ಇತರ ದೇಶಗಳು ಹೇಗೆ ಪ್ರತಿಕ್ರಿಯಿಸುತ್ತವೆ ಎಂಬುದು ಹಲವಾರು ರಚನಾತ್ಮಕ ವಾಸ್ತವಗಳನ್ನು ಅವಲಂಭಿಸಿರುತ್ತದೆ. ಉದಾಹರಣೆಗೆ 2018ರಲ್ಲಿ ಜಂಟಿ ಸಮಗ್ರ ಕ್ರಿಯಾ ಯೋಜನೆಯಿಂದ ಅಮೇರಿಕ ಹಿಂದೆ ಸರಿದ ನಂತರ ಈಗ ನಿರ್ಬಂಧಗಳನ್ನು ವಿಧಿಸದಿದ್ದರೂ ಸಹ, ನವನದೆಹಲಿ ಇರಾನಿನ ತೈಲ ಬಳಕೆಯನ್ನು ತೀವ್ರವಾಗಿ ಕಡಿಮೆ ಮಾಡಿತು, ವಾಷಿಂಗ್ಟನ್ ಅನುಮೋದಿಸಿದ ದೇಶದಿಂದ ತೈಲ ಖರೀದಿಸಲು ಪರ್ಯಾಯ ಮಾರ್ಗಗಳನ್ನು ರಚಿಸುವ ಪ್ರಯೋಜನಗಳಿಗಿಂತ ವೆಚ್ಚಗಳು ಹೆಚ್ಚು. ಕುತೂಹಲಕಾರಿಯಾಗಿ, ಉಕ್ರೇನ್ ಆಕ್ರಮಣದ ನಂತರ, ರಷ್ಯಾ ವಿರುದ್ಧ ಆರ್ಥಿಕ ನಿರ್ಬಂಧಗಳನ್ನು ವಿಧಿಸಿದಾಗ ಮತ್ತು ಡಾಲರ್ 60 ಬೆಲೆ ಮಿತಿಯನ್ನು ಪರಿಚಯಿಸಿದಾಗಲೂ, ರಷ್ಯಾದಿಂದ ನವದೆಹಲಿಯ ತೈಲ ಆಮದು ಹೆಚ್ಚಾಗಲು ಪ್ರಾರಂಭಿಸಿತು.



ಭಾರತೀಯ ಸಂಸ್ಕರಣಾಗಾರರು ರಷ್ಯಾದಿಂದ ತೈಲ ಖರೀದಿಯನ್ನು ಮುಂದುವರಿಸಲು ಚಾಲನಾ ಅಂಶಗಳು,

1. ಬೆಲೆ: 2022 ಮತ್ತು 2023 ರಲ್ಲಿ ಪ್ರತಿ ಬ್ಯಾರಲ್‌ಗೆ ರಿಯಾಯಿತಿಗಳು ಡಾಲರ್ 18–20 ರಷ್ಟಿದ್ದವು.
2. ಪಶ್ಚಿಮಾತ್ಯೇಯರ ಕರೆನ್ಸಿಗಳಲ್ಲಿ ವ್ಯಾಪಾರದ ಇತ್ಯರ್ಥಕ್ಕಾಗಿ ಕಾರ್ಯವಿಧಾನಗಳ ರಚನೆ ಮತ್ತು ಭಾರತದಲ್ಲಿ ರುಪಿ ವೊಸ್ಟ್ರೋ ಖಾತೆಗಳನ್ನು ತೆರೆಯಲು ರಷ್ಯಾದ ಘಟಕಗಳಿಗೆ ಅವಕಾಶ.
3. ಇಂಧನ ವಲಯದ ಭೂ ದೃಶ್ಯದ ವಿಸ್ತರಣೆ ಇತ್ತೀಚಿನ ವರ್ಷಗಳಲ್ಲಿ ಭಾರತದ ತೈಲ ಸಂಗ್ರಹಣೆ ಮತ್ತು ಸಂಸ್ಕರಣಾ ಸಾಮರ್ಥ್ಯಗಳು, ಗಮನಾರ್ಹವಾಗಿ ಸುಧಾರಿಸಿದ ಪ್ರಮಾಣದ ರಷ್ಯಾದ ತೈಲವನ್ನು ಖರೀದಿಸುವ ಭಾರತದ ನಿರ್ಧಾರವನ್ನು ಬೆಂಬಲಿಸಿದ ಅತಿ ದೊಡ್ಡ ರಚನಾತ್ಮಕ ಅಂಶವೆಂದರೆ ಜಾಗತಿಕ ಇಂಧನ ಮಾರುಕಟ್ಟೆಯ ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ವಿಶೇಷವಾಗಿ ಜಾಗತಿಕ ಆರ್ಥಿಕತೆಯು ಸಾಂಕ್ರಾಮಿಕ ಸಮಯದಲ್ಲಿ ಉಂಟಾದ ಆಘಾತಗಳಿಂದ ಚೇತರಿಸಿಕೊಳ್ಳುತ್ತಿರುವ ಸಮಯದಲ್ಲಿ ರಿಯಾಯಿತಿ ದರದ ಕಚ್ಚಾ ತೈಲದ ಆಮದು ಭಾರತೀಯ ಆರ್ಥಿಕತೆಯ ಮೇಲೆ ಸಕಾರಾತ್ಮಕ ಪರಿಣಾಮಗಳನ್ನು ಬೀರಿದೆ.

ಈ ರಚನಾತ್ಮಕ ವಾಸ್ತವಗಳು ಬದಲಾವಣೆ ಪ್ರಾರಂಭಿಸಿದವು ಮತ್ತು ತೈಲ ಬೆಲೆಗಳ ಮೇಲಿನ ರಿಯಾಯಿತಿಗಳು ಬ್ಯಾರಲ್ಲಿಗೆ ಡಾಲರ್ 2.5 ರಿಂದ 4ಕ್ಕೆ ಇಳಿಯಲು ಪ್ರಾರಂಭಿಸಿದವು ಹೆಚ್ಚುವರಿಯಾಗಿ ಇತ್ತೀಚಿನ ನಿರ್ಬಂಧಗಳ ಕುರಿತಾದ ಚರ್ಚೆಯು ಉಕ್ರೇನ್‌ನ ಕಳವಳಗಳ ನಡುವೆ ಬರುತ್ತದೆ ಅಲ್ಲಿ ರಷ್ಯಾದ ಅಕ್ರಮಣಶೀಲತೆ ನಿಧಾನವಾಗಲು ನಿರಾಕರಿಸಿದೆ ಟ್ರಂಪ್ ಆರಂಭದಲ್ಲಿ ರಷ್ಯಾಕ್ಕೆ ವಿರುದ್ಧವಾಗಿ ರಾಜಿ ಮಾಡಿಕೊಳ್ಳುವ ನಿಲುವನ್ನು ಅಳವಡಿಸಿಕೊಂಡರು ರಷ್ಯಾದ ಕೆಲವು ಬೇಡಿಕೆಗಳನ್ನು ಷರತ್ತು ಬದ್ಧವಾಗಿ ಪರಿಗಣಿಸುವ ಮೂಲಕ ರಷ್ಯಾ ಮತ್ತು ಉಕ್ರೇನ್ ನಡುವಿನ ಮಾತುಕತೆಗಳು ಯಾವುದೇ ಸ್ಪಷ್ಟ ಫಲಿತಾಂಶಗಳನ್ನು ನೀಡಿಲ್ಲ. ಈ ಬಿಕ್ಕಟ್ಟಿನ ಪರಿಣಾಮವಾಗಿ ಟ್ರಂಪ್ ಆಡಳಿತದ ಮೇಲೆ ಒತ್ತಡ ಹೆಚ್ಚುತ್ತಿದೆ ಉಕ್ರೇನ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಅಥವಾ ದಂಡನಾತ್ಮಕ ನಿರ್ಬಂಧಗಳನ್ನು ಎದುರಿಸಲು ಸಿದ್ದರಾಗಿರಿ ಎಂದು ರಷ್ಯಾಗೆ ಅಲ್ಟಿಮೆಂಟಮ್ (ಎಚ್ಚರಿಕೆ) ನೀಡುವಂತೆ ಒತ್ತಾಯಿಸಲಾಗಿದೆ.

**ಹೊಸ ಮಾರುಕಟ್ಟೆಗಳನ್ನು ಹುಡುಕುವುದು**

ಅಂದ ಹಾಗೆ ಜಾಗತಿಕತೆ ತೈಲ ಆಮದುಗಳಲ್ಲಿ ರಷ್ಯಾದ ತೈಲವು ಶೇಕಡ 10 ರಷ್ಟಿದೆ. ಪೂರೈಕೆಯಲ್ಲಿನ ಹಠಾತ್ ಅಡಚಡಿಗಳು ತೈಲ ಬೆಲೆಗಳು ಡಾಲರ್ 120ರಷ್ಟು ಏರಿಕೆಯಾಗಲು ಕಾರಣವಾಗಬಹುದು. ಇದನ್ನು ಅಮೆರಿಕ ಸೇರಿದಂತೆ ಇತರ ದೇಶಗಳು ಬಯಸುವುದಿಲ್ಲ. ಇದು ಕಡಿಮೆ ಇಂಧನ ವೆಚ್ಚವನ್ನು ಕಾಯ್ದುಕೊಳ್ಳುವ ಮತ್ತು ಹಣದುಬ್ಬರವನ್ನು ನಿಯಂತ್ರಣದಲ್ಲಿಡುವ ಟ್ರಂಪ್ ಅವರ ಉದ್ದೇಶಕ್ಕೂ ವಿರುದ್ಧವಾಗಿರುತ್ತದೆ. ರಾಜಕೀಯ ಮತ್ತು ಆರ್ಥಿಕ ಪರಿಣಾಮವನ್ನು ದುರ್ಬಲಗೊಳಿಸುವ ಇತ್ತೀಚಿನ ಸುಂಕಗಳ ಹೊರತಾಗಿಯೂ ಎರಡು ದೇಶಗಳು ಒಪ್ಪಂದಕ್ಕೆ ಬರುವ ಸಾಧ್ಯತೆ ಇದೆ ಎಂಬ ವಾದವನ್ನು ಇದು ವಿವರಿಸುತ್ತದೆ.

ಒಂದು ವೇಳೆ ಈ ಒಪ್ಪಂದವನ್ನು ಜಾರಿಗೊಳಿಸದಿದ್ದರೆ ದ್ವಿತೀಯ ನಿರ್ಬಂಧಗಳು ಭಾರತದ ಮೇಲೆ ಅಲ್ಪಾವಧಿಯ ಪರಿಣಾಮ ಬೀರುತ್ತದೆ. ತೈಲರಿಯಾಯಿತಿಗಳು ಕಡಿಮೆಯಾಗುತ್ತಿದ್ದಂತೆ ಹೆಚ್ಚುವರಿ ದ್ವಿತೀಯ ನಿರ್ಬಂಧಗಳ ವೆಚ್ಚದಲ್ಲಿ ವ್ಯಾಪಾರವನ್ನು ಸುಗಮಗೊಳಿಸಲು ಕಾರ್ಯವಿಧಾನಗಳು ಭಾರತದ ಹಿತಾಸಕ್ತಿಗಳಿಗೆ ಪ್ರಯೋಜನವಾಗುವುದಿಲ್ಲ. ರಷ್ಯಾದ ತೈಲದ ಮೇಲಿನ ಅವಲಂಬನೆಯನ್ನು ಸರಿದೂಗಿಸಲು ನವದೆಹಲಿ ಅಜೇರ್ಬೈಜಾನ್, ನೈಜೀರಿಯಾ, ಗಯಾನ ಮತ್ತು ಬ್ರೆಜಿಲ್ ನಂತಹ ಹೊಸ ಮಾರುಕಟ್ಟೆಗಳನ್ನು ಹುಡುಕಲು ಪ್ರಾರಂಭಿಸಿದೆ. ಹಲವಾರು ಸಂಸ್ಕರಣಗಾರರು ತಮ್ಮ ಆಯ್ಕೆಗಳನ್ನು ವೈವಿಧ್ಯಗೊಳಿಸುತ್ತಿದ್ದರು ಸಹ ರಷ್ಯಾದ ತೈಲದಿಂದ ಬದಲಾಯಿಸುವ ಕೆಲಸ ನಡೆಯುತ್ತಿದೆ ಎಂದು ತೀರ್ಮಾನಕ್ಕೆ ಬರಬಹುದೆಂದು ಊಹಿಸಬಹುದು.

ನವದೆಹಲಿಯ ರಾಜಕೀಯ ವ್ಯವಸ್ಥೆಯ ದ್ವಿತೀಯ ನಿರ್ಬಂಧಗಳ ಚರ್ಚೆಯಿಂದ ವಿಶೇಷವಾಗಿ ವಿಚಲಿತಗೊಂಡಿಲ್ಲ ಇದಕ್ಕೆ ವ್ಯತಿರಿಕ್ತವಾಗಿ ಹಲವಾರು ಸಂದರ್ಭಗಳಲ್ಲಿ ದ್ವಿತೀಯ ನಿರ್ಬಂಧಗಳು ಮತ್ತು ಸುಂಕಗಳ ಬೆದರಿಕೆಗಳು ದೇಶದ ಇಂಧನ ಭದ್ರತೆಯನ್ನು ಬಲಪಡಿಸುವ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ದೇಶದ ಸಾರ್ವಭೌಮದ ಮೇಲೆ ಪರಿಣಾಮ ಬೀರುತ್ತದೆ ಎಂದು ನಾಯಕರು ಒತ್ತಿ ಹೇಳಿದ್ದಾರೆ. ಅವರು ಪಾಶ್ಚಿಮಾತ್ಯ ದ್ವಂದ್ವ ಮಾನದಂಡಗಳನ್ನು ಸಹ ಕರೆದಿದ್ದಾರೆ. ದ್ವಿತೀಯ ಸುಂಕಗಳಿಂದ ವರ್ದಿತವಾದ ಅಮೆರಿಕದಲ್ಲಿ ಹೆಚ್ಚುತ್ತಿರುವ ರಕ್ಷಣಾ ವಾದಿ ಚರ್ಚೆಯು ಬ್ರಿಕ್ಸ್ ಮತ್ತು SCO ನಂತಹ ಪ್ರಾದೇಶಿಕ ಮತ್ತು ಬಹು ಪಕ್ಷಿಯ ಕಾರ್ಯವಿಧಾನಗಳಿಗೆ ತನ್ನ ಭದ್ರತೆಯನ್ನು ಬಲಪಡಿಸಲು ನವದೆಹಲಿಯಲ್ಲಿ ಹೆಚ್ಚುತ್ತಿರುವ ಪ್ರಚೋದನೆಗೆ ಕಾರಣವಾಗಬಹುದು ಇದು ಎರಡು ದೇಶಗಳ ನಡುವಿನ ಕಾರ್ಯ ತಂತ್ರದ ಸಹಕಾರದ ವೇಗವನ್ನು ನಿಧಾನಗೊಳಿಸಬಹುದು.

ಇಲ್ಲಿ ಎರಡು ದೇಶಗಳು ಒಪ್ಪಂದ ಮಾಡಿಕೊಳ್ಳಲು ಸಾಧ್ಯತೆ ಇದೆ ಎಂಬ ವಾದವಿದೆ, ಟ್ರಂಪ್–ಪುಟಿನ್ ಸಭೆಯ ತರುವಾಯ ಉಕ್ರೇನ್‌ನಲ್ಲಿನ ಯುದ್ಧವನ್ನು ಕೊನೆಗೊಳಿಸುವ ಬಗ್ಗೆ ಎರಡು ದೇಶಗಳು ಮಾರ್ಗಸೂಚಿಯನ್ನು ಅಂತಿಮಗೊಳಿಸಿದರೆ, ಹೆಚ್ಚುವರಿ ಸುಂಕಗಳು ಅನಗತ್ಯವಾಗಬಹುದು. ❑

ಕನ್ನಡಕ್ಕೆ ಅನುವಾದ :

***ಎಂ.ಎಸ್. ಲಾವಣ್ಯ ಬಸವರಾಜ್***

ಮೂಲ (ಇಂಗ್ಲೀಷ್) :

ರಾಜೋಲಿ ಸಿದ್ಧಾರ್ಥ್ ಜಯಪ್ರಕಾಶ್.

# ಆಧುನಿಕ ಜೀವನ ಶೈಲಿಗೆ–'ಸುದರ್ಶನ ಕ್ರಿಯೆ ಒಂದು ಕೊಡುಗೆ'

ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಮೊಟ್ಟಮೊದಲ ಬಾರಿಗೆ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಹ್ಯಾಪಿನೆಸ್ ಪ್ರೋಗ್ರಾಂನ ಶುಭಾರಂಭವನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಹಾಗೂ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಇವರ ಸಹಯೋಗದಿಂದ ಆಯೋಜಿಸಲಾಯಿತು.

ಜೂನ್ 15, 2025ರಂದು ಗುರುಪೂಜೆಯೊಂದಿಗೆ ಪ್ರಾರಂಭಗೊಂಡ ಹ್ಯಾಪಿನೆಸ್ ಪ್ರೋಗ್ರಾಮನ್ನು ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯೆ ಶ್ರೀಮತಿ ರಾಜಶ್ರೀ ಶಶಿಕುಮಾರ್ ಅವರ ಮುಂದಾಳತ್ವದಲ್ಲಿ ಸ್ವಯಂಸೇವಕಿಯರಾದ ಶ್ರೀಮತಿ ಸವಿತಾ ನಾರಾಯಣ್ ಭಟ್ ಹಾಗೂ ಶ್ರೀಮತಿ ನಯನಾ ಮಾನಕಾಪುರೆ ಅವರು ಕಾರ್ಯಕ್ರಮಕ್ಕೆ ನಾಂದಿ ಹಾಡಿದರು. ಆರ್ಟ್ ಆಫ್ ಲಿವಿಂಗ್ ಹ್ಯಾಪಿನೆಸ್ ಪ್ರೋಗ್ರಾಮಿನ ಶಿಕ್ಷಕಿಯರಾದ ಡಾ. ಶಿಲ್ಪಾ ಶರ್ಮಾ ಮತ್ತು ಡಾ. ಸುಮೆಘಾ ಮಿತ್ತಲ್, ಎಂ.ಡಿ. ಮಾನಸಿಕ ತಜ್ಞೆ, ಏಮ್ಸ್ ನವದೆಹಲಿ ಅವರು ಗುರುಪೂಜೆಯನ್ನು ನಡೆಸಿಕೊಟ್ಟರು.

ದಿನಾಂಕ 21.06.2025 ರಂದು ದೆಹಲಿ ಕರ್ನಾಟಕ ಸಂಘದ ಪ್ರಾಂಗಣದಲ್ಲಿ ಆಯೋಜಿಸಿದ ಅಂತರರಾಷ್ಟ್ರೀಯ ಯೋಗ ದಿನದಂದು ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಹಾಗು ಶ್ರೀ ಕೆ.ಎಸ್. ಮೂರ್ತಿ ಮತ್ತು ಇತರ ಸದಸ್ಯರು ಸೇರಿದಂತೆ ನೆರೆದಿದ್ದವರ ಸಮ್ಮುಖದಲ್ಲಿ ಆರ್ಟ್ ಆಫ್ ಲಿವಿಂಗ್ ಹ್ಯಾಪಿನೆಸ್ ಪ್ರೋಗ್ರಾಮಿನ ಬಾವುಟದ ಉದ್ಘಾಟನೆಯನ್ನು ಮಾಡಿದರು. ಜೊತೆಗೆ ಸಂಘದ ಕಾರ್ಯಕಾರಿ ಸಮಿತಿಯ ಇತರ ಪದಾಧಿಕಾರಿಗಳು ಮತ್ತು ಸದಸ್ಯರೂ ಸಹ ಉಪಸ್ಥಿತರಿದ್ದರು.

ಕಳೆದ ಜುಲೈ 11 ರಿಂದ 13ರವರೆಗೆ ಮೂರು ದಿನಗಳು ನಡೆದ ಈ ಹ್ಯಾಪಿನೆಸ್ ಪ್ರೋಗ್ರಾಮಿನಲ್ಲಿ ದೆಹಲಿ ಕನ್ನಡಿಗರಾದ ಶ್ರೀ ಎನ್.ಪಿ. ಚಂದ್ರಶೇಖರ, ಶ್ರೀ ಶಿವಪ್ಪ ಎಂ, ಶ್ರೀಮತಿ ರಾಜಶ್ರೀ ಶಶಿಕುಮಾರ, ಶ್ರೀಮತಿ ಸವಿತಾ ಇನಾಮದಾರ್, ಶ್ರೀಮತಿ ಸವಿತಾ ನಾರಾಯಣ್ ಭಟ್, ಶ್ರೀಮತಿ ಪವಿತ್ರಾ ತಾಮಣಕರ, ಶ್ರೀಮತಿ ಪುಷ್ಪ ರವೀಂದ್ರ, ಶ್ರೀಮತಿ ದೀಪಾ ಎಂ., ಶ್ರೀಮತಿ ನಯನಾ ಮಾನಕಾಪುರೆ ಮತ್ತು ಶ್ರೀಮತಿ ರೇಣುಕಾ ಸಾವಕಾರ ಅವರು ಪಾಲ್ಗೊಂಡು ಈ ಕಾರ್ಯಾಗಾರದ ಅತ್ಯುತ್ತಮವಾದ ಲಾಭವನ್ನು ಪಡೆದರು.

ಶಿಕ್ಷಕರಾದ ಡಾ. ಕಪಿಲ್ ದೀಕ್ಷಿತ್ M.D. (Opthalmologist, AIIMS Delhi) ಹಾಗೂ ಡಾ. ಸುಮೇಘ ಮಿತ್ತಲ್ MD (Psychiatrist, AIIMS, Delhi) ಇವರು ವಿಶ್ವದ ಅತ್ಯಂತ ಶಕ್ತಿಶಾಲಿ ಉಸಿರಾಟದ ತಂತ್ರವಾದ 'ಸುದರ್ಶನ ಕ್ರಿಯೆ'ಯನ್ನು ಭಾಗವಹಿಸಿದ್ದವರಿಗೆ ಸರಳ ಮತ್ತು ಸುಂದರ ರೀತಿಯಲ್ಲಿ ಕಲಿಸಿದರು. ಇದು ಲಯಬದ್ಧ ಉಸಿರಾಟದ ಕ್ರಿಯೆಯಾಗಿದ್ದು ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ಮಟ್ಟಗಳನ್ನು ಶುದ್ಧಗೊಳಿಸಿ ಸಮರಸಗೊಳಿಸುತ್ತದೆ.

ಹ್ಯಾಪಿನೆಸ್ ಪ್ರೋಗ್ರಾಂ ಧ್ಯಾನ, ಪ್ರಾಣಾಯಾಮ, ಜ್ಞಾನ, ಸೇವೆ, ಸಂಗೀತ ಮತ್ತು ನೃತ್ಯ ಇವುಗಳನ್ನೊಳಗೊಂಡು ರಚಿಸಿದ ಕೋರ್ಸ್ ಆಗಿರುತ್ತದೆ.

ಆರ್ಟ್ ಆಫ್ ಲಿವಿಂಗ್ ಪ್ರತಿಷ್ಠಾನದ ಸಂಸ್ಥಾಪಕರಾದ ಶ್ರೀ ಶ್ರೀ ರವಿಶಂಕರ್ ಇವರು 1956 ಮೇ 13 ರಂದು ತಮಿಳುನಾಡಿನಲ್ಲಿ ಜನಿಸಿದರು.









ಕರ್ನಾಟಕದ ಅಧ್ಯಾತ್ಮದ ಸಿರಿ ಪುಣ್ಯಭೂಮಿಯಾದ ಶಿವಮೊಗ್ಗದ ತುಂಗಾ ನದಿಯ ದಂಡೆಯ ಮೇಲೆ ಹತ್ತು ದಿನಗಳ ಕಾಲ ಮೌನಾಚರಣೆ ವಹಿಸಿದ ಬಳಿಕ ಕಾವ್ಯದ ರೀತಿಯಲ್ಲಿ ಶ್ರೀ ಶ್ರೀ ಅವರಿಗೆ ಸ್ಫೂರ್ತಿ ಒದಗಿತು. ಕ್ರಮೇಣ ಪ್ರಪಂಚದಾದ್ಯಂತ ಸುದರ್ಶನ ಕ್ರಿಯೆ ಪ್ರಖ್ಯಾತವಾಯಿತು.

ಆರ್ಟ್ ಆಫ್ ಲಿಂವಿಂಗ್ ಇದು ಒಂದು ಆಧ್ಯಾತ್ಮಿಕ ಮತ್ತು ಮಾನವೀಯ ಸಂಸ್ಥೆಯಾಗಿದ್ದು, ವಿಶ್ವದಾದ್ಯಂತ ಅನೇಕ ಜನರಿಗೆ ತರಬೇತಿ ಮತ್ತು ಕಾರ್ಯಾಗಾರಗಳನ್ನು ನೀಡುವ ಒಂದು ಜಾಗತಿಕ ಸಂಸ್ಥೆಯಾಗಿ ಶ್ರೀ ಶ್ರೀ ರವಿಶಂಕರ್ ಅವರಿಂದ 1981ರಲ್ಲಿ ಸ್ಥಾಪಿಸಲ್ಪಟ್ಟಿದೆ. ಮುಂದೆ 1986 ರಂದು ಅಂತರರಾಷ್ಟ್ರೀಯ ಆರ್ಟ್ ಆಫ್ ಲಿವಿಂಗ್ ನ ಆಶ್ರಮ ಬೆಂಗಳೂರಿನಲ್ಲಿ ಸ್ಥಾಪನೆಗೊಂಡಿತು.

ಈ ಸಂಸ್ಥೆಯು ಪ್ರಪಂಚದೆಲ್ಲೆಡೆ ಅನೇಕ ಸಾಮಾಜಿಕ ಕಲ್ಯಾಣ ಯೋಜನೆಗಳಾದ ಪರಿಸರ ಸಂರಕ್ಷಣೆ, ಮಕ್ಕಳಿಗೆ ಉಚಿತ ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಗೋ ಸಂರಕ್ಷಣೆ, ಬಂಧಿಖಾನೆಯ ಕೈದಿಗಳನ್ನು ಪುನಶ್ಚೇತಗೊಳಿಸಿ ಮುಖ್ಯವಾಹಿನಿಗೆ ತಂದು ಸಮಾಜದ ಅಂಗವಾಗಿಸಲು ನೆರವು ನೀಡುತ್ತಿದೆ.

ಶ್ರೀ ಶ್ರೀ ರವಿಶಂಕರ್ ಇವರು ಅಂತರ್ಧರ್ಮಿಯ ಸಂಸ್ಥೆಯ ವಿಶ್ವ ಧಾರ್ಮಿಕ ನಾಯಕರ ಮಂಡಳಿಯಲ್ಲಿ ಸ್ಥಾನ ಪಡೆದಿದ್ದಾರೆ. 184 ದೇಶಗಳಲ್ಲಿ ಇವರ ಅನುಯಾಯಿಗಳಿದ್ದಾರೆ. ಸುಮಾರು 80ಕೋಟಿ ಜನರು ದಿನನಿತ್ಯ ಯೋಗದ ಅಭ್ಯಾಸ ಮಾಡುತ್ತಿದ್ದಾರೆ.

ಕನ್ನಡ ಭಾಷೆಗಾಗಿ ಶ್ರೀ ಶ್ರೀ ರವಿಶಂಕರ್ ಅವರ ಹೆಮ್ಮೆಯ ನುಡಿಗಳು–ಕನ್ನಡ ನುಡಿಯಲ್ಲಿ ಎಷ್ಟು ಆನಂದ, ಎಷ್ಟೊಂದು ಗಂಭೀರವಾದ ಸಿದ್ಧಾಂತಗಳಿವೆ ಮತ್ತು ಜ್ಞಾನವಿದೆ. ಬಾಲ್ಯದಿಂದಲೇ ಕನ್ನಡ ನವ್ಯಕಾವ್ಯದ ಕವಿಗಳೂ, ವಿಮರ್ಶಕರೂ ಆದ ಗೋಪಾಲಕೃಷ್ಣ ಅಡಿಗರ ಕನ್ನಡ ಭಾಷೆಯ, ಕನ್ನಡ ಸಾಹಿತ್ಯದ ಪ್ರೇರಣೆ ಇವರಿಗೆ ದೊರಕಿತು. ಇವರ ಸಂಪೂರ್ಣ ಶಾಲಾ ಶಿಕ್ಷಣ ಕನ್ನಡ ಮಾಧ್ಯಮದಲ್ಲಿ ಆಯಿತು ಎಂದು ಹೇಳಲು ಹೆಮ್ಮೆ ಪಡುತ್ತಾರೆ. ಕನ್ನಡ ಭಾಷೆಯ ಬಗ್ಗೆ ಅಭಿಮಾನ ಇಟ್ಟುಕೊಂಡು ಹಲವಾರು ತಲೆಮಾರುಗಳಿಗಾಗಿ ಉಳಿಸಿ ಬೆಳೆಸಲು ಶ್ರದ್ಧೆ ಎಂಬ ನೀರನ್ನು ಎರದು, ಭಾಷೆಯ ಮರವನ್ನು ಬೆಳೆಸಬೇಕು. ಅದರ ಫಲವು ಸಿದ್ಧಾಂತವಾಗಿ ಜೀವನದಲ್ಲಿ ಅಳವಡಿಸಬಹುದು. ಧ್ಯಾನ, ಜ್ಞಾನ ಮತ್ತು ಗಾನ ನಮ್ಮ ಭಾಷೆಯಿಂದ ಜೀವನದಲ್ಲಿ ಅಳವಡಿಸಿ ನಾಡು, ನುಡಿ, ನೆಲ, ಜಲದ ಅಭಿಮಾನ ಇಟ್ಟುಕೊಳ್ಳಬೇಕು. ಹೊರನಾಡಿನಲ್ಲಿದ್ದರೂ, ವಿದೇಶದಲ್ಲಿದ್ದರೂ ಕನ್ನಡ ಭಾಷೆ ಮಾತನಾಡಲು, ಓದಲು ಹಾಗೂ ಬರೆಯಲು ಕಲಿಯಬೇಕು ಎಂಬುದು ಅವರ ನಿಲುವು.

ಆಧ್ಯಾತ್ಮಿಕತೆಯು ಪ್ರೀತಿ, ಕರುಣೆ ಮತ್ತು ಉತ್ಸಾಹದ ಜೀವನ ಮೌಲ್ಯಗಳನ್ನು ವರ್ಧಿಸುತ್ತದೆ ಎಂದು ಗುರುಗಳು ಬೋಧಿಸುತ್ತಾರೆ. ಇದು ಯಾವುದೇ ಒಂದು ಧರ್ಮ ಅಥವಾ ಸಂಸ್ಕೃತಿಗೆ ಸೀಮಿತವಲ್ಲ. ಆದರೆ ವಿಶ್ವದ ಎಲ್ಲ ಧರ್ಮಗಳ ಹೃದಯವಾಗಿದೆ. ಆದ್ದರಿಂದ ಇದು ಎಲ್ಲ ಜನರಿಗೆ ಮುಕ್ತವಾಗಿದೆ. ದಿನಕ್ಕೆ ಒಂದು ಸಾರಿ 30 ನಿಮಿಷಗಳ ಕಾಲ ಸುದರ್ಶನ ಕ್ರಿಯೆಯ ಅಭ್ಯಾಸದಿಂದ ಆಧುನಿಕ ಜೀವನ ಶೈಲಿಯನ್ನು ಆನಂದಮಯವಾಗಿ ಬಾಳಲು ಸರ್ವೋತ್ತಮ ಸಾಧನೆ. ಇದರ ಸದುಪಯೋಗವನ್ನು ದೆಹಲಿ ಕನ್ನಡಿಗರು ಪಡೆಯಲು ಈ ಕಾರ್ಯಾಗಾರವನ್ನು ನಡೆಸುವ ಅವಕಾಶ ದೊರಕಿಸಿಕೊಟ್ಟ ದೆಹಲಿ ಕರ್ನಾಟಕ ಸಂಘದ ಸಮಸ್ತ ಪದಾಧಿಕಾರಿಗಳಿಗೆ ಮತ್ತು ಸಂಘದ ಸದಸ್ಯ ಬಾಂಧವರಿಗೆ ಹೃತ್ಪೂರ್ವಕ ಧನ್ಯವಾದಗಳು.

***ನಯನಾ ಮಾನಕಾಪುರೆ***

# ರಾಷ್ಟ್ರ ರಾಜಧಾನಿಯಲ್ಲಿ ನಮ್ಮ ಮಣ್ಣಿನ ಮೂಲ ಸಂಸ್ಕೃತಿಯನ್ನು ಬೆಳೆಸುತ್ತಿರುವುದು ಹೆಮ್ಮೆಯ ಸಂಗತಿ–ಶ್ರೀ ಎಚ್. ರಾಜೇಶ್ ಪ್ರಸಾದ್



ತುಳುನಾಡಿನ ಎಲ್ಲ ಹಬ್ಬಗಳನ್ನು, ಆಚರಣೆಗಳನ್ನು ಆಚರಿಸುವ ಮೂಲಕ ದೆಹಲಿ ತುಳುಸಿರಿ ರಾಷ್ಟ್ರ ರಾಜಧಾನಿಯಲ್ಲಿ ನಮ್ಮ ಮಣ್ಣಿನ ಮೂಲ ಸಂಸ್ಕೃತಿಯನ್ನು ಬೆಳೆಸುತ್ತಿರುವುದು ಹೆಮ್ಮೆಯ ಸಂಗತಿ ಎಂದು ಜಮ್ಮು ಕಾಶ್ಮೀರದ ವಿದ್ಯುತ್ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಎಚ್. ರಾಜೇಶ್ ಪ್ರಸಾದ್ ಐ.ಎ.ಎಸ್. ಅವರು ಹೇಳಿದರು.

ಅವರು ಇತ್ತೀಚೆಗೆ ದೆಹಲಿ ತುಳುಸಿರಿ ಇದರ ಆಶ್ರಯದಲ್ಲಿ ನವದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಆಟಿದ ನೆಂಪು ಕಾರ್ಯಕ್ರಮವನ್ನು ತುಳುನಾಡಿನ ಜನಪದ ಆಟ ಚೆನ್ನೆಮಣೆಯನ್ನು ಆಡುವ ಮತ್ತು ಆಟಿಕಳೆಂಜನ ಜೋಳಿಗೆಗೆ ಭತ್ತ, ತೆಂಗಿನಕಾಯಿಯನ್ನು ತುಂಬಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಇಂದು ನಗರ ಜೀವನದಲ್ಲಿ ಬದುಕುತ್ತಿರುವ ನಾವು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಲ್ಲಿ ಆಚರಣೆ, ಸಂಪ್ರದಾಯಗಳನ್ನು ಮರೆಯುತ್ತಿದ್ದೇವೆ. ಇಂತಹ ಆಚರಣೆಗಳು ಯುವ ಜನಾಂಗಕ್ಕೆ ನಮ್ಮ ಹಿರಿಯರ ಜೀವನಕ್ರಮವನ್ನು, ಸಂಸ್ಕೃತಿಯನ್ನು ತೆರೆದಿಡುವಲ್ಲಿ ಸಹಕಾರಿಯಾಗಲಿದೆ. ಅದರಲ್ಲೂ ವಿಶೇಷವಾಗಿ ಆಷಾಢದ ಸುಮಾರು 42 ಬಗೆಯ ವಿಶೇಷ ಖಾದ್ಯಗಳನ್ನು ದೆಹಲಿ ತುಳುವರು ತಯಾರಿಸಿರುವುದು ಅಚ್ಚರಿ ತಂದಿದೆ. ಹಿಂದಿನ ಕಾಲದಲ್ಲಿ ಆಷಾಢ ತಿಂಗಳಲ್ಲಿ ಬಡತನವನ್ನು ಅನುಭವಿಸುವ ಕಾಲ ಎದುರಾದರೂ ಪ್ರಕೃತಿಯು ಮನುಷ್ಯನ ಕೈ ಬಿಡುತ್ತಿರಲಿಲ್ಲ. ಪ್ರಕೃತಿಯಲ್ಲಿರುವ ಎಲೆ, ಗಡ್ಡೆ, ಕಾಂಡ, ಹಣ್ಣುಗಳನ್ನು ತಿಂದು ತನ್ನ ಹಸಿವನ್ನು ನೀಗಿಸಿಕೊಳ್ಳುತ್ತಿದ್ದ ಕಾಲವದು ಎಂದು ಹೇಳಿದರು.



ತುಳುವರ ಆಷಾಢ ತಿಂಗಳ ಹಿನ್ನೆಲೆ, ಮಹತ್ವದ ಕುರಿತು ಮಾತನಾಡಿದ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಮತ್ತು ಯೋಜನಾ ವಿಭಾಗದ ಪ್ರಾಧ್ಯಾಪಕ ಡಾ. ರಮೇಶ್ ಸಾಲ್ಯಾನ್ ಅವರು ಹಿಂದಿನ ಕೃಷಿಪ್ರಧಾನ ಕುಟುಂಬದಲ್ಲಿ ಫೆಬ್ರವರಿ, ಮಾರ್ಚ್, ಎಪ್ರಿಲ್ ತಿಂಗಳಲ್ಲಿ ದುಡಿದು ಸಂಪಾದಿಸುತ್ತಿದ್ದ ಸಂಪನ್ಮೂಲಗಳೆಲ್ಲ ಕೃಷಿ ಸಂಬಂಧಿತ ಕಾರ್ಯಗಳಿಗೆ ಖರ್ಚಾಗುತ್ತಿತ್ತು. ಜುಲೈ ತಿಂಗಳ ಕೊನೆಯಲ್ಲಿ ಕೃಷಿಯ ಎಲ್ಲ ಕಾರ್ಯಗಳು ಮುಗಿಸಬೇಕಿತ್ತು. ಜೂನ್ ಮತ್ತು ಜುಲೈ ತಿಂಗಳಲ್ಲಿ ಮನೆ ಖಾಲಿಯಾಗಿರುತ್ತಿತ್ತು. ಹಲಸಿನ ಅನೇಕ ಬಗೆಯ ಖಾದ್ಯಗಳನ್ನು ಆಷಾಢ ತಿಂಗಳಿಗೆ ತೆಗೆದಿಡುತ್ತಿದ್ದರು. ಆಷಾಢ ಕಷ್ಟದ ಕಾಲವಾಗಿತ್ತು ಹೊರತು ಅನಿಷ್ಟದ ಕಾಲವಾಗಿರಲಿಲ್ಲ. ದೆಹಲಿಯಲ್ಲಿ ಇಂತಹ ಆಚರಣೆಗಳು ನಮ್ಮೂರಿನ ಜೊತೆಗಿನ ಸಂಬಂಧವನ್ನು ಉಳಿಸಿ ಬೆಳೆಸಲು ಕಾರಣವಾಗಲಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ದೆಹಲಿ ತುಳುಸಿರಿ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ದೆಹಲಿಯಲ್ಲಿ ತುಳುವಿಗಾಗಿ ಶ್ರಮಿಸಿದ ಹಿರಿಯರನ್ನು ಮೊದಲಾಗಿ ನಾವೆಲ್ಲರೂ ಸ್ಮರಿಸಬೇಕು. ದೆಹಲಿಯಲ್ಲಿರುವ ತುಳು ಸಹೃದಯರ ಸಹಕಾರದಿಂದ ಇಂತಹ ಅರ್ಥಪೂರ್ಣ ಕಾರ್ಯಕ್ರಮಗಳು ನಡೆಯುತ್ತಿವೆ. ತುಳುನಾಡಿನ ಆಚಾರ, ವಿಚಾರ, ಪರಂಪರೆ ಅನೇಕ ವಿಶಿಷ್ಟತೆ ಮತ್ತು ಜೀವನ ಸಂದೇಶಗಳನ್ನು ಹೊಂದಿದ್ದು, ಇದನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದರು.

ವೇದಿಕೆಯನ್ನು ಹಸಿರು ತೋರಣದ ಸಾಂಪ್ರದಾಯಿಕ ಶೈಲಿಯಲ್ಲಿ ಸಿಂಗರಿಸಲಾಗಿತ್ತು. ತುಳುನಾಡಿನ ಸಾಂಪ್ರದಾಯಿಕ ಜನಜೀವನದ ಹಿರಿಮೆಯನ್ನು ನೆನಪಿಸುವ ಹಳೆಯ ಪರಿಕರಗಳನ್ನು ಪ್ರದರ್ಶನಕ್ಕೆ ಇರಿಸಲಾಗಿದ್ದು, ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿತ್ತು. ಗಣ್ಯರಿಗೆ ವೀಳ್ಯದೆಲೆ, ಅಡಿಕೆ, ಹಿಂಗಾರ ನೀಡಿ ಸ್ವಾಗತಿಸಲಾಯಿತು. ಆಗಮಿಸಿದ ಎಲ್ಲರಿಗೂ ಓಲೆಬೆಲ್ಲ, ನೀರು ನೀಡಿ ಸ್ವಾಗತ ಮಾಡಲಾಯಿತು. ತುಳುನಾಡಿನಲ್ಲಿ ಆಟಿ ತಿಂಗಳಲ್ಲಿ ವಿಶೇಷವಾಗಿ ತಯಾರಿಸುವ ಸುಮಾರು 42 ಬಗೆಯ ವಿಶೇಷ ಖಾದ್ಯಗಳನ್ನು ದೆಹಲಿ ಹಾಗೂ ಎನ್‌ಸಿಆರ್ ತುಳುವರು ತಮ್ಮ ತಮ್ಮ ಮನೆಯಲ್ಲಿಯೇ ತಯಾರಿಸಿ ಸುಮಾರು 280 ಜನರಿಗೆ ಉಣಬಡಿಸಿದರು. ಇದೇ ಸಂದರ್ಭದಲ್ಲಿ ತುಳುನಾಡಿನ ಜನಪದ ಆಟಗಳನ್ನು ಆಯೋಜಿಸಲಾಗಿತ್ತು.

ಶ್ರೀಮತಿ ಶುಭ ದೇವಿಪ್ರಸಾದ್, ಶ್ರೀಮತಿ ಚೈತ್ರಾ ತೋಳ್ಪಾಡಿ, ಮೆಲ್ವಿನ್ ಮತ್ತು ಬಳಗ ತುಳು ಜನಪದ ಗೀತೆಗಳನ್ನು, ಹರ್ಷಿತಾ ಕುಶಾಲಪ್ಪ, ರವಿ ಮೂಡಬಿದಿರೆ ಹಾಗೂ ಬಳಗ ಕಂಗಿಲು ಕುಣಿತವನ್ನು ಪ್ರಸ್ತುತಪಡಿಸಿದರು. ಪ್ರಸನ್ನ ಸಾಲ್ಯಾನ್ ಐ.ಇ.ಎಸ್., ಹರೀಶ್ ಕುಮಾರ್ ಐ.ಇ.ಎಸ್., ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಿ.ಕೆ. ಬಸವರಾಜು, ಗೌರವ ಕಾರ್ಯದರ್ಶಿ ಟಿ.ಎಂ. ವೈಲಾರಪ್ಪ, ದೆಹಲಿ ತುಳುಸಿರಿಯ ಉಪಾಧ್ಯಕ್ಷರುಗಳಾದ ಶ್ರೀಮತಿ ಮಾಲಿನಿ ಪ್ರಹ್ಲಾದ್, ಪ್ರದೀಪ್ ರಾವ್, ಖಜಾಂಚಿ ನಾಗರಾಜ್ ಎಂ. ಹಾಗೂ ಗಣ್ಯರು ಉಪಸ್ಥಿತರಿದ್ದರು. ಕಾರ್ಯದರ್ಶಿ ಅರವಿಂದ ಬಿಜೈ ಸ್ವಾಗತಿಸಿದರು. ದೆಹಲಿ ತುಳುಸಿರಿ ಸದಸ್ಯೆ ಶ್ರೀಮತಿ ಅಶ್ವಿತಾ ಮಿಥೇಶ್ ಶೆಟ್ಟಿ ವಂದನೆಗಳನ್ನು ಅರ್ಪಿಸಿದರು. ಜೊತೆ ಕಾರ್ಯದರ್ಶಿ ಪ್ರಕಾಶ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ❑

**ಅರವಿಂದ ಬಿಜೈ**
ಕಾರ್ಯದರ್ಶಿ, ದೆಹಲಿ ತುಳುಸಿರಿ

# ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು ಅವರೊಂದಿಗೆ ವಿದ್ಯಾರ್ಥಿಗಳ ಸಂವಾದ



ಭಾರತೀಯ ವೈದ್ಯಕೀಯ ಸಂಘದ ರಾಷ್ಟ್ರ ಘಟಕದ ವತಿಯಿಂದ ರಾಷ್ಟ್ರೀಯ ವೈದ್ಯರ ದಿನಾಚರಣೆಯ ಅಂಗವಾಗಿ 2025ರ ಡಾ. ಬಿ.ಸಿ. ರಾಯ್ ಸ್ಮಾರಕ ರಾಷ್ಟ್ರೀಯ ಸಮುದಾಯ ಸೇವಾ ಪುರಸ್ಕಾರ ಪಡೆದ ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು ಅವರೊಂದಿಗೆ ವಿದ್ಯಾರ್ಥಿಗಳ ಸಂವಾದ ಹಾಗೂ ಅಭಿನಂದನಾ ಕಾರ್ಯಕ್ರಮವನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಇತ್ತೀಚೆಗೆ ಆಯೋಜಿಸಲಾಗಿತ್ತು.

ಸಂವಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಡಾ. ಎಂ. ಅಣ್ಣಯ್ಯ ಅವರು ಕೊರೊನಾ ಲಸಿಕೆಯ ಹಾಗೂ ವೈದ್ಯಕೀಯ ಚಿಕಿತ್ಸೆಗಳ ಬಗ್ಗೆ ನಮ್ಮಲ್ಲಿರುವ ತಪ್ಪು ಕಲ್ಪನೆಗಳನ್ನು ದೂರೀಕರಿಸಬೇಕು. ಜಿವನ್‌ನಿಂದಾಗಿ ದೇಹದ ಮೇಲಾಗುವ ಅಡ್ಡ ಪರಿಣಾಮಗಳ ವಿವರಿಸುತ್ತ, ಸದೃಢ ಆರೋಗ್ಯಕ್ಕಾಗಿ ಸೈಕ್ಲಿಂಗ್, ಈಜುವುದು ಉಪಯುಕ್ತ ಎಂದರು. ಹದಿಹರೆಯದಲ್ಲಿ ಒಡಮೂಡುವ ಸಮಸ್ಯೆಗಳು ಹಾಗೂ ಪರಿಹಾರ ಮಾರ್ಗಗಳನ್ನು ಸೂಚಿಸುತ್ತಾ ದೈನಂದಿನ ಜೀವನಕ್ರಮದಲ್ಲಿ ಆಹಾರಕ್ರಮದ ಪಿರಮಿಡ್ ಚಿತ್ರವನ್ನು ಪ್ರದರ್ಶಿಸಿ ಪರಿಪೂರ್ಣ ಆರೋಗ್ಯಕ್ಕಾಗಿ ಅಗತ್ಯವಿರುವ ಆಹಾರದ ಬಗ್ಗೆ ತಿಳಿಸಿದರಲ್ಲದೇ ಜೀವನದಲ್ಲಿ ಧನಾತ್ಮಕ ಚಿಂತನೆಯನ್ನು ಮೈಗೂಡಿಸಿಕೊಂಡು ವಿದ್ಯಾರ್ಥಿಗಳು ಮುನ್ನಡೆಯಬೇಕು ಎಂದರು.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು ಅವರನ್ನು ಅಭಿನಂದಿಸಲಾಯಿತು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕ ಉಮೇಶ್ ಬಿ. ಆರ್., ಪ್ರಾಂಶುಪಾಲ ಶ್ರೀ ಪ್ರಶಾಂತ ಕುಮಾರ್, ಉಪಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ. ಉಪಸ್ಥಿತರಿದ್ದರು. ಅತಿಥಿ ಪರಿಚಯಗೈದ ರಾಜ್ಯಶಾಸ್ತ್ರ ಉಪನ್ಯಾಸಕ ಶ್ರೀ ನಾಗರಾಜ ಎಂ. ಮತ್ತು ಕನ್ನಡ ಶಿಕ್ಷಕ ಶ್ರೀ ಅರವಿಂದ ಬಿಜ್ಜೈ ಕಾರ್ಯಕ್ರಮ ಸಂಯೋಜಿಸಿದ್ದರು. ವಿದ್ಯಾರ್ಥಿಗಳಾದ ವಾಣಿ ಬೆನ್ನೂರ್ ಸ್ವಾಗತಿಸಿದರು. ಅನ್ನು ಜ್ಹಾ ವಂದನೆಗಳನ್ನು ಅರ್ಪಿಸಿದರು. ಮಾನ್ವಿ ಪಂತ್, ನಿಶಾ ಗೋಲಾ, ಕುಂದನ್, ವಿನೀತ್, ಸಾಕ್ಷಿ ಶರ್ಮ ಪ್ರಾರ್ಥನೆ ಗೀತೆ ಹಾಡಿದರು. ಶಿವಾನಿ ಯಾದವ್ ಕಾರ್ಯಕ್ರಮ ನಿರೂಪಿಸಿದರು. ❑

**ಅರವಿಂದ ಬಿಜ್ಜೈ**

# ಜನಕಪುರಿ ಕನ್ನಡ ಕೂಟ ಮತ್ತು ಮಹಿಳಾ ಮಂಡಳಿ ವತಿಯಿಂದ ಶ್ರೀ ಗಣಪತಿ ಪೂಜಾ ಕಾರ್ಯಕ್ರಮ



ಜನಕಪುರಿ ಕನ್ನಡ ಕೂಟದ ವತಿಯಿಂದ ಪ್ರತಿ ವರ್ಷದಂತೆ ಶ್ರೀ ಮಹಾ ಗಣಪತಿ ಪೂಜೆಯನ್ನು ಜನಕಪುರಿಯ ಶ್ರೀ ರಾಮಮಂದಿರದಲ್ಲಿ ಶ್ರದ್ಧಾ ಭಕ್ತಿಯಿಂದ ವಿಜೃಂಭಣೆಯಾಗಿ 31 ನೇ ಆಗಸ್ಟ್, 2025 ರಂದು ಆಚರಿಸಲಾಯಿತು.

ಶ್ರೀ ಅಶೋಕ ಹಣಮಸಾಗರ್ ಅವರ ಪೌರೋಹಿತ್ಯದಲ್ಲಿ ಡಾ. ಕಿರಣ್ ಡಂಬಲ್ಕರ್ ದಂಪತಿಗಳು ಶಾಸ್ತ್ರೋಕ್ತವಾಗಿ ಪೂಜೆ ನೆರವೇರಿಸಿದರು.

ಪೂಜೆಯ ಸಮಯದಲ್ಲಿ ಜನಕಪುರಿ ಮಹಿಳಾ ಮಂಡಳಿಯ ಸದಸ್ಯೆಯರಿಂದ ಗಣಪತಿ ಭಕ್ತಿ ಗೀತೆಗಳ ಕಾರ್ಯಕ್ರಮ ಉತ್ತಮವಾಗಿ ಮೂಡಿ ಬಂದಿತು. ಪುಟ್ಟ ಮಕ್ಕಳಿಂದ ಗಣೇಶ ವಂದನಾ ನೃತ್ಯ ಮತ್ತು ಶ್ಲೋಕಗಳನ್ನು ಸ್ತುತಿಸಲಾಯಿತು. ಅಲ್ಲದೇ ಕೂಟದ ಸದಸ್ಯರಾದ ಶ್ರೀ ಅಶೋಕ ಹಣಮಸಾಗರ್, ಡಾ. ಸಂಜಯ್, ಡಾ. ಅಶೋಕ ಈಟಿ ಮತ್ತು ಶ್ರೀ ಕೃಷ್ಣ ರಾಜ್‌ರವರು ಕೂಡ ಭಕ್ತಿಗೀತೆಗಳನ್ನು ಹಾಡಿದರು.

ತದ ನಂತರ ಕೂಟದ ಅಧ್ಯಕ್ಷರಾದ ಡಾ. ಅಶೋಕ ಈಟಿ ಅವರು ಪೂಜೆಗೆ ದೇಣಿಗೆ ನೀಡಿದ ಸದಸ್ಯರುಗಳಿಗೆ ಧನ್ಯವಾದ ಅರ್ಪಿಸಿದರು. ದೆಹಲಿಯಿಂದ ಹೊರಗಿರುವ ಕೂಟದ ಸದಸ್ಯರು ಧಾರಾಳವಾಗಿ ದೇಣಿಗೆ ನೀಡಿದ್ದನ್ನು ಹೊಗಳಿದರು. ಕೂಟದ ಕಾರ್ಯದರ್ಶಿ ಡಾ. ಬಸವರಾಜ ಅವರು ಭಗವಂತನ ಮೂರ್ತಿಯನ್ನು ಪ್ರಾಯೋಜಿಸಿದರು.

ಅವರೊಡನೆ ಅಮೇರಿಕಾದಲ್ಲಿರುವ ಕೂಟದ ಹಿರಿಯ ಸದಸ್ಯರಾದ ಶ್ರೀ ಕೆ.ಎಸ್.ಜಿ. ಶೆಟ್ಟಿ ಸಹಾ ಪ್ರತಿ ವರ್ಷದಂತೆ ಈ ಬಾರಿಯೂ ಸಹಾಯ ಮಾಡಿದರು. ನೆರೆದಿದ್ದ ಸದಸ್ಯರುಗಳಿಗೆ ನೈವೇದ್ಯದ ರೂಪದಲ್ಲಿ ರುಚಿರುಚಿಯಾದ ಭೋಜನವನ್ನು ಏರ್ಪಡಿಸಲಾಗಿತ್ತು.

ಕೊನೆಯಲ್ಲಿ ಗಣಪನ ಸ್ತುತಿ ಮಾಡುತ್ತಾ ಮೂರ್ತಿಯ ವಿಸರ್ಜನೆ ಮಾಡಲಾಯಿತು. ಕಾರ್ಯಕ್ರಮಕ್ಕೆ ಶ್ರಮಿಸಿದ ಕೂಟದ ಕಾರ್ಯಕಾರಿ ಸಮಿತಿ ಸದಸ್ಯರುಗಳಿಗೆ ಹಾಗೂ ಪ್ರತಿ ಕಾರ್ಯದಲ್ಲೂ ಹೆಗಲು ಕೊಟ್ಟು ನಿಲ್ಲುವ ಜನಕಪುರಿ ಮಹಿಳಾ ಮಂಡಳಿ ಸದಸ್ಯರುಗಳಿಗೆ ಅನಂತಾನಂತ ಧನ್ಯವಾದಗಳು. ❑

**ಡಾ. ಅಶೋಕ ಎಂ. ಈಟಿ**

Delhi Karnataka Sangha Abhimata
August-2025, Vol. No.35, Issue No.11, Price Rs.1/-
RNI Regn. No. 53405/91, DL-SW-01/4016/22-24
Date of Publication : August 8th / 9th, Posting Date : 10th / 11th, Total Pages-28 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: K.Sreenivasa Murthy



ದಿನಾಂಕ 02.08.2025 ರಂದು ಸಂಘದ ಪದಾಧಿಕಾರಿಗಳು, ಸದಸ್ಯರು, ನವದೆಹಲಿ ಕರ್ನಾಟಕ ಭವನದ ಸಹೋದ್ಯೋಗಿಗಳು ಮತ್ತು ಕುಟುಂಬದ ಸದಸ್ಯರೊಂದಿಗೆ ಸೇವಾ ನಿವೃತ್ತರಾಗಿ ತಾಯ್ನಾಡಿಗೆ ತೆರಳುತ್ತಿರುವ ಶ್ರೀ ರವಿ ಕೆ. ಅವರನ್ನು ಅಭಿನಂದಿಸಿ ಬೀಳ್ಕೊಡಲಾದ ದೃಶ್ಯ.



ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದ ಕರ್ನಾಟಕ ಮೂಲದ ಹ್ಯೂಮನ್ ಕಂಪ್ಯೂಟರ್ ಮೂರಂಕಿ ಮಗ್ಗಿಯನ್ನು ನೀರು ಕುಡಿದಂತೆ ಹೇಳುತ್ತಾ ಗಣಿತದಲ್ಲಿ ಚಮತ್ಕಾರ ಮಾಡಿ ತೋರಿಸಿದ ಅಪ್ಪಟ ಕನ್ನಡಿಗ ಶ್ರೀ ಬಸವರಾಜ್ ಉಮ್ರಾಣಿ ಅವರನ್ನು ದಿನಾಂಕ 13.08.2025 ರಂದು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಹಾಗು ಸಂಘದ ಸದಸ್ಯರು ಅಭಿನಂದಿಸಿದ ಕ್ಷಣ.